
ಕಲ್ಯಾಣ ಕಿರಣ

ಬೆಲೆ : 3 ರೂ.

ಏಪ್ರಿಲ್,
1994



ಕಲ್ಯಾಣ ಕಿರಣ

ಮಾಸ ಪತ್ರಿಕೆ, ಏಪ್ರಿಲ್-1994, ಬಿಡಿ ಸಂಚಿಕೆ 3-00 ರೂ.

ಸಂಪುಟ : 22 ಸಂಚಿಕೆ : 10 ಬಸವ ಶಕೆ : 888,
ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300-00

ಕಿರಣಗನ್ನಡಿ

ಮುಖಪುಟ : ಮಾರ್ಚ್ 94 ಕ್ಕೆ 49 ತುಂಬಿದ ಪೂಜ್ಯ ಮಾತಾಜಿ-ಯವರಿಗೆ ಕಲ್ಯಾಣ ಕಿರಣದ ಶುಭಾಶಯುಗಳು.

ಹೊದ್ದಿಕೆಯ 4 ನೇ ಪುಟ : ಕೂಡಲ ಸಂಗಮದಲ್ಲಿರುವ, ಅಕ್ಕನಾಗಲಾಂಬಿಕಾ ಶರಣ ಧಾಮ, ಬಸವ ಧರ್ಮ ಪೀಠ.

ಬೆಂಗಳೂರು ವಿಳಾಸ : ಕಲ್ಯಾಣ ಕಿರಣ ಮಾಸ ಪತ್ರಿಕೆ, ಬಸವ ಮಂಟಪ, 2035, 2ನೇ ಬ್ಲಾಕ್, 20 ನೇ ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು-10, ದೂರವಾಣಿ : 3325335

ಮಾತೆಗೆ ನುಡಿ ಕಾಣಿಕೆ

ಜನ್ಮದಿನವ ಆಚರಿಸುವೆ ನಾನಿಂದು
ಮಾರ್ಚ್ ತಿಂಗಳ ಹದಿಮೂರರಂದು
ಜನ್ಮ ಜನ್ಮದಲಿ ಇಂಥ ಗುರುವೆ ಸಿಗಲೆಂದು
ಕರ್ತನ ಬೇಡುವೆ ನಾನಿಂದು ॥

ಮಾತೆಯಂತೆ ಮಮತೆಯ ತೋರುವ
ತಂದೆಯಂತೆ ಬುದ್ಧಿಯ ಕಲಿಸುವ
ಗುರುವಿನಂತೆ ಜ್ಞಾನವ ನೀಡುವ
ಬದುಕುವ ಬಗೆಯನು ಕಲಿಸುವ
ಗುರುವು ಸಿಗಲಿ ಹೀಗೆ ಎಂದೆಂದೂ ॥

ಮಂಗಳ ಮೂರ್ತಿಯ ಮನದಲಿ ಸ್ಮರಿಸಿ
ಗುರುವಿನ ಆದರ್ಶವ ಶಿರದಲಿ ಧರಿಸಿ
ಬಾಳಿನ ಎಡೆಯನು ಪಾದಕೆ ಅರ್ಪಿಸಿ
ಬೆಳೆಯಲಿ ಕೀರ್ತಿಯು ಎಂದು ಬಯಸಿ
ಆಚರಿಸುವೆ ಜನ್ಮ ದಿನವ ನಾನಿಂದು ॥

—ಸೋದರಿ ಕಸ್ತೂರಿ, ಕಲ್ಯಾಣ ಕಿರಣ

ನಡೆಯ ಕಲಿಸಿದ ಬಸವ, ನುಡಿಯ ಕಲಿಸಿದ ಬಸವ
ಆ ನಡೆ ನುಡಿಗಳನ್ನು ಮರೆತು, ಜಂಜಡದಲ್ಲಿ ಸಿಲುಕಿ
ಕಂಡ ಕಂಡ ದೈವಗಳಿಗೆ ಶರಣು ಹೋಗುತ್ತಿದ್ದಾಗ
'ಬಸವ ಜ್ಯೋತಿ' ಯನ್ನು ಮತ್ತೆ ಹೊತ್ತಿಸಿದಿರಿ.
ನಮ್ಮ ಮನೆ-ಮನಗಳಲ್ಲಿ
ಆಚಾರ ಕಲಿಸಿದಿರಿ-ವಿಚಾರ ಮಥನ, ಶಿಬಿರ,
ಶರಣ ಮೇಳಗಳಿಂದ
ವಿಚಾರ ಕಲಿಸಿದಿರಿ-ಪುಸ್ತಕ ಪ್ರವಚನಗಳಿಂದ
ಪೂರ್ವ ಜನ್ಮದ ಪುಣ್ಯದಿಂದ ಈ ಧರ್ಮದಲ್ಲಿ ಹುಟ್ಟಿದೆವು
ಅದೇ ಪುಣ್ಯದಿಂದ ನಿಮ್ಮಂತಹ 'ಮಾತೆ' ಯನ್ನು ಪಡೆದಿಹೆವು

—ಎ. ಎಸ್. ರಾಜಶೇಖರ-ಸರ್ವಮಂಗಳಾ
ಪ್ರೇಮ ಸ್ವರೂಪ, ಹಾಸನ.

ಗದುಗಿನ ಶ್ರೀ ತೋಂಟದ ಸಿದ್ಧಲಿಂಗ ಶ್ರೀಗಳು ಗಮನಿಸುವರೇ? …………ನಂತರ ಉತ್ತರಿಸುವರೇ ?

ಗದಗ. ದಿನಾಂಕ ೨೨–೧–೧೯೯೪ ರ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಬಂದ ವರದಿಯುನ್ನು ಗಮನಿಸಿ ಇದನ್ನು ಬರೆಯುತ್ತಿದ್ದೇವೆ. ತಮಗೆ ಗೌರವ ಡಾಕ್ಟರೇಟ್ ದೊರೆತದ್ದಕ್ಕಾಗಿ ಅಭಿನಂದಿಸಲು ನಡೆದ "ಗುರುವಂದನಾ" ಕಾರ್ಯಕ್ರಮುದಲ್ಲಿ ಮಾತನಾಡುತ್ತ "ಡಂಭಾಚಾರದ ಪರಂಪರೆ ತ್ಯಜಿಸಲು ಕರೆಕೊಟ್ಟು ಕೆಲ ಮಠಾಧೀಶ್ವರರಿಗೆ ಅವಹೇಳನಕರ ಮಾತುಗಳನ್ನಾಡಿ ಅವರ ಶಿಷ್ಯರ ಮನವನ್ನು ನೋಯಿಸಿದ್ದೀರಿ. ಅದಕ್ಕಾಗಿ ಈ ಮಾತುಗಳನ್ನು ನಿಮ್ಮ ಮುಂದೆ ಇಡುತ್ತಿದ್ದೇವೆ.

೧೯೭೪ ಜುಲೈ ತಿಂಗಳು ನೀವು ಶ್ರೀ ತೋಂಟದಾರ್ಯ ಮಠಕ್ಕೆ ಸ್ವಾಮಿಗಳಾಗಿ ಬರುವುದಕ್ಕಿಂತ ಮೊದಲು ಬಿಜಾಪೂರ ಜಿಲ್ಲಾ ಸಿಂದಗಿ ಹಿರೇಮಠದ ನಿಯೋಜಿತ ಉಪಚಾರ್ಯರಾಗಿ ಶ್ರೀ ಸಿದ್ಧರಾಮ ದೇವರೆಂಬ ನಾಮದಿಂದ ಪರಿಚಿತರಾಗಿದ್ದೀರಿ. ಈ ಮಠ ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಪುತ್ರ ವರ್ಗದ ಮಠವಾಗಿದೆ. ನಿಮ್ಮ ಚಿಕ್ಕಪ್ಪ ಶ್ರೀ ಶಾಂತವೀರ ಪಟ್ಟಾಧ್ಯಕ್ಷರು ಆ ಮಠದ ಅಧ್ಯಕ್ಷರಾಗಿದ್ದು ನಿಮ್ಮನ್ನು ಉತ್ತರಾಧಿಕಾರಿಯೆಂದು ನಿಯೋಜಿಸಿದ್ದರು. ಆ ಅವಧಿಯಲ್ಲಿ ನೀವು ೧೯೭೩ ರ ಮೇ ತಿಂಗಳಲ್ಲಿ ಹುಬ್ಬಳ್ಳಿ ತಾಲೂಕ ಸುಳ್ಳದ ಪಂಚಗೃಹ ಹಿರೇಮಠದ ಪಟ್ಟಾಧಿಕಾರ ಸಮಯದಲ್ಲಿ ನೀವು ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯರ ಹಾಗೂ ಶ್ರೀ ರಂಭಾಪುರಿ ಪೀಠದ ಶ್ರೀ ಜಗದ್ಗುರು ವೀರಗಂಗಾಧರ ಶಿವಾಚಾರ್ಯರ ಸಾನಿಧ್ಯದಲ್ಲಿ ನಡೆದ ಸಭೆಯಲ್ಲಿ ಪಂಚಾಚಾರ್ಯರ ಪರಂಪರೆ ; ವೀರಶೈವ ಧರ್ಮದ ಪ್ರಾಚೀನತೆಯ ಬಗೆಗೆ ಮಾತನಾಡಿದ್ದನ್ನು ನೀವು ನೆನಪಿಸಿಕೊಳ್ಳಬೇಕು. ಅದರಂತೆ ೧೯೭೪ ರ ಜುಲೈ ತಿಂಗಳಲ್ಲಿ ಗದುಗಿನ ಶ್ರೀ ತೋಂಟದಾರ್ಯ ಮಠಕ್ಕೆ ಸ್ವಾಮಿಗಳಾಗಿ ಪಟ್ಟಾಧಿಕಾರ ವಹಿಸಿಕೊಂಡನಂತರ ನಡೆದ ಸಭೆಯಲ್ಲಿ ಪಂಚಾಚಾರ್ಯರ ಬಗೆಗೆ ಶ್ರೀ ಯಡೆಯೂರ ಸಿದ್ಧಲಿಂಗೇಶ್ವರರ ಬಗೆಗೆ ಹಾಗೂ ಜಗಜ್ಯೋತಿ ಬಸವೇಶ್ವರರ ಬಗೆಗೆ ಸರಿಯಾಗಿ ಮಾತನಾಡಿದಿರಿ. ಮುಂದೆ ೧೯೭೫ ಮಾರ್ಚ ತಿಂಗಳಲ್ಲಿ ನಿಮ್ಮ ಮಠದಲ್ಲಿಯೇ ವೀರಶೈವ ಧರ್ಮ ಸ್ಥಾಪನಾಚಾರ್ಯ ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತಿಯನ್ನು ಆಚರಿಸಿದಿರಿ. ಅಂದಿನ ಭಕ್ತಿ ಸೇವೆಯನ್ನು ದಿವಂಗತ ಶ್ರೀ ಜಿ. ಎಸ್. ಮಾನ್ವಿಯವರು ವಹಿಸಿದ್ದರು.

ನೀವು ತೋಂಟದಾರ್ಯ ಮಠದ ಪಟ್ಟಾಧಿಕಾರ ವಹಿಸಿಕೊಂಡ ದಿನ ಅಡ್ಡಪಲ್ಲಕ್ಕಿಯಲ್ಲಿಯೇ ಮೆರೆದಿರಿ. ಇದು ಅಲ್ಲದೆ ಅನೇಕ ವರ್ಷ ನೀವು ಭಕ್ತರ ಮನೆಗೆ ಪೂಜೆ ಪ್ರಸಾದಕ್ಕೆ ದಯಮಾಡಿಸುವಾಗ್ಗೆ ನಿಮ್ಮ ಮಠದ ಪರಂಪರೆಯಂತೆ ಕಟ್ಟಿಗೆಯ ಮೇಣೆಯಲ್ಲಿ ಕೂಡ್ರುತ್ತಿದ್ದಿರಿ. ಭಕ್ತರು ನಿಮ್ಮನ್ನು ಹೆಗಲಮೇಲೆ ಹೊತ್ತುಕೊಂಡು ಹೋಗುತ್ತಿದ್ದರು. ಆವಾಗ್ಗೆ ಇದನ್ನೆಲ್ಲ ಮಾಡಿದ ನೀವು ಇಂದು ಅಡ್ಡಪಲ್ಲಕ್ಕಿಯಲ್ಲಿ ಕುಳಿತವರನ್ನು ಟೀಕಿಸಲು ಹೊರಟಿರುವಿರಿ. ಈ ದ್ವಂದ್ವ ನೀತಿ ಏಕೆ ? ಅಡ್ಡಪಲ್ಲಕ್ಕಿ ಹೊತ್ತದ್ದಕ್ಕಾಗಿ ಲಾತೂರಿನಲ್ಲಿ ಭೂಕಂಪವಾಯಿತೆಂಬ ನಿಮ್ಮ ಹೇಳಿಕೆಯನ್ನು ನೋಡಿ ಇದನ್ನು ಯಾವ ಮಾತಿನಿಂದ ಖಂಡಿಸಬೇಕೆಂಬುದೇ ತಿಳಿಯಲೊಲ್ಲದು. ಎಂ. ಎ. ಪದವೀಧರರಾದ ನೀವು ಭೂಕಂಪ ಹೇಗಾಗುತ್ತದೆ ಎಂಬ ಭೌಗೋಲಿಕ ಜ್ಞಾನವಾದರೂ ಬೇಡವೇ ? ಅಮೇರಿಕೆಯಲ್ಲಿ ಹೋದ ತಿಂಗಳು ಭೂಕಂಪ ಆಯಿತು. ಚೀನದಲ್ಲಿ ಹೋದ ವಾರ ಲಘು ಭೂಕಂಪವಾಯಿತು. ಹಾಗಾದರೆ ಅಲ್ಲಿ ಯಾರ ಅಡ್ಡಪಲ್ಲಕ್ಕಿ ಉತ್ಸವ ಆಗಿತ್ತು. ತಿಳಿಸುವಿರಾ ? ಗದುಗಿಗೆ ಬಂದು ೧೯ ವರ್ಷ ೬ ತಿಂಗಳ ಅವಧಿಯಲ್ಲಿ ಅನೇಕ ವಿವಾದಾತ್ಮಕ ಹೇಳಿಕೆಯನ್ನು ಕೊಟ್ಟು ವಿವಾದಾತ್ಮಕ ಸ್ವಾಮಿಗಳೆಂದೇ ಪ್ರಸಿದ್ಧರಾಗಿದ್ದೀರಿ. ನಿಮಗೆ ಧಾರ್ಮಿಕ ಸ್ವಾತಂತ್ರವಿದೆಯೆಂದು ಬೇರೊಬ್ಬರ ಧಾರ್ಮಿಕ ವಿಧಿ, ವಿಧಾನಗಳ ಬಗೆಗೆ ಟೀಕಿಸಿ ಅವರ ಧಾರ್ಮಿಕ ಸ್ವಾತಂತ್ರವನ್ನು ಅಪಹರಣ ಮಾಡುವದು ನಿಮ್ಮ ಕರ್ತವ್ಯವಲ್ಲ. ನೀವು ಕೆಲವೊಂದು ಸಲ ಆಸ್ತಿಕ ಮನೋಭಾವನೆಯುಳ್ಳವರಾಗಿ, ಕೆಲವುಸಲ ನಾಸ್ತಿಕರಾಗಿ ಕೆಲವುಸಲ ದಾರ್ಶನಿಕರಾಗಿ ಕಮ್ಯುನಿಷ್ಟರಾಗಿ ಮಾತನಾಡುತ್ತೀರಿ. ನಿಮ್ಮ ಅಭಿಪ್ರಾಯ ವ್ಯಕ್ತ ಪಡಿಸಲು ನೀವು ಸ್ವಾತಂತ್ರರು. ಆದರೆ ನೀವು ಕುಳಿತ ಸ್ಥಾನದ ಬಗೆಗೆ ವಿಚಾರಿಸಿರಿ. ಗದುಗಿನ ಶ್ರೀ ತೋಂಟದಾರ್ಯ ಮಠ ಕರ್ನಾಟಕದ ವೀರಶೈವರಲ್ಲಿಯ ವಿರಕ್ತಪರಂಪರೆಯ ಮಠದಲ್ಲಿಯೇ ಪ್ರಾಚೀನಮಠ. ಸುಮಾರು ೫೦೦ ವರ್ಷಗಳ ಇತಿಹಾಸವನ್ನು ಹೊಂದಿದ ಈ ಮಠಕ್ಕೆ ಸಿದ್ಧಿಯನ್ನು ಪಡೆದ ಸಿದ್ಧಪುರುಷರು, ತ್ರಿಕಾಲ ಜ್ಞಾನಿಗಳು, ಅಧ್ಯಾತ್ಮಜ್ಞಾನದ ಗಾಂಭೀರ್ಯವುಳ್ಳವರೂ, ಪೂಜಾ ದುರಂಧರರು ಮಠದ ಸ್ವಾಮಿಗಳಾಗಿ ಭಕ್ತರ ಉದ್ಧಾರವನ್ನು ಮಾಡಿದ್ದಾರೆ. ಆದರೆ ನಿಮ್ಮ ಆಶೀರ್ವಚನದಲ್ಲಿ ಡಂಬಳದ ಕರ್ತೃ ಶ್ರೀ ಅರ್ಧನಾರೀಶ್ವರರ ಬಗೆಗೆ ಗದುಗಿನ ಮಠದ ಕರ್ತೃ ಶ್ರೀ ಕರಿಬಸವ ಸ್ವಾಮಿಗಳ ಬಗೆಗೆ ಅಲ್ಲದೆ ನಿಮ್ಮ ಹಿಂದಿನ ಪೂರ್ವಜರ ಬಗೆಗೆ ಮಾತಾಡಿದ್ದನ್ನು ಕಂಡಿಲ್ಲ. ಆ ಮಠದ ಬಗೆಗೆ ನಮಗೂ ಭಯ, ಭಕ್ತಿ, ಶ್ರದ್ಧೆ ಇದೆ. ಆ ಮಠದ ಬಗೆಗೆ ಪೂಜ್ಯ ಭಾವನೆಯಿದ್ದರೂ, ನಿಮ್ಮ ವಿವಾದಾತ್ಮಕ ವ್ಯಕ್ತಿತ್ವದಿಂದ ಆನೇಕ ಭಕ್ತರು ನಿಮ್ಮಿಂದ ಹಾಗೂ ಮಠದಿಂದ ದೂರಾಗಿದ್ದಾರೆ. ಒಂದು ವೇಳೆ ನಿಮಗೆ ಕ್ರಾಂತಿಯನ್ನು ಮಾಡಬೇಕೆಂದು ಇಷ್ಟವಿದ್ದರೆ ಶ್ರೀ ತೋಂಟದಾರ್ಯ ಮಠಕ್ಕೆ ಒಬ್ಬ ಯೋಗ್ಯರನ್ನು ಉತ್ತರಾಧಿಕಾರಿಯೆಂದು ಮಾಡಿ ನೀವು ಸ್ವತಂತ್ರರಾಗಿ ಕ್ರಾಂತಿ ಮಾಡಲು ಹಕ್ಕಿದೆ. ಶ್ರೀ ಬಸವಣ್ಣನವರು ಕ್ರಾಂತಿ ಮಾಡಲು ಯಾವುದೇ ಮಠದ ಸ್ವಾಮಿಯಾಗಿದ್ದಿಲ್ಲ. ಜಾಗ್ರುತ ಪೀಠದಲ್ಲಿ ಕುಳಿತು ಇಲ್ಲಸಲ್ಲದ ಹೇಳಿಕೆಗಳನ್ನು ಕೊಡುವದನ್ನು ಬಿಡಿರಿ. ಸ್ವಾಮಿ ಹಾಗೂ ಭಕ್ತರ ಸಂಬಂಧ ತಂದೆ-ಮಗನ

ಸಂಬಂಧವಿದ್ದಂತೆ. ಇಂದು ತಂದೆಯಿಂದ ಮನೆಯ ಕೀರ್ತಿ, ಘನತೆ ಹಾಳಾಗುತ್ತದೆ ಎಂದು ಕಂಡುಬಂದಾಗ ತಂದೆಗೆ ವಿರೋಧಮಾಡಿ ಅವನನ್ನು ಮನೆಯ ಯಜಮಾನಿಕೆ ಯಿಂದ ಕಿತ್ತು ಹಾಕಿದರೂ ಅಧರ್ಮವಲ್ಲ. ಶ್ರೀ ತೋಂಟದಾರ್ಯಮಠ ನಿಮ್ಮ ಪಿತ್ರಾರ್ಜಿತ ಆಸ್ತಿ ಅಲ್ಲ.

ಢಂಬಾಚಾರವೆಂದು ಇನ್ನೊಬ್ಬರಿಗೆ ಹೇಳುವ ನೀವು ನಿಮ್ಮ ನಿತ್ಯ ಜೀವನವೇ ಢಂಬಾಚಾರದಿಂದ ತುಂಬಿದೆ. ವಿರಕ್ತಸ್ವಾಮಿಗಳಾದ ನೀವು ಕಟ್ಟಿಗೆಯ ಗಾಡಿಗಳಲ್ಲಿ ಅಡ್ಡಾಡುವದರ ಬದಲಾಗಿ ಇಂದು ನಾಲ್ಕು ಲಕ್ಷ ಐವತ್ತು ಸಾವಿರ ರೂಪಾಯಿಯ ಕಾರಿನಲ್ಲಿ ಅಡ್ಡಾಡುವದು ಢಂಬಾಚಾರವಲ್ಲವೇ ? ಈ ಕಾರು ಕೊಳ್ಳಲಿಕ್ಕೆ ನಿಮ್ಮ ಸಂಸ್ಥೆಯಲ್ಲಿ ದುಡಿಯುವ ಬಡ ನೌಕರರಿಂದ ಎರಡನೂರು ದಿಂದ ಐದನೂರು ರೂಪಾಯಿಗಳಂತೆ ವಸೂಲು ಮಾಡಿದ್ದೀರಂತೆ. ಇದು ಯಾವ ತತ್ವ. ತತ್ವಗಳು ತತ್ವಗತವಾಗಿ, ವ್ಯಕ್ತಿಗತವಾಗಿ ಬೆಳೆದು ಬಂದರೆ ಅದಕ್ಕೆ ಬೆಲೆ. ಸ್ವಾಮಿಗಳಾದವರು ಏಕಾಂತದಲ್ಲಿ ಕುಳಿತು ಅಂತರ್ಮುಖಿನಾಗಿ ಜ್ಞಾನಸಕ್ತನಾಗಿ ಅಲೌಕಿಕ ಜ್ಞಾನವನ್ನು ಪಡೆದು ಏಕಾಂತದಿಂದ ಲೋಕಾಂತಕ್ಕೆ ಬಂದು ನಿಮ್ಮ ದಿವ್ಯ ಶಕ್ತಿಯಿಂದ ಶಿಷ್ಯರನ್ನು, ಭಕ್ತರನ್ನು ಉದ್ಧರಿಸುವ ಶಕ್ತಿ ಪಡೆದಿರಬೇಕು. ಅದನ್ನು ನೀವು ಪಡೆದಿರುವಿರಾ ? ನಿಮ್ಮ ವಿವಾದಾತ್ಮಕ ಹೇಳಿಕೆಗಳಿಂದ ಗದಗ-ಬೆಟಗೇರಿಯ ವೀರಶೈವರಿಗೆ ನೋವಾಗಿದೆ. ಸಮಾಜದಲ್ಲಿ ಏಕತೆಯನ್ನು ತರಬೇಕಾದ ನೀವೇ ಒಡೆದು ಆಳುವ ನೀತಿಯನ್ನು ಪ್ರಯೋಗಿಸಿ ಸಮಾಜಕ್ಕೆ ಆಘಾತ ಮಾಡಿದ್ದೀರಿ. ಇಂದು ಕರ್ನಾಟಕದಲ್ಲಿ ವೀರಶೈವರಿಗೆ ಅನೇಕ ರೀತಿಯಿಂದ ತೊಂದರೆಯಾಗಿದೆ. ರಾಜಕೀಯ ಕ್ಷೇತ್ರದಲ್ಲಿ ನಮ್ಮ ಅನೈಕ್ಯತೆ-ಯಿಂದ ಅಧಿಕಾರ ಕಳಚಿದೆ. ವೀರಶೈವರು ಸಂಕುಚಿತ ಮನೋಭಾವನೆಯನ್ನು ಬಿಟ್ಟು ನಾವೆಲ್ಲ ಒಂದೆಂಬ ಭಾವನೆಯನ್ನು ಅಂತರಾತ್ಮದಿಂದ ಒಪ್ಪಿ ಮುನ್ನಡೆದರೆ ನಮ್ಮ ಯಶಸ್ಸು. ಆದರೆ ನಿಮ್ಮ ದೊಂದ್ವ ಹೇಳಿಕೆಗಳಿಂದ ನಾವು ಒಂದಾಗುವ ಬದಲಾಗಿ ಕಚ್ಚಾಡುವ ಪರಿಸ್ಥಿತಿಯನ್ನು ನೀವೇ ನಿರ್ಮಾಣ ಮಾಡಿದ್ದೀರಿ. ನಿಮಗೆ ನೀವೇ ಜಾಣರು, ಸರ್ವಜ್ಞರು ಎಂಬ ಹೆಮ್ಮೆ ಇದೆ. ಹಾಗಾದರೆ ನಿಮ್ಮ ಜ್ಞಾನದ ಮಟ್ಟ ಯಾವದು ? ವೇದಗಳನ್ನು ಓದಿದ್ದೀರಾ, ಆಗಮಗಳನ್ನು ತಿಳಿದಿದ್ದೀರಾ, ಉಪನಿಷತ್ತು ಗಳನ್ನು ನೋಡಿದ್ದೀರಾ, ಸಿದ್ಧಾಂತ ಶಿಖಾಮಣಿ, ಭಗವದ್ಗೀತೆಯನ್ನು ಅಭ್ಯಸಿಸಿ-ದ್ದೀರಾ ? ಸ್ವಾಮಿಗಳಾದವರು ಈ ಗ್ರಂಥಗಳಲ್ಲಿಯ ವಿಷಯಗಳನ್ನು ಬೋಧಿಸಬೇಕು. ಬದಲಾಗಿ ನೀವು ವಾರಪತ್ರಿಕೆ, ಮಾಸ ಪತ್ರಿಕೆಯಲ್ಲಿಯ ಕಥೆಗಳನ್ನು ಹೇಳಿ ರಂಜಿಸುತ್ತಿದ್ದೀರಿ. ಇದಕ್ಕೆ ಆಶೀರ್ವಚನವೆನ್ನುವುದಿಲ್ಲ, ಭಾಷಣವೆನ್ನುತ್ತಾರೆ. ನಿಮ್ಮ ಮಾತಿಗೂ ಕೃತಿಗೂ ಅಂತರವಿದೆ. ನಿಮಗೆ ಹಣ ಗಳಿಸುವ, ಆಸ್ತಿ ಮಾಡುವ ಮನೋಭಾವನೆ ಇದೆ. ನೀವು ಏನೇ ಮಾಡಿದರೂ ಅದರಲ್ಲಿ ವ್ಯಾಪಾರೀ ಮನೋಭಾವನೆಯಿದೆ. ನಿರ್ಮಲ ಮನಸ್ಸು ವಿಶಾಲ ಮನೋಭಾವನೆ ಇರದಿದ್ದರೆ ಎಷ್ಟು ಸಾವಿರ ಶಿವಾನುಭವ ಮಾಡಿದರೇನು ? ಎಷ್ಟು ಗ್ರಂಥ ಪ್ರಕಟಿಸಿದರೇನು ? ಎಷ್ಟು ಶಿಕ್ಷಣ ಸಂಸ್ಥೆ ಸ್ಥಾಪಿಸಿ-

ದರೇನು ? ನೀವು ಮಾತನಾಡುತ್ತಾ ಕೆಲವು ಮಠಾಧೀಶ್ವರರು ಹತ್ತೂ ಬೆರಳುಗಳಲ್ಲಿ ಉಂಗುರ, ಜರತಾರಿ ಅರಿವೆ ಧರಿಸುತ್ತಾರೆ ಎಂದು ಟೀಕಿಸಿದ್ದೀರಿ. ಕರ್ನಾಟಕದಲ್ಲಿ ಬಂಗಾರದ ಕಿರೀಟ ಧರಿಸಿ, ಜರತಾರಿ ಅರಿವೆ ಹಾಕಿ. ಸಿಂಹಾಸನಾರೂಢರಾಗುವವರು ಶ್ರೀ ರಂಭಾಪುರಿ, ಶ್ರೀ ಉಜ್ಜಯಿನಿ, ಶ್ರೀ ಕೇದಾರ, ಶ್ರೀಶೈಲ, ಶ್ರೀ ಕಾಶಿ, ಜಗದ್ಗುರುಗಳು ಹಾಗೂ ಸ್ಮಾರ್ಥ ಬ್ರಾಹ್ಮಣ ಪರಂಪರೆಯವರಾದ ಶ್ರಿಂಗೇರಿ ಶಾರದಾ ಪೀಠದ ಜಗದ್ಗುರುಗಳು, ಜಗದ್ಗುರು ಪಂಚಾಚಾರ್ಯರು ವೀರಶೈವ ಧರ್ಮ ಸಾಮ್ರಾಜ್ಯದ ಧರ್ಮ ಗುರುಗಳು ಅವರು ರಾಜಗುರುಗಳು, ಅವರು ಸನ್ಯಾಸಿಗಳಲ್ಲ, ಇಂದು ಕ್ರಿಶ್ಚಿಯನ್ ಧರ್ಮದ ಗುರುಗಳಾದ ಶ್ರೀ ಪೋಪರು ರೋಮದ ವೆಟಿಕನ್ ನಗರದ ಅರಮನೆಯಲ್ಲಿ ಕುಳಿತು ಧರ್ಮಾಧಿಕಾರ ನಡೆಸುತ್ತಾರೆ. ಅದರಂತೆ ಶೀಖ ಧರ್ಮದ ಐವರು ವರಿಷ್ಟ ಪುರೋಹಿತರು ಧಾರ್ಮಿಕ ಅಧಿಕಾರ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವ ಹಕ್ಕನ್ನು ಪಡೆದಿರುತ್ತಾರೆ. ಅದರಂತೆ ಪಂಚಾಚಾರ್ಯರು ಸಿಂಹಾಸನಾ ರೂಢರಾಗಿ ರಾಜವೈಭವದಿಂದ ಧರ್ಮಾಧಿಕಾರ ನಡೆಸುವ ಹಕ್ಕು ಇವರಿಗೇ ಮೀಸಲು. ಧರ್ಮದ ವಿಷಯದಲ್ಲಿ ನಿರ್ಣಯ ಕೊಡುವ ಹಕ್ಕು ಇವರಿಗಿದೆ. ಆದರೆ ಇಂದು ಪ್ರತಿ ಯೊಬ್ಬರೂ ಸ್ವತಂತ್ರರಾಗಿದ್ದರಿಂದ ಆ ಬಿಗುವು ವೀರಶೈವರಲ್ಲಿ ಇಲ್ಲದಾಗಿದೆ ಎಂಬ ಸಂಗತಿಯನ್ನು ಬಹಳ ನೊಂದು ಹೇಳುತ್ತಿದ್ದೇವೆ. ಪಂಚಾಚಾರ್ಯರ ಧಾರ್ಮಿಕ ಹಕ್ಕು ಪರಂಪರೆ, ಹಾಗೂ ಪೀಠಗಳ ವ್ಯಾಪ್ತಿಯ ಬಗೆಗೆ ಮುಂದಿನ ಲೇಖನದಲ್ಲಿ ಪ್ರಕಟಿಸುತ್ತೇವೆ.

ಕೊನೆಯಲ್ಲಿ ನಿಮಗೆ ಹೇಳುವದೇನೆಂದರೆ, ನಿಮ್ಮ ಮಠ, ನಿಮ್ಮ ಸಾಧನೆ, ನಿಮ್ಮ ತತ್ವದ ಬಗೆಗೆ ಹೇಳಿಕೊಳ್ಳಿರಿ. ಆದರೆ ಇನ್ನೊಬ್ಬರನ್ನು ಕೆರಳಿಸುವ ಹೇಳಿಕೆ ಗಳನ್ನು ಕೊಟ್ಟು ಸಮಾಜದ ಸುಸ್ಥಿತಿಯನ್ನು ಹಾಳುಮಾಡದೇ ಭಕ್ತರಲ್ಲಿ ಐಕ್ಯತೆ, ಧರ್ಮದಲ್ಲಿ ಶ್ರದ್ಧೆ, ಗುರುಗಳಲ್ಲಿ ಭಕ್ತಿ, ಹಿರಿಯರಲ್ಲಿ ಗೌರವ ಹುಟ್ಟಿಸುವ ಕಾರ್ಯ ವನ್ನು ಮಾಡಿರೆಂದು ಹೇಳುತ್ತೇವೆ.

ಪ್ರಕಟನೆ ನಂ. 4

ಅಧ್ಯಕ್ಷ ಮತ್ತು ಸದಸ್ಯರು
ಜಗದ್ಗುರು ಪಂಚಾಚಾರ್ಯ ಸೇವಾ ಸಂಘ,
ಗದಗ-ಬೆಟಗೇರಿ.

ಬಸವನ ಮೂರ್ತಿಯೆ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೆ ಜ್ಞಾನಕ್ಕೆ ಮೂಲ
ಬಸವ ಬಸವಾ ಎಂಬುದೇ ಭಕ್ತಿಕಾಣಾ
ಕಪಿಲಸಿದ್ಧಮಲ್ಲಿಕಾರ್ಜುನಾ !

ಪಂಚಾಚಾರ್ಯರು ಸನ್ಯಾಸಿಗಳಲ್ಲವೆ?

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಗದಗ–ಬೆಟಗೇರಿ ಅವಳಿ ನಗರಗಳ "ಜಗದ್ಗುರು ಪಂಚಾಚಾರ್ಯ ಸಂಘದ" ಅಧ್ಯಕ್ಷರು ಮತ್ತು ಸದಸ್ಯರು ಪ್ರಕಟಿಸಿದ ಪ್ರಕಟಣೆ ನಂ. 4 (ಉಳಿದ ಮೂರನ್ನು ನಾನು ನೋಡಿಲ್ಲ) ಕರಪತ್ರವು ನಮ್ಮ ಕೈಗೆ ಸಿಕ್ಕಿತು. "ಗದುಗಿನ ಶ್ರೀ ತೋಂಟದ ಸಿದ್ಧಲಿಂಗ ಶ್ರೀಗಳು ಗಮನಿಸುವರೇ ? ....ನಂತರ ಉತ್ತರಿಸುವರೆ ? " ಎಂಬ ಶೀರ್ಷಿಕೆಯಡಿ ಪ್ರಕಟವಾದ ಕರಪತ್ರವಿದು. ಇದನ್ನು ಯಥಾರೂಪದಲ್ಲಿ ಮುದ್ರಿಸಿ, ಇದಕ್ಕೆ ಉತ್ತರ ಕೊಡುತ್ತಿದ್ದೇನೆ. ಗದುಗಿನ ಜಗದ್ಗುರುಗಳು ಮೌಖಿಕವಾಗಿಯೋ ಲಿಖಿತರೂಪದಲ್ಲೋ ಉತ್ತರಿಸಿರಬಹುದು ಅಥವಾ ಬಿಟ್ಟಿರಬಹುದು. ಆದರೆ ಈ ಪ್ರಶ್ನೆ-ಪತ್ರಿಕೆ ತೋಂಟದ ಶ್ರೀಗಳಿಗೆ ಮಾತ್ರ ಸಂಬಂಧಿಸಿದ್ದಾಗಿರದೆ ಇಡೀ ಸಮಾಜಕ್ಕೆ ಸಂಬಂಧಿಸಿರುವುದರಿಂದ ನಾನೂ ಉತ್ತರವನ್ನು ಕೊಡಲು ಬಯಸಿದ್ದೇನೆ.

1. ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯ ಮಠಕ್ಕೆ ಪಟ್ಟಾಧಿಕಾರ ಹೊಂದುವ ಮೊದಲು **ಪೂಜ್ಯ ಶ್ರೀ ಸಿದ್ಧಲಿಂಗ ಶ್ರೀಗಳು** ಮೊದಲು ಸಿಂದಗಿ ಹಿರೇ–ಮಠದ ಉಪಾಚಾರ್ಯರಾಗಿದ್ದುದನ್ನು ಆಗ 1973 ರ ಮೇ ತಿಂಗಳಲ್ಲಿ ನಡೆದ ಸಭೆಯಲ್ಲಿ, ವೀರಶೈವ ಧರ್ಮದ ಪ್ರಾಚೀನತೆ ಮತ್ತು ಪಂಚಾಚಾರ್ಯ ಪರಂ–ಪರೆ ಬಗ್ಗೆ ಮಾತನಾಡಿದ್ದನ್ನು ಬರಹಗಾರರು ನೆನಪಿಸಿದ್ದಾರೆ. ಈಗ ತೋಂಟದ ಶ್ರೀಗಳು ಹಾಗೆ ಮಾತನಾಡದೆ ವಿಶ್ವಗುರು ಬಸವಣ್ಣನವರೇ ಲಿಂಗವಂತ ಧರ್ಮದ ಆದ್ಯರೆಂದು ಹೇಳುತ್ತಿರುವುದನ್ನು ಈ ವಾಕ್ಯ ಸರಣಿಯ ಮೂಲಕ ಖಂಡಿಸಿದ್ದಾರೆ.

ಉತ್ತರ : ಗದುಗಿನ ಜಗದ್ಗುರುಗಳಲ್ಲಿ ಆದ ಈ ಬದಲಾವಣೆ ನಿಜಕ್ಕೂ ಅಭಿ–ನಂದನೀಯ. ಶ್ರೀ ಸಿದ್ಧಲಿಂಗೇಶ್ವರರ ಪರಂಪರೆಯ ವಿರಕ್ತಮಠಕ್ಕೆ ಅಧಿಕಾರಿಗಳಾಗಿ, ತಾವು ಅವಲಂಬಿಸಿದ ಸಂಪ್ರದಾಯಕ್ಕೆ ಪ್ರಾಮಾಣಿಕ ನಿಷ್ಠೆ ತೋರಿಸಿದ್ದಾರೆ. ಏಕೆಂದರೆ ವಿರಕ್ತ ಪರಂಪರೆಯ ನಿರ್ಮಾಪಕರೇ ಗುರು ಬಸವಣ್ಣನವರು. ಬಾಪೂಜಿಯವರು ತಮಗೆ ಪ್ರಧಾನಿತ್ವ, ರಾಷ್ಟ್ರಾಧ್ಯಕ್ಷತೆ ಎಲ್ಲವೂ ಒದಗಿ ಬಂದರೂ, ಸ್ವಾತಂತ್ರ್ಯ ಗಳಿಸಿಕೊಟ್ಟು ನೆಹರೂಜಿಯವರನ್ನು ಪ್ರಧಾನಿಯನ್ನಾಗಿ, ಬಾಬೂಜಿಯವರನ್ನು ರಾಷ್ಟ್ರಾಧ್ಯಕ್ಷರನ್ನಾಗಿ ಮಾಡಿ, ತಾವು ರಾಷ್ಟ್ರ ನಿರ್ಮಾಣದಲ್ಲಿ ತೊಡಗಿದಂತೆ, ವಿಶ್ವಗುರು ಬಸವಣ್ಣನವರು ಅಲ್ಲಮ ಪ್ರಭುದೇವರನ್ನು ಪ್ರಥಮ ಶೂನ್ಯಪೀಠಾಧಿಕಾರಿಯನ್ನಾಗಿ ಮಾಡಿದರು. ಇದರಿಂದ ಅವರ ಕೀರ್ತಿ ಇನ್ನೂ ಹೆಚ್ಚಿತು, ಅಲ್ಲಮ ಪ್ರಭುಗಳು ಹೇಳಿದರು :

೧. ನೀನು ಮಾಡಲು ಆನಾದೆನಲ್ಲದೆ
ಎನಗೆ ಬೇರೆ ಸ್ವತಂತ್ರವುಂಟೆ ?

೨. ಭಕ್ತರ ಭಾವದಲ್ಲಿ ಸುಳಿವ ಸುಳುಹು
ವಿರಕ್ತರ ಜ್ಞಾನದಲ್ಲಿ ಹೊಳೆಯುವ ಕಳೆಯು ನೀನೆ ಅಯ್ಯಾ !

ಸೂರ್ಯನ ಬೆಳಗಿನೊಳಗೆ ಸಚರಾಚರ ಪ್ರಾಣಿಗಳು ಸುಳಿವಂತೆ
ನಮ್ಮ ಕಟ್ಟಿನ ನೇಮದ ನಿಷ್ಠೆ ನೀನೇ ಅಯ್ಯಾ
ಅಮರೇಶ್ವರ ಲಿಂಗದ ಒಡಲು ಸಂಗನ ಬಸವಣ್ಣ ಎಂಬುದನ್ನು, ಮಡಿವಾಳ ಮಾಚಿತಂದೆಗಳು ಬಲ್ಲರು ಕಾಣ ಸಂಗನಬಸವಣ್ಣ ಎಂದು ಆಯ್ದಕ್ಕಿ ಮಾರ–ಯ್ಯನವರು ಹೇಳುತ್ತಾರೆ. ಗೃಹಸ್ಥ ಭಕ್ತರಾಗಲಿ ವಿರಕ್ತ ಜಂಗಮರಾಗಲೀ ಉಭಯತರಿಗೂ ಬಸವಣ್ಣನವರು ಆರಾಧ್ಯರು, ಮಾರ್ಗದರ್ಶಕರು.

ಆದ್ದರಿಂದ ವಿರಕ್ತ ಪರಂಪರೆಯ ತೋಂಟದ ಮಠಕ್ಕೆ ಅಧಿಕಾರಿಯಾದ ಗದುಗಿನ ಸ್ವಾಮಿಗಳು ತಾವು ಅವಲಂಬಿಸಿದ ಸಂಪ್ರದಾಯಕ್ಕೆ ಅನುಗುಣವಾದ ನಿಷ್ಠೆ ತೋರಿಸಿರುವುದು ಸೂಕ್ತ ಮತ್ತು ಅಭಿನಂದನಾರ್ಹ ಕರ್ತವ್ಯಪಾಲನೆ.

2. ವ್ಯಕ್ತಿಯು ಅವಲಂಬಿಸುವ ಸಂಪ್ರದಾಯವೇನೇ ಇರಲಿ, ಸತ್ಯವನ್ನು ಪ್ರಾಮಾ–ಣಿಕವಾಗಿ ಒಪ್ಪಬೇಕಾದುದು ಪ್ರತಿಯೊಬ್ಬ ವಿಚಾರಶೀಲರ ರೀತಿ. ಗುರುವರ್ಗ–ದವರಿದ್ದ ಮಾತ್ರಕ್ಕೆ ಲಿಂಗವಂತ ಧರ್ಮ ಪುರಾತನವಾದುದು ಎಂದು ಸಾಧಿಸ–ಬೇಕಾಗಿಲ್ಲ, ವಿರಕ್ತರಾದ ಮಾತ್ರಕ್ಕೆ ಬಸವಸಂಸ್ಥಾಪಿತ ಎನ್ನಬೇಕಾಗಿಲ್ಲ. ಇತಿ–ಹಾಸ–ಸಾಹಿತ್ಯ–ಶಾಸನ ಅಧ್ಯಯನ ಮಾಡಿದವರು ಯಾರೇ ಇರಲಿ, ಬಸವಣ್ಣನವರಿಗೂ ಪೂರ್ವದಲ್ಲಿ ಈ ಲಿಂಗವಂತ ಧರ್ಮ ಅಸ್ತಿತ್ವದಲ್ಲಿತ್ತು ಎಂದು ನಂಬಲು ಸಾಧ್ಯವಿಲ್ಲ. ನಾವು ಗುರುವರ್ಗ–ವಿರಕ್ತಸಂಪ್ರದಾಯ ಎರಡಕ್ಕೂ ಸೇರಿದವರಲ್ಲ. ಮೊದಲು ಅವರಿವರು ಬರೆದ ಸಾಹಿತ್ಯ ಓದಿ ಈ ಧರ್ಮ ಮೊದ-ಲೇ ಇದ್ದಿತು ಎಂದು ನಾವೂ ಪ್ರತಿಪಾದಿಸಿದ್ದುಂಟು. ಸ್ವತಂತ್ರ ಬುದ್ಧಿಯಿಂದ ಅಧ್ಯಯನ ಮಾಡುತ್ತಾ ಹೊರಟಾಗ ಈ ಭ್ರಾಂತಿ ತೊಲಗಿ, ನಾವುಗಳು ಬರೆದಿದ್ದ ಸಾಹಿತ್ಯವನ್ನೇ ತಿದ್ದುಪಡಿ ಮಾಡಿ ಬರೆಯಲಾಯಿತು. ಲಿಂಗವಂತ ಧರ್ಮ ಬಸವ ಪೂರ್ವದ್ದು ಎಂದು ಸಾಧಿಸಹೊರಟು, ಯುಗಯುಗಗಳಲ್ಲೂ ಪಂಚಾ–ಚಾರ್ಯರು ಲಿಂಗೋದ್ಭವರಾದ ಕಥೆ ಕೇವಲ 20ನೆಯ ಶತಮಾನದಲ್ಲಿ ಹುಟ್ಟು ಹಾಕಿದ ಕಥೆ ಎಂಬುದು ನಮಗೆ ಮನವರಿಕೆಯಾಯಿತು. ಮೊದಲು ಮುಗ್ಧ ಶ್ರದ್ಧೆಯಿಂದ ಒಪ್ಪಿಕೊಂಡಿದ್ದವರು ಈಗ ವೈಚಾರಿಕ ನಿಲುವು ತಳೆದು ಬಸವ ಪೂರ್ವದ ಪಂಚಾಚಾರ್ಯರ ಕಲ್ಪನೆಯನ್ನೇ ಅಲ್ಲಗಳೆದೆವು. ಈ ಬದಲಾವಣೆ ಯಾವುದೇ ಸಂಪ್ರದಾಯದ ಜಾಡು ಹಿಡಿದು ಅಲ್ಲ, ಸತ್ಯದ ಅನ್ವೇಷಕರಾಗಿ ಮಾತ್ರ. ಇದೇ ದಿಶೆಯಲ್ಲಿ ಆಲೋಚಿಸಿ ಗದುಗಿನ ಜಗದ್ಗುರುಗಳು ಸತ್ಯವನ್ನು ಎತ್ತಿ ಹಿಡಿದು, ಹಿಂದೆ ಎಂದೋ ತಳೆದ ನಂಬಿಕೆಯನ್ನು ವರ್ಜಿಸಿದ್ದರೆ ಅದು ಅಭಿನಂದನೀಯ, ಖಂಡನಾರ್ಹವಲ್ಲ,

3. ಪಂಚಾಚಾರ್ಯ ಸೇವಾ ಸಂಘದವರು, ತೋಂಟದ ಸ್ವಾಮೀಜಿಯವರನ್ನು 1973, 1974, 1975 ರಲ್ಲಿ ತಾಳಿದ್ದ ನಂಬಿಕೆಯನ್ನು ತ್ಯಜಿಸಿ ಹೀಗೇಕೆ ಬೇರೆ ರೀತಿಯ ಹೇಳಿಕೆ ಕೊಡುತ್ತಿರುವಿರಿ ? ಎಂದು ಪ್ರಶ್ನಿಸಿದ್ದಾರೆ. ಈಗ ಸಮಾಜವೂ ಈ ಪಂಚಾಚಾರ್ಯವಾದಿಗಳನ್ನು ಪ್ರಶ್ನಿಸಬಹುದಾಗಿದೆ. 12 ನೆಯ ಶತಮಾನದಿಂದಲೂ ಗುರು–ವಿರಕ್ತ ಎಂಬ ಭೇದವಿಲ್ಲದೆ ಈ ಸಮಾಜ ಸಾಗಿ ಬಂದಿತ್ತು. 19 ನೆಯ ಶತಮಾನದ ಕೊನೆಯವರೆಗೂ ಎಲ್ಲರೂ ಬಸವಣ್ಣನವರನ್ನೆ ಧರ್ಮಗುರುವೆಂದೂ, ಮಂತ್ರ ಪುರುಷರೆಂದು ಒಪ್ಪಿಕೊಂಡು ಸಾಗಿ ಬಂದಿದ್ದರು.

ಗುರುವರ್ಗದವರೆಂದು ಭಾವಿಸುವ ಮಗ್ಗೆಯ ಮಾಯಿದೇವ, ಎಳಂದರು ಷಡಕ್ಷರಿ, ಸುತ್ತೂರು ಮಠದ ಘನಲಿಂಗದೇವರು ಮುಂತಾದವರು ಬಸವಾದಿ ಪ್ರಮಥರನ್ನೇ ಕೊಂಡಾಡಿದ್ದಾರಲ್ಲಾ. ಇದನ್ನೆಲ್ಲ ಮರೆತು, ಇತಿಹಾಸಕ್ಕೆ ವಿರುದ್ಧವಾದ ಸತ್ಯದ ಒರೆಗಲ್ಲಿಗೆ ಸಿಕ್ಕದ ಪಂಚಾಚಾರ್ಯರ ಕಲ್ಪನೆಯನ್ನು ಮಠದಲ್ಲಿ ಕೂತು ಹುಟ್ಟುಹಾಕಿದ ಕೆಲವರ ಮಾತಿನ ಮೇಲೆ ವಿಶ್ವಾಸವಿಟ್ಟು ನಿಮ್ಮ ನಂಬಿಕೆಗಳನ್ನು ಬದಲಿಸಿಕೊಂಡಿದ್ದೇಕೆ ? ಬಸವಣ್ಣ–ವಚನ ಸಾಹಿತ್ಯ ಎಂಬ ಎರಡು ಹಳಿಗಳ ಮೇಲೆ ಹೊರಟಿದ್ದ ಲಿಂಗಾಯತ ಸಮಾಜದ ಟ್ರೇನನ್ನು ಒಡೆದು ಹಾಳು ಮಾಡಿದಿರೇಕೆ ? ಗುರುವರ್ಗದವೆಂದು ನಂಬಲಾದ ಮಠಗಳ ಅಧಿಕಾರಿಗಳು ಇಟ್ಟುಕೊಂಡ ಹೆಸರುಗಳನ್ನು ನೋಡಿದರೆ ಬಸವಾದಿ ಪ್ರಮಥರ ಬಗ್ಗೆ ಎಂಥಾ ಅನನ್ಯ ಭಕ್ತಿ ಈ ಮಠಾಧೀಶರಿಗೆ ಇತ್ತು ಎಂದು ಮನವರಿಕೆಯಾಗದೆ ? ಸ್ವಾರ್ಥಿಗಳಾಗಿ, ಜಾತಿವಾದಿಗಳಾಗಿ ಗುರುವರ್ಗದವರು ಹುಟ್ಟುಹಾಕಿದ ಕಟ್ಟು ಕಥೆಯ ಬಲೆಗೆ ಮೂಢರಾಗಿ ಸಿಕ್ಕುಬಿದ್ದ ಅನುಯಾಯಿಗಳಾದ ನೀವು ಬದಲಾಯಿಸಿರುವುದರ ಆತ್ಮಾವಲೋಕನ ಮಾಡಿಕೊಂಡಿದ್ದೀರಾ ?

ಅಡ್ಡಪಲ್ಲಕ್ಕಿ ಹೊರುವ ಶ್ರದ್ಧಾಳುಗಳೆ ?

ಜಡ ಸಂಪ್ರದಾಯದ ಜೊಂಡಿನಲ್ಲಿ ಸಿಕ್ಕಿಬಿದ್ದು ತಾವೂ ಉಸಿರು ಕಟ್ಟಿಸಿಕೊಂಡು, ಸಮಾಜವನ್ನು ಉಸಿರುಕಟ್ಟಿಸುತ್ತಿದ್ದ ಮಠಾಧಿಕಾರಿಗಳಲ್ಲಿ ಈಗ ಕೆಲವರಾದರು ವೈಚಾರಿಕ ಪರಿವರ್ತನೆ ಹೊಂದಿರುವುದು ಶುಭ ಸೂಚನೆ. ಲಿಂಗವಂತ ಧರ್ಮದ ಪ್ರಗತಿಪರ ಸಂವಿಧಾನಕ್ಕೆ ಹೊರತಾದ ಅಡ್ಡಪಲ್ಲಕ್ಕಿಯ ಆಡಂಬರವನ್ನು ಕೆಲವೇ ಕೆಲವರು ಬಿಟ್ಟಿರುವರು. ಮೊಟ್ಟ ಮೊದಲು ಇಳಕಲ್‌ದ ಪೂಜ್ಯ ಶ್ರೀ ನಿ. ಪ್ರ. ಮಹಾಂತ ಸ್ವಾಮಿಗಳು ಬಿಟ್ಟು ಆ ಪಲ್ಲಕ್ಕಿಗಳಲ್ಲಿ ಆದಿ ಪ್ರಮಥ ಬಸವಣ್ಣನವರ, ಶ್ರೀ ವಿಜಯ ಮಹಾಂತ ಸ್ವಾಮಿಗಳ ಭಾವಚಿತ್ರ, ವಚನ ಸಾಹಿತ್ಯ ಇಡುತ್ತಿದ್ದಾರೆ. ನಂತರ ಗದುಗಿನ ಜಗದ್ಗುರು ಡಾ॥ ಸಿದ್ಧಲಿಂಗಸ್ವಾಮಿಗಳು ಬಿಟ್ಟರು. ಈಗ ಚಿತ್ರದುರ್ಗದ ಕಿರಿಯ ಜಗದ್ಗುರುಗಳು ಬಿಟ್ಟರು. ಸಿರಿಗೆರೆಯ ಜಗದ್ಗುರುಗಳು ಟ್ರಾಕ್ಟರಿನ ಮೇಲೆ ಅಡ್ಡಲ್ಲಪಕ್ಕಿ ಇಟ್ಟು, ಯಾರಿಂದ ಹೊರಿಸಿಕೊಳ್ಳದೆ, ಪ್ರಗತಿಪರರ ಟೀಕೆಯನ್ನು ತಪ್ಪಿಸಿಕೊಂಡು, ಅಡ್ಡಪಲ್ಲಕ್ಕಿಯಲ್ಲಿ ಕುಳಿತ ಸಮಾಧಾನವನ್ನು ಹೊಂದುತ್ತಿರುವ ಬುದ್ಧಿವಂತಿಕೆ ಪ್ರದರ್ಶಿಸು–

(41 ನೇ ಪುಟಕ್ಕೆ ಮುಂದುವರಿದಿದ)

ತಲೆದಂಡ—ನಾಟಕ

ಆತ್ಮವಿಮರ್ಶೆಯ ಅಗತ್ಯತೆ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ,
ಬೆಂಗಳೂರು ಇವರಿಗೆ,
ಪೂಜ್ಯರೇ,

ತಲೆದಂಡ ನಾಟಕವನ್ನು ಮೊನ್ನೆ ಮೊನ್ನೆ ಓದುವ ಅವಕಾಶ ನನಗೆ ದೊರೆಯಿತು, ಈ ನಾಟಕವು T. V. ಯಲ್ಲಿಯೂ ಪ್ರಸಾರವಾಗಿದೆಯಂತೆ. ನಾನು ನೋಡಲಿಲ್ಲ. ನಾನು ಸಾಮಾನ್ಯವಾಗಿ ಕನ್ನಡ ಹಾಗೂ ಹಿಂದಿ ಧಾರಾವಾಹಿ ನೋಡುವುದೇ ಕಡಿಮೆ. ಅಂಥಾ ಉತ್ತಮ ಧಾರಾವಾಹಿಗಳು ಪ್ರಸಾರವಾಗುವುದಿಲ್ಲವೆಂದೇ ಹೇಳಬಹುದು. ಹೀಗಾಗಿ ತಲೆದಂಡ ನಾಟವಕನ್ನು ನಾನು ನೋಡಲಿಲ್ಲ. ಅದು ನನ್ನ ಸುದೈವ. ಈ ನಾಟಕವನ್ನು ಹಿಂದೆ ಗದಗದಲ್ಲಿಯೂ, ಮೊನ್ನೆ ಬೆಳಗಾಂವಿಯಲ್ಲಿಯೂ ಆಡಿದ್ದಾರೆ.

ಡಾ. ಎಚ್. ತಿಪ್ಪೇರುದ್ರಸ್ವಾಮಿಯಂಥಾ ಲೇಖಕರ ಕಾದಂಬರಿಯು ಜ್ಞಾನವಿದ್ದೂ, ಕಾರ್ನಾಡರವರು ಬರೆದ ನಾಟಕವಿದು. ನಾಟಕದ ಬಗೆಗೆ ಚರ್ಚಿಸಿದವರು ಡಾ. M. M. ಕಲಬುರ್ಗಿ. ಪ್ರಸಿದ್ಧ ವಿಮರ್ಶಕರೂ, ಲೇಖಕರೂ ಆದ ಶ್ರೀಮಾನ K.D. ಕುರ್ತಕೋಟಿಯವರು ಸಾಹಿತ್ಯ ಸಲಹೆಗಾರರು. ಇದಲ್ಲದೆ ಇನ್ನೂ ಅನೇಕರ ಉಪಕಾರ ಸ್ಮರಣೆಯಿದೆ ಈ ಪುಸ್ತಕದಲ್ಲಿ.

ಇಷ್ಟೆಲ್ಲ ಜನರ ಚರ್ಚೆ, ಸಲಹೆ, ಸಹಾಯದಿಂದ ಮೂಡಿ ಬಂದ ಕೃತಿಯೇ ಇದು? ಆ ಯುಗದ ಬೆರಗುಗೊಳಿಸುವ ಪ್ರತಿಭೆ, ಉತ್ಸಾಹಗಳನ್ನು, ಮೌಲಿಕ ಪ್ರಶ್ನೆಗಳನ್ನು ಕೇಳುವ ಎದೆಗಾರಿಕೆಯನ್ನು[ಗೆಲುವು, ನೋವುಗಳನ್ನು] 20 ನೇ ಶತಮಾನದ ಉತ್ತರಾರ್ಧದ ಹೊಸ ಸಂದರ್ಭದಲ್ಲಿ ಈ ರೀತಿಯಾಗಿ ಅರ್ಥೈಸುವುದು ಸರಿಯೆ ? ಅನಿವಾರ್ಯವೆ ? ಇತಿಹಾಸ, ಸಂಸ್ಕೃತಿಗಳ ಆಧಾರದ ಮೇಲೆ ನಾಟಕ ಬರೆಯುವವರು ಅವುಗಳ ಸ್ವರೂಪವನ್ನು ಬದಲಿಸಬಹುದೆ ?

ನಾಟಕವೆಂದರೆ ಲೋಕಚರಿತ, ಜನರ ನಡೆ-ನುಡಿಗಳ ಚಿತ್ರ. ಜನರ ನಡೆ-ನುಡಿಗಳನ್ನು ರಸವತ್ತಾಗಿ ಚಿತ್ರಿಸುವ ಯೋಗ್ಯತೆ ನಾಟಕಕಾರನಿಗಿರಬೇಕು. ಜನರ ಮನಸ್ಸನ್ನು ಹಿಡಿಯುವ ಕತೆ ಅಥವಾ ವಿಷಯವಸ್ತು ಇರಬೇಕು. ಇವೆರಡೂ ಇದೆಯೆ ಈ ಕೃತಿಯಲ್ಲಿ?

12 ನೇ ಶತಮಾನದ ಶರಣಶ್ರೇಷ್ಠರಾದ ಶ್ರೀ. ಬಸವೇಶ್ವರರನ್ನು ಅವರ ಅನುಯಾಯಿಗಳನ್ನು, ಬಿಜ್ಜಳ ಹಾಗೂ ಉಳಿದವರನ್ನು ಈ ರೀತಿಯಾದ ಅವಹೇಳನಕಾರಿ ಭಾಷೆ ಮತ್ತು ಶೈಲಿಯಲ್ಲಿ ಚಿತ್ರಿಸಿದ್ದು ಸಾಧುವೆ ? ಅದೂ ಒಬ್ಬ ಪ್ರಸಿದ್ಧ ಲೇಖಕ, ನಾಟಕಕಾರ, ನಟನೆಂದು ಖ್ಯಾತಿ–ಪಡೆದವರು ?

ಐತಿಹಾಸಿಕ ವ್ಯಕ್ತಿಗಳು ಮತ್ತು ಘಟನೆಗಳ ಆಧಾರದ ಮೇಲೆ ನಾಟಕ ಬರೆಯುವಾಗ, ಆ ಕಾಲದ ವ್ಯಕ್ತಿಗಳು, ಅವರ ಚಾರಿತ್ರ್ಯ, ಭಾಷೆ, ಸಂಸ್ಕೃತಿ, ಜೀವನ, ನಡೆದ ಘಟನೆಗಳು, ಸನ್ನಿವೇಶಗಳು ಮುಂತಾದುವುಗಳನ್ನು ಇದ್ದಂತೆ ರಚಿಸಬೇಕೇ ಹೊರತು ಇದಾವುದಕ್ಕೂ ಧಕ್ಕೆ ಆಗಬಾರದು. ಇಂಥ ಚಾರಿತ್ರ್ಯವಧೆ ಸರಿಯಲ್ಲ.

ಕೊಲ್ಲಲು ಬಂದ ಕೊಲೆಗಾರನಾದ ಬೊಲ್ಲನನ್ನು, ಪತ್ನಿಯ ಆಭರಣಗಳನ್ನು ಕದಿಯಲು ಬಂದು ಕಳ್ಳನನ್ನು ಸಾಕ್ಷಾತ್ ಕೂಡಲಸಂಗಮನೆಂದು ಭಾವಿಸಿದವರು ಬಸವಣ್ಣನವರು. ಕಾಯಕವೇ ಉಸಿರಾಗಿ ಬದುಕಿದವರು. ಸಕಲರ ಕಲ್ಯಾಣವೇ ತಮ್ಮ ಸರ್ವಸ್ವವೆಂದು ತಿಳಿದು, ನುಡಿದು, ಅದರಂತೆ ನಡೆದವರು. ನುಡಿದರೆ ಮುತ್ತಿನಹಾರ ದಂತಿರಬೇಕೆಂದವರು. ಇಂಥ ಬಸವಣ್ಣನವರು ಸಾಮಾನ್ಯರಂತೆ ಪತ್ನಿಗೆ 'ಗಂಗೀ' ಎಂದು ಸಂಬೋಧಿಸಬಹುದೆ ? [Page–94] ಅಲ್ಲದೇ,

Page	12	— ಸೋವಿದೇವನ ಮಾತು–ಹಡಬಿಟ್ಟಿ ಸಂತತಿ.	
"	15	— ಬಿಜ್ಜಳನ	" –ಹೀಂಗ ಹೆಂಗಸೂರ ಕುಂಡಿ....
"	17	— "	" –ಝಾಡಿಸಿ ಒದಿಯೋ. ನಾಯಿ ಉಚ್ಚಿ ಹೋದಾಂಗೇನ
"	100	— "	" ಭೋಸಡಿ ಮಗನs,ಸೂಳೇ....
"	102	—ದಾಮೋದರ ಭಟ್ಟನ"	–ನಾಯಿ ಮಗನs.
"	117, 121	— ಬಿಜ್ಜಳ, ಸೋವಿದೇವನ ಮಾತು – ಇವನವ್ವ, etc.	

ಇಂಥ ಅನೇಕ ನುಡಿಗಳು ಈ ನಾಟಕದ ವೈಶಿಷ್ಟ್ಯಗಳು.

ಒಂದು ಸಲ 'ಶರಣೆಂದು' ಅಂದಿದ್ದಕ್ಕೆ ಬಸವಣ್ಣನವರು ಎರಡು ಸಲ 'ಶರಣು, ಶರಣಾರ್ಥಿ'ಅಂದಿದ್ದಕ್ಕಾಗಿ, ಋಣಭಾರವಾಯಿತೆಂದು, ತಮ್ಮ ತೊಡೆಯ ಚರ್ಮದಿಂದ ಅವುಗೆ ಮಾಡಿ ಬಸವಣ್ಣನವರಿಗೆ ಅರ್ಪಿಸಿದ ಸಮಗಾರ ಹರಳಯ್ಯನವರಿಗಿದ್ದ ಸೌಜನ್ಯ, ಸಂಸ್ಕೃತಿ, ಜ್ಞಾನ, ವಿನಯಗಳು ಈ ಕಾಲದ ಮಹಾನ್ ಲೇಖಕರಿಗೆ ಇಲ್ಲವಾದವೆ ? ಸಾಮಾನ್ಯ ಶರಣರಾದ ಹರಳಯ್ಯನವರೇ ಹೀಗಿದ್ದರೆಂದ ಮೇಲೆ ಅವರೆಲ್ಲರ ಗುರುವಾದ ಬಸವಣ್ಣನವರು ಹೇಗಿರಬೇಕು ? ಅವರ ನೆರಳಿನ ನೆರಳಾಗಿ ಬದುಕಿದ ಆಗಿನ ಶರಣರು ಹೇಗಿರಬೇಕು ?

ಕೊಂಡಿ ಮಂಚಣ್ಣ, ದಾಮೋದರ ಭಟ್ಟನಂಥವರು ಆಗ ಬೆರಳೆಣಿಕೆಯಲ್ಲಿದ್ದರು. ಆದರೆ ಈ 20 ನೇ ಶತಮಾನದ ಅಂತ್ಯದಲ್ಲಿ ಅವರೇ ತುಂಬಿದ್ದಾರೆ. ಈ ಶತಮಾನದ ಅಂತ್ಯಭಾಗದ ಸಂಸ್ಕೃತಿಯನ್ನು 12ನೇ ಶತಮಾನದಲ್ಲಿ ಇದ್ದಂತೆ ಚಿತ್ರಿಸಿದ್ದು ತಪ್ಪಲ್ಲವೆ ?

'ತಲೆದಂಡ' ಕೃತಿಯಲ್ಲಿ ಅವಾರ್ಡ ಕೊಡುವಂಥಾ ವಿಶೇಷ ಏನಿದೆ? ಕೊಟ್ಟವರು ಯಾರು ? ಏನು ಮೌಲ್ಯವಿದೆ ? ಯಾವ ಉದಾತ್ತ ಉದ್ದೇಶದ ಸಾಧನೆ ಇದೆ ಅದರಲ್ಲಿ ? ಶಿಫಾರಸು ಮಾಡಿದವರ ಹಾಗೂ ಕೊಟ್ಟವರ ಸಂಸ್ಕೃತಿಯೂ ಇದೇ ಆಗಿರಬೇಕೆಂದು ನನ್ನ ಅನಿಸಿಕೆ.

ನಾನೂ ಅನೇಕ ಮಹಾನ ಕೃತಿಗಳನ್ನು ಓದಿದ್ದೇನೆ. ಆದರೆ ಎಲ್ಲೂ ಬಸವಣ್ಣನವರಿಗೆ ಮಗನಿದ್ದ ವಿಷಯದ ಉಲ್ಲೇಖವಿಲ್ಲ. [ಇದ್ದರೆ ದಯವಿಟ್ಟು ತಿಳಿಸಿ] ಅಂದಾಗ ಮಗನೆಲ್ಲಿಂದ ಬಂದ? ಇಬ್ಬರು ಪತ್ನಿಯರಿದ್ದರೂ,(?)ಅಪಾರ ಆಸ್ತಿ, ಸಂಪತ್ತಿದ್ದರೂ, ಗುರು, ಲಿಂಗ, ಜಂಗಮ ಸೇವೆಗಾಗಿ ಬದುಕಿದವರು ಅವರು. ಸಾಮಾನ್ಯರಂತೆ ಪತಿ–ಪತ್ನಿಯರಾಗಿ ಬದುಕಲಿಲ್ಲ. ವಂಶೋದ್ಧಾರವೇ ಅವರ ಜೀವನದ ಗುರಿಯಾಗಿರಲಿಲ್ಲ.

ಧರ್ಮದ ಉದ್ಧಾರಕ್ಕಾಗಿ, ಸಾಮಾನ್ಯ ಜನರ ಕಲ್ಯಾಣಕ್ಕಾಗಿ ಹುಟ್ಟಿ ಬಂದವರವರು. ಯಾರಿಗೂ ಕೆಡುಕನ್ನು ಬಯಸಿದವರಲ್ಲ. ಸಕಲರ ಲೇಸನ್ನೇ ಬಯಸಿದವರು. ಅಂಥವರ ಬಗೆಗೆ ನಾವು, 20 ನೇ ಶತಮಾನದವರು ತಿಳಿದ, ತಳೆದ ಭಾವನೆ ಸರಿಯೆ ?

ಯಾವುದೆ ಕೃತಿಯನ್ನು ರಚಿಸಿದರೂ ಅದಕ್ಕೆ ತೂಕವಿರಬೇಕು, ಮೌಲ್ಯವಿರಬೇಕು, ಉದಾತ್ತ ಧ್ಯೇಯಗಳನ್ನು ಎತ್ತಿ ತೋರಿಸಬೇಕು. ಇತಿಹಾಸದ ಆಧಾರವಿದ್ದರೆ ಇತಿಹಾಸದ ಪ್ರತಿಬಿಂಬವಾಗಿರಬೇಕು. ಇತಿಹಾಸವೆಂದರೆ ಗತಕಾಲದಲ್ಲಿ ನಡೆದ ಸಂಗತಿಗಳ ಯಥಾವತ್ ನಿರೂಪಣೆ. ಭಾರತಕ್ಕೂ ವೈಭವಯುತ, ಭವ್ಯ ಇತಿಹಾಸ ವಿದೆ. ಆ ಇತಿಹಾಸದ ಒಂದು ಭಾಗ ಬಸವಣ್ಣನವರ ಕಾಲ.

ದಯವಿಟ್ಟು ಈ ಎಲ್ಲ ವಿಷಯವನ್ನು ಗಮನಿಸಿ, ಚರ್ಚಿಸಿ, ಮರಳಿ ಉತ್ತರಿಸಬೇಕಾಗಿ ವಿನಂತಿ. ನಿಮ್ಮ ವಿಮರ್ಶೆಯು ಜಾತ್ಯಾತೀತ, ಧರ್ಮಾತೀತ, ನಿರಪೇಕ್ಷ, ನಿಃಸ್ವಾರ್ಥ ಬುದ್ಧಿಯಿಂದ ಕೂಡಿರಬೇಕು. ವಿಮರ್ಶಕರಿಗೆ, ಲೇಖಕರಿಗೆ ಇದಾವ ಬಂಧನ, ಹಂಗು ಇರಬಾರದು.

24–3–94

ಇಂತಿ ವಂದನೆಗಳೊಂದಿಗೆ,
ತಮ್ಮ ಆತ್ಮೀಯ,
ಡಾ॥ ಶೈಲಜಾ. ಮ. ಕಂಕಣವಾಡಿ.

"ತಲೆ ದಂಡ"—ಕುರಿತು

ಡಾ॥ ಶೈಲಜಾ ಅವರ ಪತ್ರಕ್ಕೆ ಪ್ರತಿಕ್ರಿಯೆ

—ಮಾತಾಜಿ

"ತಲೆದಂಡ"–ಶ್ರೀ ಗಿರೀಶ ಕಾರ್ನಾಡರು ಬರೆದ ಒಂದು ನಾಟಕ. ಈಗಾಗಲೇ ಸಾಕಷ್ಟು ಕಡೆ ಅದು ಪ್ರದರ್ಶಿತವಾಗುತ್ತಲಿದೆ. 'ತಲೆದಂಡ' ಪುಸ್ತಕ ಪ್ರಕಟವಾಗುತ್ತಿದ್ದಂತೆಯೇ ಅದರ ವಿಮರ್ಶೆಯನ್ನು ಒಂದು ಮಾಸಪತ್ರಿಕೆಯಲ್ಲಿ ಓದಿ, ಪ್ರಭಾವಿತಳಾಗಿ ತಕ್ಷಣವೇ ಪುಸ್ತಕವನ್ನು ತರಿಸಿ ಓದಿದೆ. ವಿಮರ್ಶೆಯಲ್ಲಿ ವೈಭವೀಕರಿಸಲಾಗಿದ್ದಿತು. ಅಂಥ ಸತ್ವವನ್ನೇನೂ ಕಾಣಲಿಲ್ಲ. ಕೆಲವು ಆಕ್ಷೇಪಾರ್ಹ ಸಂಗತಿಗಳಿದ್ದವು. ಆ ಬಗ್ಗೆ ಬರೆಯಬೇಕು ಎನ್ನಿಸಿದರೂ ಒಂದು ಬಗೆಯ ನಿರಾಶೆ ಕವಿದು ಸುಮ್ಮನಾದೆ. ಏಕೆಂದರೆ ನಮ್ಮ ದೇಶದಲ್ಲಿ ವಸ್ತುನಿಷ್ಠ ವಿಮರ್ಶೆ ಬಹಳ ಕಮ್ಮಿ. ಸಾಹಿತಿಗಳಲ್ಲಿ ವಿವಿಧ ಗುಂಪುಗಳಿವೆ. ಬರೆಯುವ ಶೈಲಿಯನ್ನನುಸರಿಸಿ ಗುಂಪು ಆಗಿರಬಹುದು; ಅಥವಾ ವಿಚಾರಧಾರೆಯ ದೃಷ್ಟಿಕೋನ ಆಧರಿಸಿ ಆಗಿರಬಹುದು. ವೈಯಕ್ತಿಕ ಸ್ನೇಹ-ಸಂಬಂಧದ ಮೇಲೂ ಇರಬಹುದು. ಆಯಾ ಗುಂಪಿನಲ್ಲಿ ಯಾರಾದರೂ ಬರೆದಾಗ ಇನ್ನಿತರರು ಅಹಾ! ಓಹೊ! ಭಲೇ! ಬೇಷ್ ಎಂದು ಪ್ರಶಂಸಿಸುವುದು ಪೂರ್ವ ನಿರ್ಧಾರಿತವೇ ಇರುತ್ತದೆ. ಕೆಲವೊಮ್ಮೆ ಬಹುಮಾನ ಪ್ರಶಸ್ತಿಗಳೂ ಪೂರ್ವ ನಿರ್ಧಾರಿತವೇ (Predetermined) ಆಗಿರುತ್ತವೆ.

ಅಲ್ಲದೇ ಬಸವಾದಿ ಪ್ರಮಥರ ಜೀವನ, ಸಾಧನೆ–ಸಂದೇಶ ಕುರಿತು ಬರೆಯುವಲ್ಲಿ ವೈಚಾರಿಕ ಹಲ್ಲೆಗಳು ನಡೆಯುತ್ತಲೇ ಇವೆ. ಧಾರ್ಮಿಕ ವಲಯದಲ್ಲಿ ಪಂಚಾಚಾರ್ಯ ವಾದಿಗಳಿಂದ ಮತ್ತು ಜಾತಿವಾದಿಗಳಿಂದ, ಸಾಹಿತ್ಯಿಕ ವಲಯದಲ್ಲಿ ಲಿಂಗಾಯತೇತರರು ಮತ್ತು ಲಿಂಗಾಯತರು–ಉಭಯತರಿಂದ. ಇವೆಲ್ಲವುಗಳಿಗೆ ಉತ್ತರ ಕೊಡುತ್ತಲೇ ಹೋದರೆ ನಾವು ಇನ್ನಾವ ಕೆಲಸಗಳನ್ನು ಮಾಡದೆ, ವರ್ಷವಿಡೀ ಈ ಉತ್ತರ ಕೊಡುವ ಕೆಲಸವನ್ನೇ ಮಾಡಬೇಕಾದೀತು. ಇದಕ್ಕೆ ಆತಂಕಪಟ್ಟೆ ನಾನು ಇತ್ತೀಚಿಗೆ ಹಲವಾರು ಬರಹಗಳನ್ನು ವಿಮರ್ಶಿಸುವ ಗೋಜಿಗೇ ಹೋಗಲಿಲ್ಲ. ಡಾ॥ ಶೈಲಜಾ ಕಂಕಣವಾಡಿಯವರು ಆಗ್ರಹಪೂರ್ವಕ ಪತ್ರ ಬರೆದುದರಿಂದಲೂ ಮತ್ತು ಅವರ ಪತ್ರದಲ್ಲಿ 'ತಲೆದಂಡ' ಕೃತಿಯ ವಿಮರ್ಶೆ ಇರುವುದರಿಂದಲೂ ನನ್ನ ಕೆಲಸ ಹಗುರವಾಯಿತೆಂದು ಈ ಅಭಿಪ್ರಾಯ ಬರೆಯುತ್ತಿದ್ದೇನೆ.

'ತಲೆದಂಡ'–ವಿಶ್ವಗುರು ಬಸವಣ್ಣನವರು ಆಗಾಗ ಹೇಳುವ ಮಾತು. ಅದೂ ಪ್ರಾಣವನ್ನು ಪಣಕ್ಕಿಟ್ಟು, ತಲೆಯನ್ನೇ ಶಿಕ್ಷೆಗೆ ಒಡ್ಡಿ ಹೇಳುವ ಮಾತು. ಶಿರಚ್ಛೇದನಕ್ಕೂ ಮಿಗಿಲಾದ ಶಿಕ್ಷೆ ಯಾವುದೂ ಇರದಷ್ಟೆ. ಅದಕ್ಕಾಗಿ ಪಣದಲ್ಲಿ 'ತಲೆದಂಡ' ವನ್ನೇ ಇಡುತ್ತಾರೆ. ಪುಸ್ತಕದ ಶೀರ್ಷಿಕೆ ಅತ್ಯುತ್ತಮವಾಗಿದೆ.

ಇಡೀ ನಾಟಕದಲ್ಲಿ ಎರಡು ಮಾತುಗಳು ನಾವೆಲ್ಲರೂ ಹೆಮ್ಮೆಯಿಂದ ಬೀಗುವಂತಹವು. ಬಿಜ್ಜಳನಿಗೆ ಬಸವಣ್ಣನವರ ಮೇಲೆ ಅಪಾರ ಮೆಚ್ಚುಗೆ. ತಾನು ಕ್ಷೌರಿಕ ತಾಯಿಯ ಮಗನಾಗಿ [ಇದಕ್ಕೆ ಎಲ್ಲಿಂದ ಆಧಾರ ಪಡೆದರೋ ತಿಳಿದಿಲ್ಲ ಎಂದು ಎಲ್ಲರ ಉದ್ಗಾರ] ಇಂದು ರಾಜನಾಗಿರುವುದಕ್ಕೆ ಬಸವಣ್ಣನವರ ಸಿದ್ಧಾಂತವೇ ಕಾರಣ ಎಂದು ಅವನ ಅಭಿಮತ. "ರಾಜತ್ವ–ಗುರುತ್ವ ವಂಶಪಾರಂಪರ್ಯವಾಗಿ ಬರದೆ ಅರ್ಹತೆಯಿಂದ ಬರಬೇಕು. ಭುಜಬಲ ಪರಾಕ್ರಮದಿಂದ ರಾಜತ್ವ, ಅರಿವು–ಅನುಭಾವಗಳಿಂದ ಗುರುತ್ವ" ಎಂಬ ಬಸವವಾದವನ್ನು ಆಧರಿಸಿಯೇ ಬಿಜ್ಜಳನು ರಾಜನಾಗಿರುವನೆಂದು ಅವನ ನಂಬಿಕೆ.

ವರ್ಣಾಂತರ ವಿವಾಹದ ವಿಷಯ ಬಂದಾಗ ಸನಾತನವಾದಿಗಳು ಈ ವಿವಾಹವನ್ನು ನಿಲ್ಲಿಸಬೇಕೆಂದು ರಾಜನನ್ನು ಪ್ರೇರೇಪಿಸಿದಾಗ ಅವನು ನಿರಾಕರಿಸಿ, ಈ ವಿವಾಹವು ಹೆಮ್ಮೆಯ ಸಂಗತಿ ಎಂದು ಅವನ ಆಳ್ವಿಕೆಯಲ್ಲಿ ಇಂಥದೊಂದು ಮಹತ್ವಪೂರ್ಣ ಘಟನೆ ಸಂಭವಿಸುತ್ತಿದ್ದು ಇದು ಚರಿತ್ರಾರ್ಹ ಘಟನೆಯಾದ್ದರಿಂದ ಇದನ್ನು ನಿಲ್ಲಿಸಲು ಯತ್ನಿಸುವುದಿಲ್ಲ ಎನ್ನುವುದು ನಿಜಕ್ಕೂ ನಮ್ಮಗಳನ್ನು ಅಭಿಮಾನದಿಂದ ಬೀಗುವಂತೆ ಮಾಡುತ್ತದೆ.

ಆದರೆ, ಈ ಉತ್ತಮ ಗುಣಗಳಿಗಿಂತಲೂ ಕೊರತೆ ಮತ್ತು ಕಪ್ಪು ಚುಕ್ಕೆಗಳಾಗುವ ಮಾತು, ಪ್ರಸಂಗಗಳೇ ಜಾಸ್ತಿ.

1. ಬಸವಣ್ಣನವರ ಬಾಯಿಯಲ್ಲಿ ತೀರಾ ಕೆಳಮಟ್ಟದ ಆಡುಭಾಷೆ ಬಳಸಿರುವುದು ವ್ಯಥೆಯನ್ನುಂಟು ಮಾಡುತ್ತದೆ. ಜೊತೆಗೆ ಮರಾಠಿ ಪದಗಳನ್ನು ಹೇರಳವಾಗಿ ಮಿಶ್ರಣ ಮಾಡಲಾಗಿದೆ. ಅಂದು ಬಸವಾದಿ ಪ್ರಮಥರು ಮಾತನಾಡುತ್ತಿದುದು ಪರಿಶುದ್ಧ ಕನ್ನಡವಾಗಿರುವುದನ್ನು ವಚನಗಳಲ್ಲಿ ಕಾಣಬಹುದು ಮತ್ತು ವಚನಗಳಲ್ಲಿ ಅಭಿವ್ಯಕ್ತವಾಗಿರುವ ಭಾಷೆಯೇ ಅಂದಿನ, ಮುಖ್ಯವಾಗಿ

ಅವರ ಆಡುಭಾಷೆಯಾಗಿದ್ದಿತು. ಜನ್ಮದಿಂದಲೂ ಉದಾತ್ತ ಸಂಸ್ಕಾರವಿದ್ದ ಬಸವಣ್ಣನವರು 'ಗಂಗೀ' ಎಂದು ಹೆಂಡತಿಯನ್ನು ಕರೆಯುವುದು ಎಂದೂ ಸಾಧ್ಯವಿಲ್ಲದ್ದು. 'ಗಂಗಾ' ಎನ್ನುವ ಪ್ರಯೋಗ ಸಾಧ್ಯವಿರಬಹುದಾದರೂ 'ಗಂಗೀ' ಎನ್ನುವುದು ಸಾಧ್ಯವಿಲ್ಲದ್ದು.

2. ಬಸವಣ್ಣನವರ ನಿರ್ಗಮನ ಒಂದು ಪ್ರೌಢ, ಹೃದಯ ಸ್ಪರ್ಶಿಪ್ರಸಂಗ. ಅಂಥ ಅಮೂಲ್ಯ ರತ್ನದಂತಹ ಪ್ರಸಂಗವನ್ನು ತೀರಾ ಸಪ್ಪೆಗೊಳಿಸಿ ಶ್ರೀ ಕಾರ್ನಾಡರು ಚಿತ್ರಿಸಿದ್ದಾರೆ. ಬಸವಣ್ಣನವರ ಜೀವನವು ಬೀರುವ ಪರಿಣಾಮಕ್ಕಿಂತಲೂ ಅವರು ಅನುಭವ ಮಂಟಪದಿಂದ ಬೀಳ್ಕೊಂಡು ಹೋಗುವ ಪ್ರಸಂಗ ಹೆಚ್ಚಿನ ಪರಿಣಾಮ ಬೀರಿ, ನಮ್ಮ ಹೃನ್ಮನಗಳಲ್ಲಿ ಬಸವಣ್ಣನವರ ಚಿತ್ರವನ್ನು ದೃಢಗೊಳಿಸುತ್ತದೆ. ಈ ನಾಟಕದಲ್ಲಿ ಅದು ತೀರಾ ಸಪ್ಪೆ.

3. ಬಿಜ್ಜಳ ಮಹಾರಾಜ ಭುಜಬಲ ಪರಾಕ್ರಮಿ, ಶೂರ, ಪ್ರೌಢಮತಿ.ನನ್ನ ದೃಷ್ಟಿಯಲ್ಲಿ ಆತ ಖಳನಾಯಕನಲ್ಲ, ಎರಡನೆಯ ನಾಯಕ. ಅವನ ವಿಶಾಲ ಮತಿಯಿಂದಾಗಿಯೇ ಶರಣಧರ್ಮ ಬೆಳೆಯಿತು. ಬಲಿತಿತು. ಅಂಥ ಬಿಜ್ಜಳನನ್ನು ಕೋಡಂಗಿಯಂತೆ, ದುರ್ಬಲನಂತೆ ಕಾರ್ನಾಡರು ಚಿತ್ರಿಸಿ ಮಹಾನ್‌ತಪ್ಪು ಎಸಗಿದ್ದಾರೆ. ನಾಟಕಗಳಲ್ಲಿ ಜನರಂಜನೆಗಾಗಿ ಹಾಸ್ಯ ಬೇಕಾಗಿದ್ದರೆ ಅವನ್ನು ಸಹಾಯಕ ಪಾತ್ರಗಳ ಮೂಲಕ ತೂರಿಸಬೇಕೇ ವಿನಾ ಪ್ರೌಢಪಾತ್ರಗಳ ಮೂಲಕ ಅಲ್ಲ.

4. ಬಸವಣ್ಣನವರು ಧೈರ್ಯದಿಂದ ವರ್ಣಾಂತರ ವಿವಾಹಕ್ಕೆ ಮುಂದಾದಾಗ ಶರಣರೆಲ್ಲ ಅವರ ಬೆಂಬಲಕ್ಕೆ ನಿಂತರು ಮತ್ತು ಜನಪರ ಸಾಹಿತ್ಯವಾದ ವಚನ ಸಾಹಿತ್ಯವನ್ನು ಬಸವಣ್ಣನವರ ಸತ್‌ಸಂಕಲ್ಪದಂತೆ ಉಳಿಸಬೇಕಾದಾಗ ಎಲ್ಲರೂ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿದರು. ಕಾರ್ನಾಡರ ನಾಟಕದಲ್ಲಿ ಅನುಯಾಯಿಗಳು ಕಷ್ಟಕಾಲದಲ್ಲಿ ಕೈಬಿಡುವ ಸಮಯ ಸಾಧಕರಂತೆ ಚಿತ್ರಿತವಾಗಿದ್ದಾರೆ. ಇದು ನಿಜಕ್ಕೂ ಶರಣಗಣಕ್ಕೆ ಮಾಡಿರುವ ಅಪಚಾರ. ತನಗಾಗಿ, ತನ್ನ ಹೆಂಡತಿ-ಮಕ್ಕಳಿಗಾಗಿ ಕೋಟಿಕೋಟಿ ಜನ ಬದುಕುವಾಗ, ನಿರ್ಭೀತರಾಗಿ ಶರಣರು ಹೋರಾಡಿ, ತತ್ತ್ವನಿಷ್ಠರಾಗಿ ನಿಂತದ್ದು ಇಂದಿಗೂ ರೋಮಾಂಚಕಾರಿ. ಇದು ಕಾರ್ನಾಡರಿಗೆ ಎಳ್ಳಷ್ಟೂ ಅರ್ಥವಾಗಿಲ್ಲ. ಬಿಜ್ಜಳನಂತಹ ಒಬ್ಬ ರಾಜನ ಬಾಯಿಯಲ್ಲಿ ಕೀಳುಮಟ್ಟದ ಭಾಷೆ, ಬೈಗುಳ ಹೊರಡಿಸಿರುವುದು ನೋಡಿದರೆ ಆಶ್ಚರ್ಯವಾಗುತ್ತದೆ.

ಈ ನಾಟಕದಲ್ಲಿ ಯಾವ ಪಾತ್ರವೂ ಜೀವಂತವೆನಿಸುವುದಿಲ್ಲ. ಯಾವುದೇ ರೀತಿಯಲ್ಲೂ ಅಚ್ಚೊತ್ತಿ, ಉಳಿಯುವುದಿಲ್ಲ. ಸತ್ತ ಮತ್ತು ಕೊಳೆತ ಪಾತ್ರಗಳನ್ನು, ಅವರ ಇರುವಿಕೆಗೆ ವಿರುದ್ಧವಾಗಿ ಚಿತ್ರಿಸಿ ಕಾರ್ನಾಡರು ಯಾವ ಸಾರ್ಥಕ್ಯ ಸಾಧಿಸಿದ್ದಾರೋ! ಮುಖ ನೋಡಿ ಮಣೆ ಹಾಕುವ ಸಂಪ್ರದಾಯ ಸಾಗಿ ಬಂದಿರುವ ಈ ದೇಶದಲ್ಲಿ ಇಂಥ ಕೃತಿಗೆ ಪ್ರಶಸ್ತಿ–ಪುರಸ್ಕಾರ ಸಿಕ್ಕುವುದು ಆಶ್ಚರ್ಯವನ್ನೇನೂ ಉಂಟು ಮಾಡದು. ಆದರಿಷ್ಟೆ, ಒಬ್ಬ ಯುಗಪುರುಷನನ್ನು ಆತನ ಭವ್ಯನಿಲುವು ಇದ್ದಂತೆ ಚಿತ್ರಿಸುವ ಮನಸ್ಸಿಲ್ಲದ ಶ್ರೀ ಕಾರ್ನಾಡರು (ಅವಹೇಳನ ಮಾಡುವ ಉದ್ದೇಶವೂ ಇದ್ದಂತೆ ತೋರದು) 'ತಲೆದಂಡ' ನಾಟಕ ಬರೆದು ಸಮಯವನ್ನೇಕೆ ದಂಡ ಮಾಡಿಕೊಂಡರೋ ಅರ್ಥವಾಗದಾಗಿದೆ.

★★

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ರಾಷ್ಟ್ರೀಯ ಬಸವ ದಳದ ಪರವಾಗಿ

ಭಿನ್ನವತ್ತಳೆ

ಆಯಿತ್ತು ಗುರುವೆ ನಿಮ್ಮಿಂದ ಬಸವ ಧರ್ಮ ಪೀಠ ।
ಆಯಿತ್ತು ಗುರುವೆ ನಿಮ್ಮಿಂದ ಮಹಾಮನೆ ಮಹಾಮಠ ।
ಆಯಿತ್ತು ಗುರುವೆ ನಿಮ್ಮಿಂದ ಎಮಗೆ ಶರಣರ ವಚನ ಪಾಠ ।
ಆಯಿತ್ತು ಗುರುವೆ ನಿಮ್ಮಿಂದ ಎಮಗೆ ಬಸವೇಶ್ವರ ಪೂಜಾ ವ್ರತ ಪರಿಪಾಠ ।
ಆಯಿತ್ತು ಗುರುವೆ ನಿಮ್ಮಿಂದ ಎಮಗೆ ನಿತ್ಯ ಪ್ರಾರ್ಥನೆಯ ಮಂತ್ರಪಾಠ ।
ಆಯಿತ್ತು ಗುರುವೆ ನಿಮ್ಮಿಂದ ಶರಣ ಮೇಳದ ಸಂಘಟನ ।
ಆಯಿತ್ತು ಗುರುವೆ ನಿಮ್ಮಿಂದ ವಿಶ್ವ ಧರ್ಮದ ಮುನ್ನೋಟ ।
ಸಾಗಿತ್ತು ಗುರುವೆ ನಿಮ್ಮಿಂದ ಬಸವ ಧರ್ಮ ಸಮ್ಮೇಳನದ ಸರದಿಯ ಊಟ ।
ಇಂತೀ ಇವೆಲ್ಲ ನೀವು ಮಾಡಿದಿರಾಗಿ ಮಲಾಪಹಾರಿ ಕೃಷ್ಣೆಯರ ಕೂಡಲ ಸಂಗಮದ
ದಡದ ಮೇಲೆ ಶರಣರ ಶಿಖರವೆದ್ದು ಶಿಖರದ ತುದಿಯ ಮೇಲೆ ಬಸವ ಕೀರಿಟ ಕಂಗೊಳಿ
ಸುವತ್ತ ಏರುತಿದೆ ಶರಣ ಸಾಹಿತ್ಯದ ಹೊಂಬೆಳಗಿನ ಕಿರಣದ ಶರವೇಗದೋಟ ।
ಇದು ಸತ್ಯ. ಕಾರಣ ಆ ಬಸವ ಧರ್ಮದ ಪೀಠಾಧೀಶ ಶ್ರೀಮನ್ನಿರಂಜನ ಪೂಜ್ಯ
ಮಹಾಜಗದ್ಗುರು ಶ್ರೀ ಲಿಂಗಾನಂದ ಮಹಾಸ್ವಾಮಿ ಸದ್ಗುರುವೇ ನಿಮ್ಮ ಪರಮ
ಪಾವನ ಪಾದಂಗಳಿಗೆ ನಮ್ಮ ಹೃದಯದ ನಿತ್ಯ ಶರಣು ಶರಣಾರ್ಥಿ ಎನುತಲಿದೆ ।
ಆದ ಕಾರಣ ಮಹಾಜಗದ್ಗುರುವೇ ಇದೇ ನಮಗೆಲ್ಲ ನಿಮ್ಮ ಶಿಕ್ಷೆ–ರಕ್ಷೆ ಇದೆಲ್ಲ
ನಿಮ್ಮ ಕರುಣೆ ಮಹಾಪ್ರಸಾದ ।
ಇದು ಶರವೇಗದಿ ಹರಿದು ಬಂದ ನಿಮ್ಮ ಅಂತರಂಗದ ನಿಷ್ಕಲ ಪ್ರವಾಹ ।
ಇಂದು ನಾವು ತೇಲಿ ಸಾಗಿದೆವು **"ಗಣ ಮೇಳ"** ಗಳೆಂಬ ಅನಂತ ದೋಣಿಗಳಲಿ ।
ಮುಟ್ಟುವೆವು ದಡ ದಾಂಟಿ ಕೂಡಲ ಸಂಗಮದ ಮಹಾಮನೆ ಮಹಾಮಠದ
ಮಹಾದ್ವಾರವ ।
ಚುಳುಕಾದ ಚೇತನವ ತಿಳಿಗೊಳಿಸಿ ತಿಳಿಸಿದ ಧರ್ಮದ ಗುರುವೇ ವಿಶ್ವಾತ್ಮನನೇ
ಪೂಜಿಸುವೆವು ಅಂಗೈ ಮೇಲೆ ಲಿಂಗವನಿರಿಸಿ ।
ಛೇದಿಸುವೆವು ದುರಿತ ಕರ್ಮಂಗಳ ಇಷ್ಟಲಿಂಗದಲಿ ।
ನಿಷ್ಠೆಯ ದೃಷ್ಟಿಯನ್ನಿರಿಸಿ ಕಾಣುವೆವು ಪ್ರಾಣಲಿಂಗವ ಛೇದಿಸಿ ।
ಸೇರುವೆವು ಪ್ರೀತಿ ವಿಶ್ವಾಸದಿಂದ ಭಕ್ತಿ ಎಂಬ ಪಥದಿಂದ "ಶಿವರಂಗ" ವೆಂಬ
ಮಹಾಮನೆಯ ಮಹಾಮಠದೊಳಗೆ ।

ಜೈ ಶ್ರೀ ಗುರು ಬಸವೇಶ ಹರಹರ ಮಹಾದೇವ ಎಂಬ ಮಂತ್ರ ಘೋಷಣೆಯಲ್ಲಿ ಮಿಡಿದು ನುಡಿಯುವುದು "ತರಂಗಿಣಿ" ಮಹಾಜಗದ್ಗುರುವೆ ಶರಣಾರ್ಥಿ ॥

— ★ ★ ★ —

ಪೂಜ್ಯ ಅಪ್ಪಾಜಿಯವರೇ, ನಿತ್ಯ ಹಸಿರೆತ್ತಿ ನಿಂತು ತಂಪನ್ನೀಯುವ ನಿಸರ್ಗ ಸುಂದರ ನೋಟದ ರಮ್ಯವಾದ ಬಣ್ಣದ ನಾಡು, ಕನ್ನಡ–ಮರಾಠಿ ಬಾಂಧವ್ಯ ಸಂಗಮದ ಶೀಮೆಯ ನಾಡು, ವೀರರಾಣಿ ಕಿತ್ತೂರು ಚೆನ್ನಮ್ಮ, ವೀರವೀರಾಂಗನೆ ಬೆಳವಡಿ ಮಲ್ಲಮ್ಮ, ಶೂರ ಸಂಗೊಳ್ಳಿ ರಾಯಣ್ಣ ಜನಿಸಿದ ನಾಡು, ಅಂದದ ಚೆಂದದ ನಗರ ಬೆಳಗಾಂವಿಯಲ್ಲಿ ಇದೇ ವರ್ಷ 1994 ನೇ ಇಸ್ವಿಯ ಜನವರಿ 27 ರಂದು ಶುಭಾರಂಭ ಮಾಡಿ ಇದೇ ಮಾರ್ಚ್ ತಿಂಗಳಿನ 22 ನೇ ತಾರೀಖಿನಂದು ಸನ್ಮಂಗಲ ಸಮಾರೋಪ ಮಾಡುತ್ತಿರುವ ತಮ್ಮ "ವಿಶ್ವಧರ್ಮ ಪ್ರವಚನ" ಎಂಬ ವಾಗ್‌ಧಾರೆಯನ್ನು ಅಮೃತದಂತೆ ಸವಿಸವಿದು ಸೇವಿಸಿದ ಬೆಳಗಾವಿಯ ಶರಣರಾದ ನಾವು ನಿಮ್ಮನ್ನು ಕೊಂಡಾಡಲು ಶಬ್ದಗಳೇ ಸಾಲುತ್ತಿಲ್ಲ. ಮಾತಿಗೊಮ್ಮೆ ನಮ್ಮಪ್ಪ ಬಸವಣ್ಣ ಎನ್ನುತ್ತ ನಿಮ್ಮ ಮುಖವಾಣಿ ಪ್ರವಚನವಾಗಿ ಹೊರಹೊಮ್ಮಿ ನಮ್ಮೆಲ್ಲರ ಕಿವಿಯ ಪಟಲಗಳಿಗೆ ಅಪ್ಪಳಿಸಿದಾಗ ಆನಂದಾಶ್ರುಗಳು ತಡೆಯಲಸಾಧ್ಯವಾಗಿ ಹೊರಚಿಮ್ಮುತ್ತಿದ್ದವು. ಕಾರಣ ಬಸವಪುತ್ರರೇ, ಬೆಳಗಾವಿಯ ಶರಣರೆಲ್ಲ ನಾವು ನಿಮಗೆ ಚಿರಋಣಿಯಾಗಿದ್ದೇವೆ. ಇದಕ್ಕೆ ನಮ್ಮೆಲ್ಲರ ಹೃದಯದಿಂದ ಹೊರಹೊಮ್ಮಿದ ಈ ಮೇಲಿನ ಆ ವಚನವೇ ಸಾಕ್ಷಿ:

"ಬಸವ ಕ್ರಾಂತಿ"ಯ ದಿನ ನಿರ್ಣಾಯಕ ನ್ಯಾಯ ಪುಂಗವರೇ, ಜಂಗಮರು ಎನ್ನುವ ಜಾತಿಯಲ್ಲಿ ಹುಟ್ಟಿ ಬೆಳೆದವರು ಮಾತ್ರ "ಜಂಗಮ" ಸ್ವರೂಪರಲ್ಲ ಎಂದು ಮನವರಿಕೆಯಾಯಿತು. ಬಸವಾದಿ ಶರಣರ ಸಮಾನತೆ ಸಾರುವ ವಚನ ಸಾಹಿತ್ಯವನ್ನು ಒಪ್ಪಿ, ಬಸವಣ್ಣನವರೇ ಕರಸ್ಥಲಕ್ಕೆ ಲಿಂಗವನ್ನು ಕೊಟ್ಟವರು ಎನ್ನುವದನ್ನು ಮನಸ್ಸಾರೆ ಅಂಗೀಕರಿಸಿ ಅರಗಿಸಿಕೊಂಡು ಬಸವನ ಪಾದವನ್ನು ತಲೆಮೇಲೆ ಹೊತ್ತು ನುಡಿದು ಸಾಕ್ಷಿಯಾಗಿ ನಡೆಯುವ ಹಾರುವನಿಂದ–ಹೊಲೆಯನವರೆಗೂ ಅಂತಪ್ಪಮಾತ್ರ "ಜಂಗಮ" ಎನ್ನುವದು ನಮಗೆ ವೇದ್ಯವಾಯಿತು. ಹಣವಿದ್ದವರು ಹಣವಂತರು, ವಿದ್ಯೆಇದ್ದವರು ವಿದ್ಯಾವಂತರು, ಭಾಗ್ಯವಿದ್ದವರು ಭಾಗ್ಯವಂತರು, ಅದೃಷ್ಟವಿದ್ದರು ಅದೃಷ್ಟವಂತರು, ಪುಣ್ಯ ಮಾಡುವವರು ಪುಣ್ಯವಂತರು, ನೀತಿ ಇದ್ದವರು ನೀತಿವಂತರು. ಅಂಗದಮೇಲೆ ಲಿಂಗವಿದ್ದವರು ಲಿಂಗವಂತರು ಎಂದು ಸರಳೀಕರಣ ಮಾಡಿ ನೀವು ಅರುಹಿದ ಮೇಲೆಯೇ ನಾವು ವೀರಶೈವರಲ್ಲ–ನಾವು ಲಿಂಗವಂತರು ಎಂದು ವೇದ್ಯವಾಯಿತು. ಬಸವಣ್ಣನವರೇ ನಮ್ಮ ಧರ್ಮಗುರು, ವಚನ ಸಾಹಿತ್ಯವೇ ನಮ್ಮ ಧರ್ಮ ಸಂಹಿತೆ, ಕೂಡಲ ಸಂಗಮವೇ ನಮ್ಮ ಧರ್ಮಕ್ಷೇತ್ರ, ಇಷ್ಟಲಿಂಗವೇ ನಮ್ಮ ಧರ್ಮಲಾಂಛನ, ಬಸವ ಮಂತ್ರದ ಲಿಪಿಯ ಷಟ್ಕೋನಧ್ವಜವೇ ನಮ್ಮ ಧರ್ಮ ಧ್ವಜ, ಕಲ್ಯಾಣ ರಾಜ್ಯ ನಿರ್ಮಾಣವೇ ನಮ್ಮೆಲ್ಲರ ಧ್ಯೇಯ ಎಂದು ನೀವು ಸಾರಿದ ಷಟ್‌ಸೂತ್ರಗಳು ನಮ್ಮೆಲ್ಲರಿಗೂ ಧರ್ಮಕ್ಕಾಗಿ ದುಡಿಯಲು ಹೊಸ ಬೆಳಕನ್ನು ಚೆಲ್ಲಿವೆ. 55ದಿನಗಳ ವಿಶ್ವಧರ್ಮ ಪ್ರವಚನದಲ್ಲಿ **ಪೂಜ್ಯ ಲಿಂಗಾನಂದ ಮಹಾ–**

ಜಗದ್ಗುರುಗಳು ಪಾಯಸವನ್ನು ಹರಿಸಿದರೆ, ಪೂಜ್ಯ ಗಂಗಾಮಾತಾಜಿಯವರು ಪಾಯಸದ ಮೇಲೆ ಹಾಲಿನ ಹೊಳೆ ಹರಿಸಿದರು. ಇವೆರಡರ ಮೇಲೆ ಪ್ರಪ್ರಥಮ ಮಹಿಳಾ ಜಗದ್ಗುರು ಪೂಜ್ಯ ಮಾತೆ ಮಹಾದೇವಿ ಮಾತಾಜಿಯವರು ತುಪ್ಪವನ್ನು ಸವರಿ ಹಾಲು ತುಪ್ಪ ಪಾಯಸದಂತೆ ಪ್ರವಚನವನ್ನು ಸವಿದೆವು ಎಂದು ಆನಂದದಿಂದ ಕೃತಜ್ಞತೆ ಹೊಂದಿ ಈ ಬಿನ್ನವತ್ತಳೆಯನ್ನು ನಿಮ್ಮ ಸನ್ನಿಧಿಗೆ ಅರ್ಪಿಸುವ.

ರಾಷ್ಟ್ರೀಯ ಬಸವದಳ, ಬೆಳಗಾವಿ

ರಚನೆ : ಅರ್ಪಿಸಿದವರು

ಶರಣ. ಮಡಿವಾಳಪ್ಪ ಮುಳಗುಂದ ಸಂಚಾಲಕರು, ರಾ. ಬ. ದ, ಬೆಳಗಾಂವ

ಶರಣ. ಸಿದ್ಧಣ ಬಸಪ್ಪ ಸುಲ್ತಾನಪುರ ಅಧ್ಯಕ್ಷರು. ರಾ. ಬ. ದ, ಬೆಳಗಾಂವ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

ಬೆಳಗಾಂವ ನಗರದ ವತಿಯಿಂದ

ಸನ್ಮಾನ ಪತ್ರ

ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರೇ :—

ಬೆಳಗಾವಿ ನಗರವು ಕರ್ನಾಟಕದ ಗಡಿಭಾಗದಲ್ಲಿರುವ ಅಚ್ಚಕನ್ನಡದ ಗಂಡು ಮೆಟ್ಟಿನ ನೆಲ. ಶಿಕ್ಷಣ ಪ್ರೇಮಿ ಶರಣ ಶಿರಸಂಗಿ ಲಿಂಗರಾಜರು ತಮ್ಮ ಸರ್ವ ಆಸ್ತಿ-ಯನ್ನು ಶಿಕ್ಷಣ ಸಂಸ್ಥೆಗೆ ದಾನ ಮಾಡಿದ್ದು ಇದು ದಾಸೋಹಿಗಳ ನಾಡೆಂಬುದಕ್ಕೆ ಸಾಕ್ಷಿ-ಯಾಗಿದೆ. ತತ್ಫಲವಾಗಿ ಶಿಕ್ಷಣದಲ್ಲಿ ಅದ್ಭುತ ಪ್ರಗತಿ ಹೊಂದಿದೆ. ವಾಣಿಜ್ಯ–ಉದ್ಯ-ಮಗಳಲ್ಲಿ ಮುಂದುವರಿದ ಈ ನಗರ ಅನೇಕ ಮಹಾತ್ಮರಿಗೆ ಶರಣರಿಗೆ ಅದರಲ್ಲೂ ವೀರರಿಗೆ, ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಕಹಳೆಯನ್ನೂದಿ ಸ್ವಾತಂತ್ರ್ಯದ ಬೆಳ್ಳಿ ಚುಕ್ಕೆ ಎನ್ನಿಸಿಕೊಂಡ ವೀರರಾಣಿ ಕಿತ್ತೂರು ಚೆನ್ನಮ್ಮನಿಗೆ ಜನ್ಮಕೊಟ್ಟ ವೀರಭೂಮಿ.

ಧರ್ಮ – ಆಧ್ಯಾತ್ಮದಲ್ಲಿ ಆಸಕ್ತಿ ಹೊಂದಿದ ಈ ನಗರಕ್ಕೆ ತಾವು ದಿನಾಂಕ ೨೭–೧–೯೪ ರಂದು ಪಾದಾರ್ಪಣೆ ಮಾಡಿ ೫೫ ದಿನಗಳವರೆಗೆ ಅವ್ಯಾಹತವಾಗಿ ಸರಳ ಸುಂದರ ಭಾಷೆಯಲ್ಲಿ ಪ್ರವಚನ ಮಾಡಿ, ಎಷ್ಟೇ ಪುರಾಣ ಪ್ರವಚನ ಕೇಳಿದ್ದರೂ ಬಸವ ತತ್ವದ ಘನತೆಯನ್ನರಿಯದ ನಮಗೆ ಬಸವ ತತ್ವದ ಹುಚ್ಚು ಹಿಡಿಸಿ ಪ್ರವಚನ ಕೇಳುವ ಗೀಳು ಹಿಡಿಸಿದ್ದೀರಿ. ಇಲ್ಲಿಯ ಲಿಂಗರಾಜ ಕಾಲೇಜಿನಲ್ಲಿ ಶಿಕ್ಷಣ ಪೂರೈಸಿ ಅಪಾರ ವಾಗ್ಮಿತ್ವ ಪಾಂಡಿತ್ಯಗಳನ್ನು ಹೊಂದಿ ಇಲ್ಲಿಗೆ ಧರ್ಮ ಬೋಧೆ ಮಾಡಲು ಬಂದಿರುವ-ದನ್ನು ನೋಡಿದ ನಿಮ್ಮ ಪೂರ್ವಾಶ್ರಮದ ಸಹಪಾಠಿಗಳಿಗೆ, ಸ್ನೇಹಿತರಿಗೆ ಮತ್ತು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ.

(39ನೇ ಪುಟಕ್ಕೆ ಮುಂದುವರಿದಿದೆ)

ಕೂಡಲ ಸಂಗಮದಲ್ಲಿ ಪಂಚಾಚಾರ್ಯರ ನಡೆವಳಿಕೆ ಸರಿಯೆ?

[ಸಮಾಜ ಬಾಂಧವರಲ್ಲಿ ಈ ಲೇಖಕನ ಬಿನ್ನಹ]

—ಸಿ. ಎಂ. ಗಂಗಪ್ಪ, ಹಾಸನ.

ಇದೇ ನಮ್ಮ ಕರ್ನಾಟಕ ರಾಜ್ಯದ ಬಿಜಾಪುರ ಜಿಲ್ಲೆಯಲ್ಲಿರುವ ವಿಶ್ವಗುರು ಬಸವಣ್ಣನವರ ಶಿಕ್ಷಣ ಮತ್ತು ಲಿಂಗೈಕ್ಯ ಪುಣ್ಯಕ್ಷೇತ್ರವಾದ ಕೂಡಲ ಸಂಗಮದಲ್ಲಿ ಲಿಂಗಾಯತ ಧರ್ಮದ ಭಕ್ತಾದಿಗಳ ನೆರವಿನಿಂದ ಅಲ್ಲಿಯ ಬಸವ ಧರ್ಮಪೀಠದವರು ಬಹಳ ವರ್ಷಗಳಿಂದ ಬಸವ ಕ್ರಾಂತಿ ದಿನಾಚರಣೆಯ ಅಂಗವಾಗಿ ಜನವರಿ ಒಂಭತ್ತನೇ ತಾರೀಖಿನಿಂದ ಹದಿನೈದನೇ ತಾರೀಖು ಪೂರ್ತಿ ಶರಣ ವಚನ ಪಠಣ ಸಪ್ತಾಹ, ಶರಣ ಮೇಳ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವುದು ಸರ್ವರಿಗೂ ಸಹ ತಿಳಿದ ಸಂಗತಿಯೇ ಆಗಿರುತ್ತೆ.

ಈ ವರ್ಷವೂ ಸಹ ಈ ಸಂಬಂಧದಲ್ಲಿ ಕೆಲಸಕಾರ್ಯಗಳು ನಡೆಯುತ್ತಿರುವಾಗ್ಯೆ ವೀರಶೈವ ಮತದ ಪಂಚಾಚಾರ್ಯ ಪೀಠಗಳವರು ಈ ಶರಣ ಮೇಳ ವಗೈರೆ ಕಾರ್ಯ ಕ್ರಮಗಳನ್ನು ತಡೆಗಟ್ಟುವ ಉದ್ದಿಶ್ಯದಿಂದ ಈ ಸಮಯದಲ್ಲಿಯೇ ತಮ್ಮ ಅಡ್ಡ-ಪಲ್ಲಕ್ಕಿ ಉತ್ಸವವನ್ನು ಏರ್ಪಾಡು ಮಾಡಿಸಿಕೊಂಡು ಗಲಭೆ ಎಬ್ಬಿಸಿ ಶರಣ ಮೇಳ ನಡೆಯದಂತೆ ಮಾಡಲು ಹಂಚಿಕೆ ಹೂಡಿರುವುದಾಗಿ ತಿಳಿದು ಬಂದಿತು. ಆಗ ಅವರಿಗೆ ಆಪ್ತರಾದ ಮತ್ತು ಸಮಾಜ ಶ್ರೇಯೋಭಿಲಾಷಿಗಳಾದ ಅನೇಕ ವೀರಶೈವ ಗಣ್ಯರು ಹೀಗೆ ಮಾಡಿ ಸಮಾಜದ ಒಳ್ಳೆಯ ಕಾರ್ಯವನ್ನು ಪ್ರತಿರೋದಿಸುವುದು ಸರಿಯಲ್ಲವೆಂದು ಹಿತವಾದ ಹೇಳಿದರೂ ಕೇಳದೆ ತಾರೀಖು 14-1-1994ರಲ್ಲಿ ನಡೆಸಬೇಕೆಂದಿದ್ದ ತಮ್ಮ ಅಡ್ಡಪಲ್ಲಕ್ಕಿ ಉತ್ಸವವನ್ನು ತಾರೀಖು 10-1-94 ಮತ್ತು 11-1-94 ರಂದು ನಡೆಸಲು ಏರ್ಪಾಡು ಮಾಡಿಸಿಕೊಂಡು ಈ ಬಗ್ಗೆ ಪ್ರಚಾರಕ್ಕಾಗಿ ಕರಪತ್ರಗಳನ್ನು ಹೊರಡಿಸಿದರು.

ಈ ಉತ್ಸವಕ್ಕೆ ಜನ ಸಂದಣಿ ಸೇರಲಾರದೆಂಬ ಶಂಕೆಯಿಂದ ಆ ಕರಪತ್ರಗಳಲ್ಲಿ ಒಂದುಕಡೆ ವಿಶ್ವಗುರು ಬಸವಣ್ಣನವರ ಐಕ್ಯಮಂಟಪ ಚಿತ್ರ ಮತ್ತೊಂದು ಕಡೆ ಅವರ ಭಾವಚಿತ್ರವನ್ನು ಹಾಕಿಸಿ, ಕರಪತ್ರಗಳನ್ನು ಮುದ್ರಿಸಿ ಮುಗ್ಧ ಜನತೆಯನ್ನು ಆಕರ್ಷಿ-ಸಲು ಪ್ರಚಾರ ನಡೆಸಿದ್ದರು.

ಈ ಕೃತ್ರಿಮ, ಕುತ್ಸಿತ ತಂತ್ರಗಾರಿಕೆಯನ್ನು ಅರಿಯದ ವೀರಶೈವ ಸಮಾಜದ ಜನತೆಯನ್ನು ವಂಚಿಸಿ ಮೆರವಣಿಗೆ ನಡೆಸಿದರು. ಮೆರವಣಿಗೆ ನಡೆಯುವಾಗ "ಬಸವ ಕ್ರಾಂತಿ ದಿನದ ಮಹೋತ್ಸವ"ದ ಅಂಗವಾಗಿ ಬಸವ ಧರ್ಮ ಪೀಠದವರು ಮಹಾ-ಮನೆಯ ಎದುರು ಹಾಕಿದ್ದ "ಶರಣು ಬನ್ನಿ" ಎಂಬ ಸ್ವಾಗತ ಕಮಾನನ್ನಲ್ಲದೆ ಅದರ

ಮೇಲ್ಭಾಗದಲ್ಲಿ ಕಟ್ಟಿದ್ದ ವಿಶ್ವಗುರು ಬಸವಣ್ಣನವರ ಭಾವಚಿತ್ರವನ್ನು ಮತ್ತು ಷಟ್‌ಸ್ಥಲ ಧ್ವಜವನ್ನು ಕಿತ್ತು ನೆಲಕ್ಕೆ ಬಿಸಾಡಿ ಅದರ ಮೇಲೆ ಮೆರವಣಿಗೆ ನಡೆಸಿದರು. ಹೀಗೆ ವಿಶ್ವಗುರು ಬಸವಣ್ಣನವರಿಗೆ ತುಂಬಾ ಅವಮಾನ ಮಾಡಿದ್ದಲ್ಲದೆ ತನ್ಮೂಲಕ ಇಡೀ ವೀರಶೈವ ಜನಾಂಗಕ್ಕೆ, ಬಸವ ತತ್ತ್ವಾಭಿಮಾನಿಗಳಿಗೆ ಅಪಮಾನ ಮಾಡಿ ಎಲ್ಲರ ಮನಸ್ಸಿಗೂ ಅಪಾರ ದುಃಖ ಮತ್ತು ನೋವನ್ನುಂಟು ಮಾಡಿದ್ದಾರೆ.

ಬಸವ ಧರ್ಮಪೀಠದ ಮಹಾಮನೆಯ ಹತ್ತಿರ ಇವರ ಉತ್ಸವದ ಪ್ರಕಟಣೆಗೆ ಮೊದಲೇ ನಿರ್ಮಿತವಾಗಿದ್ದ ಸ್ವಾಗತ ಕಮಾನು ಮತ್ತು ವಿಶ್ವಗುರು ಬಸವಣ್ಣನವರ ಭಾವಚಿತ್ರದ ಕೆಳಗೆ ಮೆರವಣಿಗೆ ಹೋದರೆ ತಮ್ಮ ಪ್ರತಿಷ್ಠೆಗೆ ಕುಂದು ಎಂದು ಭಾವಿಸಿದ್ದರೆ (ಸಿನಿಮಾ ನಟ ನಟಿಯರ ಭಿತ್ತಿ ಚಿತ್ರಗಳನ್ನು ಅಂಟಿಸಿದ್ದ ಬೆಂಗಳೂರಿನ ಅಡ್ಡ ಸೇತುವೆಗಳ ಕೆಳಗೆ ಮೆರವಣಿಗೆ ಹೋದರೆ ಇವರ ಪ್ರತಿಷ್ಠೆಗೆ ಕುಂದಿಲ್ಲ) ಮೆರವಣಿಗೆ ದಾರಿಯನ್ನು ಪಕ್ಕಕ್ಕೆ ಬದಲಿಸಿ ಮೆರವಣಿಗೆ ನಡೆಸಬಹುದಾಗಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಸ್ವಾಗತ ಕಮಾನು ಮತ್ತು ಬಸವಣ್ಣನವರ ಭಾವಚಿತ್ರಗಳನ್ನು ಕಿತ್ತು ಮೆರವಣಿಗೆಯನ್ನು ತೆಗೆದುಕೊಂಡು ಹೋದರು. ಇದಕ್ಕೆ ಸಂಗಮೇಶ್ವರ ದೇವಾಲಯ ಮತ್ತು ಐಕ್ಯಮಂಟಪದ ಬಸವ ತತ್ತ್ವದಲ್ಲಿ ನಂಬಿಕೆಯಿಲ್ಲದ ಬಸವ ದ್ವೇಷಿ ಟ್ರಸ್ಟ್‌ನ ಕುಮ್ಮಕ್ಕು ಬೇರೆ. ಆದುದರಿಂದ ಈ ಪಂಚಾಚಾರ್ಯರು ಮತ್ತು ಟ್ರಸ್ಟ್ ಅಧಿಪತಿಗಳೂ ಸೇರಿ ಅಲ್ಲಿ ಶರಣ ಮೇಳ ನಡೆಯಗೊಡಬಾರದೆಂಬ ದುರುದ್ದೇಶದಿಂದ ಜಗಳ ತೆಗೆಯಲು ಮಾಡಿದ ಅತಿ ಹೇಯಕರವಾದ ಒಳಸಂಚು ಹಾಗೂ ಹೀನ ಕೃತ್ಯವಿದೆಂಬುದು ನಿಚ್ಚಳವಾಗಿರುತ್ತೆ.

ಇದನ್ನು ಪೂರ್ವಭಾವಿಯಾಗಿಯೇ ಗುಪ್ತಚಾರ ದಳದ ಮುಖಾಂತರ ಅರಿತುಕೊಂಡು ಸರ್ಕಾರದವರು ಈ ಪಂಚಪೀಠಾಧೀಶರಿಗೆ ಈ ಸಮಯದಲ್ಲಿಯೇ ತಮ್ಮ ಮೆರವಣಿಗೆ ನಡೆಸಲು ಅವಕಾಶವೀಯಬಾರದಿತ್ತು. ಪಾಪ! ಸರ್ಕಾರದವರಿಗೆ ಜನಹಿತಕ್ಕಿಂತ ಶಾಸಕರ ಮರ್ಜಿ (ಇಷ್ಟ) ಯನ್ನು ಹಿಡಿ (ಇಷ್ಟವನ್ನು ಅನುಸರಿಸುವುದು) ಯುವುದೇ ತಮಗೆ ಅನುಕೂಲ ಮತ್ತು ನ್ಯಾಯವೆಂದು ಕಂಡು ಬಂದಿರಬಹುದೇನೋ ?

ಈ ಪಂಚಪೀಠಾಧೀಶರು ವಿಶ್ವಗುರು ಬಸವಣ್ಣನವರ ಭಾವಚಿತ್ರವನ್ನೂ ಅವರ ಲಿಂಗೈಕ್ಯ ಮಂಟಪದ ಚಿತ್ರವನ್ನೂ ಪ್ರಚಾರಕ್ಕೆ ಬಳಸಿಕೊಂಡು ಪುನಃ ಅವರಿಗೇ ಅವಮಾನ ಮಾಡುವ ಹೀನಕೃತ್ಯ ನಡೆಸಿದ್ದು ತುಂಬಾ ವಿಷಾದನೀಯ. ಇವರಿಗೆ ಇಂತಹ ಕುತ್ಸಿತ ಬುದ್ಧಿ ಏಕೆ ? ಇವರು ನಡೆಸಿದ್ದು ಕಾರ್ತಿಕೋತ್ಸವವಂತೆ ! ಅದನ್ನು ಅವರು ಕಾರ್ತಿಕಮಾಸದಲ್ಲೇ ನಡೆಸಬಹುದಾಗಿತ್ತಲ್ಲ ! ಅಥವಾ ಈ ಶರಣ ಮೇಳಕ್ಕೆ ಇನ್ನೂ ಮುಂಚೆ ಅಥವಾ ಅನಂತರ ನಡೆಸಬಹುದಾಗಿತ್ತಲ್ಲ ! ಈ ಸಮಯದಲ್ಲೇ ಏಕೆ ನಡೆಸಬೇಕಾಗಿತ್ತು ? ಕಾರಣ ಸ್ಪಷ್ಟವಾಗಿಯೇ ಇದೆ. ಅವರ ಮತ್ತು ಅವರ ಅನುಯಾಯಿ, ಶಾಸಕ ಕಾಶಪ್ಪನವರ ಬಸವ ದ್ವೇಷ.

ಈ ಪಂಚಾಚಾರ್ಯರು ಈ ವರುಷ ಧೂರ್ತತನದಿಂದ ವರ್ತಿಸಿ, ವಿಶ್ವಗುರು ಬಸವಣ್ಣನವರಿಗೆ ಅಪಮಾನ ಮಾಡಿ, ಇಡೀ ವೀರಶೈವ ಸಮಾಜಕ್ಕೆ ಅಪಚಾರ

ಮಾಡಿದ್ದಾರೆ. ಗುರುದ್ರೋಹಿಗಳೂ, ಧರ್ಮ ದ್ರೋಹಿಗಳಾಗಿದ್ದಾರೆ. ಇವರ ಈ ದುರ್ವರ್ತನೆಯನ್ನಲ್ಲದೆ ಇವರಿಗೆ ಸಹಾಯಕರಾಗಿ ಇವರನ್ನು ಮೆರೆಸಲು ಧೂರ್ತತನದಿಂದ ತನ್ನ ಶಾಸಕ ಹುದ್ದೆಯ ಪ್ರಭಾವವನ್ನು ಉಪಯೋಗಿಸಿಕೊಂಡು, ತನ್ನ ಗೂಂಡಾ ಅನುಯಾಯಿಗಳ ಮುಖಾಂತರ ಧಾಂದಲೆ ನಡೆಸಿದ ಶ್ರೀ S. R. ಕಾಶಪ್ಪನವರ ದುರ್ವರ್ತನೆಯನ್ನೂ ಮತ್ತು ವಂಶಪಾರಂಪರ್ಯವಾಗಿ ಶ್ರೀ ವಿಶ್ವಗುರುವಿನ ಲಿಂಗೈಕ್ಯ ಮಂಟಪವನ್ನು ಒಂದು ಕಡೆ ಪೂಜಿಸಿ, ಆ ಗುರುವಿನ ಭಕ್ತರ ಕಾಣಿಕೆಯಿಂದ ಉಪಜೀವಿಸುತ್ತಾ ಉದ್ಧಟರಾಗಿ, ಗುರುದ್ರೋಹಿಗಳಾಗಿ ಬಸವ ದ್ವೇಷಿಗಳಿಗೆ ಪ್ರೋತ್ಸಾಹಕರಾಗಿ,ಸಹಾಯಕರಾಗಿ ವರ್ತಿಸಿದ ಟ್ರಸ್ಟ್‌ನವರನ್ನು ಎಷ್ಟು ಖಂಡಿಸಿದರೂ ಸಾಲದು. ಇವರ ಈ ವರ್ತನೆ ಅಕ್ಷಮ್ಯವಾದದ್ದು. ಶ್ರೀ S. R. ಕಾಶಪ್ಪನವರು ಈ ರೀತಿ ವರ್ತಿಸಿ ತಮ್ಮ ರಾಜಕೀಯ ಜೀವನದ ಗೋರಿಯನ್ನು ತಾವೇ ತೋಡಿಕೊಂಡಿದ್ದಾರೆ.

ಕೂಡಲ ಸಂಗಮದ ಬಸವ ಧರ್ಮ ಪೀಠದ ಮಹಾಜಗದ್ಗುರು **ಶ್ರೀ ಶ್ರೀ ಲಿಂಗಾನಂದ ಮಹಾಸ್ವಾಮಿಗಳವರೂ,** ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರೂ,** ಮತ್ತು ಇತರ ಮಠಾಧೀಶರೂ, ಪ್ರಮುಖ ಭಕ್ತ ಮಹನೀಯರೂ ಈ ಕೂಡಲ ಸಂಗಮದಲ್ಲಿ ಸೇರಿದ್ದ ಜನರನ್ನು ಸಾಂತ್ವನಗೊಳಿಸಿ, ಸಮಾಧಾನಿಸದಿದ್ದರೆ ಆ ದಿನ ಈ ಪಂಚಪೀಠಾಧೀಶರ ಗತಿ ಏನಾಗುತ್ತಿತ್ತೋ ಶಿವನೇ ಬಲ್ಲ. ಮೇಲ್ಕಾಣಿಸಿರುವ ಶ್ರೀ ಗುರುದ್ವಯರ ಮತ್ತಿತರರ ಸಮಯೋಚಿತ ಸಂಯಮಯುತ ಬುದ್ಧಿವಾದದಿಂದ ನಡೆಯಬಹುದಾಗಿದ್ದ ಒಂದು ದೊಡ್ಡ ಅನಾಹುತವು ತಪ್ಪಿದ್ದಲ್ಲದೆ ಲಿಂಗಾಯತ ಸಮಾಜದ ಒಂದು ಮಹಾ ಕಂಟಕವು ನಿವಾರಣೆಯಾದಂತಾಯಿತು.

ವೀರಶೈವ ಸಮಾಜದ ಮಠಾಚಾರ್ಯರೆಂದು ಹೇಳಿಕೊಳ್ಳುತ್ತಿರುವ ಈ ಪಂಚಪೀಠಾಧೀಶರು ತಮ್ಮ ಮೇಲ್ಮೆಯನ್ನು ಪ್ರದರ್ಶಿಸಲು ಹೋಗಿ ತಾವು ಎಂತಹ ಕೀಳು ಮಟ್ಟದ ಯೋಗ್ಯತೆಯುಳ್ಳವರು ಎಂಬುದನ್ನು ಜಗತ್ತಿಗೇ ತೋರಿಸಿಕೊಂಡಿದ್ದಾರೆ. ಅಹಂಕಾರ, ಮಮಕಾರ, ರಾಗ ದ್ವೇಷಾಸೂಯೆಗಳನ್ನು ಜಯಿಸಿ, ವಿಶ್ವಕಲ್ಯಾಣವನ್ನು ಬಯಸದ ಇವರಿಗೆ ಗುರುಪೀಠವನ್ನಲಂಕರಿಸಲು ಯೋಗ್ಯತೆಯಿದೆಯೇ ? ಎಂಬುದನ್ನು ಸಮಾಜ ಬಾಂಧವರು ಯೋಚಿಸಲಿ. ವಿಶ್ವಗುರು ಬಸವಣ್ಣನವರೆಂಬ ಪ್ರಖರ ಸೂರ್ಯನಿಗೆ ಉಗುಳಲು ಹೋಗಿ ಆ ಉಗುಳು ತಮ್ಮ ಮೇಲೆಯೇ ಬೀಳುವಂತೆ ಮಾಡಿಕೊಂಡಿದ್ದಾರೆ. ವಿಶ್ವವ್ಯಾಪಿಯಾಗಿ ಹರಡುತ್ತಿರುವ ಶ್ರೀ ಬಸವಣ್ಣನವರ ಯಶೋದುಂದುಭಿಯನ್ನು ಕಂಡು ಕರುಬಿ ಅವರ ವಿರುದ್ಧವಾಗಿ ಇವರು ವರ್ತಿಸಿದಷ್ಟೂ ಆ ವಿಶ್ವಗುರುವಿನ ಕೀರ್ತಿ ಪ್ರಭೆಯು ಒಂದಕ್ಕೆ ನೂರ್ಮಡಿಯಾಗಿ, ಸಾಸಿರ ಮಡಿಯಾಗಿ ಪಸರಿಸುತ್ತಾ ಹೋಗುವುದೆಂಬುದನ್ನು ಇವರು ಆದಷ್ಟು ಬೇಗ ಅರಿತುಕೊಂಡು, ಆ ಗುರುವಿಗೆ ಶರಣಾಗುವುದು ಶ್ರೇಯಸ್ಕರ.

ಶ್ರೀ ಬಸವೇಶ್ವರರ ಜೀವಿತ ಕಾಲದಲ್ಲೂ ಇಂತಹ ಕೆಲವು ಕಿಡಿಗೇಡಿಗಳು ಇದ್ದು ಅವರ ಕಾರ್ಯಕ್ಕೆ ಅಡ್ಡಿಪಡಿಸಿದರು. ಶ್ರೀಗುರು ಬಸವಣ್ಣನವರ ಕಾರ್ಯವು ತಾತ್ಕಾಲಿ

ಕವಾಗಿ ಕುಂಠಿತವಾದಂತೆ ಕಂಡುಬಂದರೂ ಅವರ ಅನಂತರ ಅವರ ಬೋಧನೆಗಳು ಪ್ರಸಾರಗೊಳ್ಳುತ್ತಲೇ ಇದ್ದುದಲ್ಲದೆ ಧರ್ಮಪ್ರಸಾರವೂ ಸಹ ಮುಂದುವರಿದಿತ್ತು. ಹದಿನಾಲ್ಕು–ಹದಿನೈದನೇ ಶತಮಾನದಲ್ಲಿ ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಕಾಲದಲ್ಲಿ ಧರ್ಮ ಪ್ರಸಾರವು ಪ್ರಬಲವಾದಾಗ ಎಲ್ಲಾ ಪ್ರತಿಗಾಮಿ ಮತ್ತು ಲಿಂಗಾಯತ ಧರ್ಮ ವಿರೋಧಿ ಶಕ್ತಿಗಳೂ ಕೂಡ ದಿಕ್ಕು ತೋಚದೆ ಶ್ರೀ ಬಸವೇಶ್ವರ ಪ್ರಣೀತ ಲಿಂಗಾಯತ ಧರ್ಮಕ್ಕೆ ಸಾಮೂಹಿಕವಾಗಿ ಧರ್ಮಾಂತರ ಹೊಂದಿದರು. ಆದರೆ ಹತ್ತೊಂಭತ್ತನೇ ಶತಮಾನದ ಆದಿಭಾಗದಿಂದ ತಾವೇ ಮಠಾಚಾರ್ಯರೆಂದು ಹೇಳಿಕೊಳ್ಳುತ್ತಿರುವ, ಶೈವ ಪ್ರಭೇದದ ವೀರಶೈವ ಮತದಿಂದ ಲಿಂಗಾಯತ (ವೀರಶೈವ) ಧರ್ಮಕ್ಕೆ ಧರ್ಮಾಂತರ ಹೊಂದಿ, ತಮ್ಮ ಪೂರ್ವಾಶ್ರಮದ ವಾಸನೆಯನ್ನು ಬಿಡದೆ ಲಿಂಗಾಯತ ಧರ್ಮವನ್ನು ಹಾಳುಮಾಡಲೆತ್ನಿಸುತ್ತಿರುವ ಈ ಪಂಚಪೀಠಾಧಿಪತಿಗಳಿಗೆ ಬೆಂಬಲ ಕೊಡುತ್ತಾ "ವಿನಾಶ ಕಾಲೇ ವಿಪರೀತ ಬುದ್ಧಿಃ" ಎಂಬಂತೆ ಕೆಲವರು ವರ್ತಿಸುತ್ತಿರುವುದು ತುಂಬಾ ಶೋಚನೀಯ.

ಶೈವ ಧರ್ಮ ಸನಾತನವಾದುದೇನೋ ಹೌದು. "ಶಿವ" ಎಂಬ ಯೋಗಿ ವರೇಣ್ಯರು ಶೈವ ಧರ್ಮದ ಹುಟ್ಟಿಗೆ ಕಾರಣರು. ಆದಿಯಲ್ಲಿ ಶಿವನ ಪ್ರಶಿಷ್ಯರಾದ ಆದಿನಾಥ ಅಥವಾ ವೃಷಭನಾಥ ಎಂಬುವವರು ಶೈವಮತವನ್ನು ಸ್ಥಾಪಿಸಿದರು. ಇವರೇ ಜೈನ ಮತ್ತು ಶೈವ ಮತದ ಮೂಲಿಗರೆಂದು ಹೇಳಲಾಗಿದೆ. ಶೈವ ಮತವು ಶೈವ ಮತ್ತು ಜೈನ ಎಂದು ಎರಡು ಮತಗಳಾಗಿ ಒಡೆದಾಗ ರುದ್ರ, ವೀರಭದ್ರ ಮೊದಲಾದವರು ಶೈವ ಮತದ ಪ್ರಸಾರ ಮಾಡುತ್ತಾ, ಕ್ರಮೇಣ ವೇದಾದಿಗಳನ್ನು ತಮ್ಮ ಮತ ಗ್ರಂಥಗಳ ಜೊತೆಗೇ ಪುರಸ್ಕರಿಸುತ್ತಾ ಬಂದರು. ಇದರಿಂದ ವೈದಿಕ ಧರ್ಮದಲ್ಲಿರುವ ಎಲ್ಲಾ ವರ್ಣ, ವರ್ಗ, ಜಾತಿ, ಪಂಗಡ ಭೇದಗಳು ಶೈವ ಮತದಲ್ಲಿಯೂ ಹಾಸು ಹೊಕ್ಕಾಗಿ ಸೇರಿಕೊಂಡವು. ಇವರು ಪುರಾಣ ಶಿವನ ಪ್ರತೀಕಗಳಾದ ಸ್ಥಾವರ ಲಿಂಗಗಳನ್ನು ಗುಡಿಗಳಲ್ಲಿ ಸ್ಥಾಪಿಸಿ ಪೂಜಿಸುತ್ತಿದ್ದರು. ಈ ಶೈವ ಮತದಲ್ಲಿಯೂ ಅನೇಕ ಪಂಗಡಗಳು ಹುಟ್ಟಿಕೊಂಡವು. ಅವುಗಳ ವಿವರಣೆ ಇಲ್ಲಿ ಅಪ್ರಸ್ತುತ. ಈ ಪೈಕಿ ಕೆಲವರು ಸಣ್ಣ ಸಣ್ಣ ಸ್ಥಾವರಲಿಂಗಗಳನ್ನು ತಲೆ, ತೋಳುಗಳು ಮತ್ತು ಸೊಂಟಗಳಲ್ಲಿ ಧರಿಸಿ ತಾವು ಹೋದ ಕಡೆ ಅವುಗಳನ್ನು ಗದ್ದಿಗೆಯ ಮೇಲಿಟ್ಟು ಪೂಜಿಸುತ್ತಿದ್ದರೆಂದು ಗೊತ್ತಾಗಿದೆ. ಶಂಕರಾಚಾರ್ಯರ ಕಾಲದಲ್ಲಿ ಕೆಲವರು ಅದ್ವೈತ ಮತಾವಲಂಬಿಗಳಾಗಿ ಶಿವ ಮತ್ತು ವಿಷ್ಣು ಇಬ್ಬರನ್ನೂ ಪೂಜಿಸುತ್ತಾ ಮಿಶ್ರಶೈವರಾಗಿ ಶಂಕರಾಚಾರ್ಯರ ಅನುಯಾಯಿಗಳಾದರು. ಹನ್ನೆರಡನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಲಿಂಗಾಯತ ಧರ್ಮವನ್ನು ಸ್ಥಾಪಿಸಿ ಪ್ರಸಾರ ಕಾರ್ಯ ಕೈಗೊಂಡಾಗ ಆ ಧರ್ಮದ ಸಿದ್ಧಾಂತ, ದರ್ಶನ,ನೀತಿ, ಸರ್ವಸಮಾನತಾ ತತ್ತ್ವ, ಕಾಯಕ, ದಾಸೋಹ ತತ್ವಗಳ ಆಕರ್ಷಣೆಗೆ ಒಳಗಾಗಿ ಜನ ಸಾಗರವು ತಂಡೋಪತಂಡವಾಗಿ ಈ ಹೊಸ ಧರ್ಮವನ್ನಪ್ಪಿತು. ಇದಕ್ಕೆ ಕಾರಣ ಆಗಿದ್ದ ಎಲ್ಲಾ ಧರ್ಮಗಳು ತುಂಬಾ ಹೀನಾಯ-ಸ್ಥಿತಿಯಲ್ಲಿದ್ದವು. ಧರ್ಮ, ದೇವರು, ದೇವಾಲಯಗಳ ಹೆಸರಿನಲ್ಲಿ ಪುರೋಹಿತ,

ಪೂಜಾರಿಗಳ ದೌರ್ಜನ್ಯ ಶೋಷಣೆಗಳಿಂದ ಜನ ಸಮೂಹವು ತತ್ತರಿಸಿ ಹೋಗಿತ್ತು. ಜನ ರೋಸಿ ಹೋಗಿದ್ದರು. ಶೈವ ಧರ್ಮವಂತೂ ಅತ್ಯಂತ ಶೋಚನೀಯ ಸ್ಥಿತಿ-ಯಲ್ಲಿತ್ತು. ಆದುದರಿಂದ ಇಡೀ ಶೈವ ಮತಾನುಯಾಯಿಗಳು ಲಿಂಗಾಯತ ಧರ್ಮಕ್ಕೆ ಧರ್ಮಾಂತರ ಹೊಂದಿದರು. ಇದರಿಂದ ದಿಕ್ಕುಕೆಟ್ಟವರಾಗಿ ಅವರ ಗುರು ವರ್ಗದವರೂ ಧರ್ಮಾಂತರ ಹೊಂದಿ, ವಿಶ್ವಗುರು ಬಸವಣ್ಣನವರ ಅನುಯಾಯಿಗಳಾದರು. ಮತ್ತೂ ಇವರ ವಿದ್ವತ್ತನ್ನನುಲಕ್ಷಿಸಿ ಹೊಸಧರ್ಮದಲ್ಲಿಯೂ ಇವರನ್ನು ಗುರುಸ್ಥಾನದಲ್ಲಿ ಮುಂದುವರಿಸಲಾಯಿತು. ಹದಿನೆಂಟನೇ ಶತಮಾನದವರೆಗೂ ತಾವು ಗುರುವರ್ಗದವ-ರೆಂದು ತಮ್ಮ ಪ್ರತ್ಯೇಕತೆಯನ್ನು ಕಾಯ್ದುಕೊಂಡು ಬಂದರೂ ಶ್ರೀ ಬಸವಣ್ಣನವರ ದ್ವೇಷಿಗಳಾಗಿರಲಿಲ್ಲ. ಆದರೆ ಬರಬರುತ್ತಾ ತಮ್ಮ ಪೂರ್ವಧರ್ಮದ ವಾಸನೆಯನ್ನು ಬಿಡಲಾರದೆ ಬಸವ ತತ್ತ್ವಗಳಿಗೆ ವಿರುದ್ಧವಾಗಿ ಶೈವ ತತ್ತ್ವಗಳ ಪ್ರತಿಪಾದನೆ ಮಾಡುತ್ತಾ ಹಿಂದಿನ ವರ್ಣ ಭೇದ, ವರ್ಗಭೇದ ಜಾತಿ ಭೇದವೇ ಮೊದಲಾದ ಕಲುಷಿತ ಆಚಾರ ವಿಚಾರಗಳನ್ನು, ಗುಡಿ ಸ್ಥಾವರಲಿಂಗಗಳ ಪೂಜೆ ವಗೈರೆಗಳನ್ನು ಪ್ರತಿಪಾದಿಸುತ್ತಾ ಬಂದು ಈಗ ಧರ್ಮಗುರು ಬಸವಣ್ಣ ಭಕ್ತನೆಂದೂ, ತಾವು ಗುರು ಪೀಠದವರು ಶ್ರೇಷ್ಠರೆಂದೂ ಹೇಳುತ್ತಾ ಬರುತ್ತಿದ್ದಾರೆ. ಇವರ ಈ ವಾದಗಳಿಗೆ ಬೆಂಬಲವಾಗಿ ಹದಿನೆಂಟನೇ ಶತಮಾನದ ಉತ್ತರಾರ್ಧದಿಂದಲೂ ಅನೇಕ ಕೃತಕ ಗ್ರಂಥಗಳನ್ನು ಸೃಷ್ಟಿಸಿ ಹಿಂದೂ ವೈದಿಕರಂತೆ ವರ್ಣ ಭೇದ, ವರ್ಗ ಭೇದ, ಜಾತಿ ಭೇದ ಜೊತೆಗೆ ತಾವು ಲಿಂಗದಲ್ಲಿ (ಸ್ಥಾವರ ಲಿಂಗದಲ್ಲಿ) ಉದ್ಭವಿಸಿದ ಗುರು ಮೂಲದವರೆಂತಲೂ ಹೇಳುತ್ತಾ ಗೋತ್ರ ಸೂತ್ರಗಳ ಕೃತ್ರಿಮ ಸಾಹಿತ್ಯವನ್ನು ರಚಿಸಿ ಇಂದು ಲಿಂಗವಂತರಲ್ಲಿ ಕಂಡು ಬರುತ್ತಿರುವ ಜಾತಿ, ಒಳಪಂಗಡಗಳ ಹುಟ್ಟಿಗೆ ಕಾರಣರಾಗಿ ಅವುಗಳನ್ನು ಬೋಧಿಸುತ್ತಾ ಬರುತ್ತಿದ್ದಾರೆ. ಇವರ ಈ ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತ-ಮಾನದ ಕೃತ್ರಿಮ ಪರಂಪರೆಯ ಸಾಹಿತ್ಯವು ಲಿಂಗಾಯತ ಸಮಾಜವನ್ನು ಅಡ್ಡ, ಉದ್ದ, ಮೇಲೆ, ಕೆಳಗೆ ವಿಚ್ಛೇದಿಸಿ ಲೆಖ್ಖವಿಲ್ಲದಷ್ಟು ಪಂಗಡ ಒಳ ಪಂಗಡಗಳನ್ನು ಸೃಷ್ಟಿಸಿದೆ. ಈ ಪರಂಪರೆಯವರು ತಾವು ಕಲ್ಪಿಸಿ, ಸೃಷ್ಟಿಸಿದ ಸಾಹಿತ್ಯವನ್ನು ಮೂಢ ಜನತೆಗೆ ಪ್ರಾಚೀನ ಕಾಲದ ಸಾಹಿತ್ಯವೆಂದು ನಂಬಿಸುತ್ತಾ ಆ ಮೂಲಕ ಅಸಮಾನತೆಯ, ಅಂಧ ಶ್ರದ್ಧೆಯ ಹಾಗೂ ಶೋಷಣೆಯ ಪರಿಪಾಠಗಳನ್ನು ಬೋಧಿಸುತ್ತಾ ಸಮಾಜವನ್ನು ತಪ್ಪುದಾರಿಗೆಳೆದು ಅಧೋಗತಿಗೊಯ್ಯುತ್ತಿದ್ದಾರೆ,

"ಪಂಚಾಚಾರ್ಯ ಪರಂಪರೆಯವರು ಪ್ರತಿಪಾದಿಸುವ ರೇಣುಕಾಚಾರ್ಯ ಮೊದಲಾದವರು 12 ನೇ ಶತಮಾನದ ಬಸವಾದಿ ಶರಣರ ಸಮಕಾಲೀನರಾದ ರೇವಣ ಸಿದ್ಧಾದಿ ಶರಣರೇ ಹೊರತು ಬೇರೆಯವರಲ್ಲ. ಇವರು ಸ್ಥಾವರ ಲಿಂಗಗಳಲ್ಲಿ ಉದ್ಭವಿಸಲಿಲ್ಲ. ಎಲ್ಲರಂತೆ ಅವರೂ ಜನಿಸಿ ಶ್ರೀ ವಿಶ್ವಗುರು ಬಸವಣ್ಣ ಪ್ರಣೀತ ಲಿಂಗಾಯತ (ವೀರಶೈವ) ಧರ್ಮವನ್ನಪ್ಪಿದವರು. ಬಸವಾದಿ ಶರಣರಂತೆ ಇವರೂ ಸಂಪೂಜ್ಯರು ಎಂಬುದನ್ನು ಲಿಂಗಾಯತ (ವೀರಶೈವ) ಧರ್ಮೀಯರು ಗಮನಿಸಬೇಕು." ಇವರು ಮೊದಲು (ಶೈವರಾಗಿದ್ದಾಗ) ಪೂಜಿಸುತ್ತಿದ್ದುದು ಸ್ಥಾವರ ಲಿಂಗಗಳು. ಆದರೆ

ಲಿಂಗಾಯತ (ವೀರಶೈವ) ಧರ್ಮೀಯರು ಪೂಜಿಸುವ ವಿಶ್ವಪ್ರತೀಕವಾದ ಗೋಲಾಕಾರದ ಇಷ್ಟಲಿಂಗ ಜನಕ ಮತ್ತು ಈ ಧರ್ಮದ ಸಂಸ್ಥಾಪಕರು ವಿಶ್ವಗುರು ಬಸವಣ್ಣನವರೇ ಹೊರತು ಬೇರಾರೂ ಆಗಲು ಸಾಧ್ಯವೇ ಇಲ್ಲ. ಇದು ಶತಸ್ಸಿದ್ಧವಾದುದು.

ಈಚೀಚೆಗೆ ಲಿಂಗಾಯತ (ವೀರಶೈವ) ಧರ್ಮೀಯರು ಈ ಪಥಭ್ರಷ್ಟ, ತತ್ತ್ವವಿರಹಿತ ಗುರುಪೀಠಗಳವರ, ಬಸವ ತತ್ತ್ವಗಳಿಗೆ, ವಿರುದ್ಧವಾದ ತಾರತಮ್ಯಯುತ ಬೋಧೆಗಳಿಗೆ ಸೊಪ್ಪುಹಾಕದೆ ಎಲ್ಲಾ ಪಂಗಡಗಳವರೂ ಪರಸ್ಪರ ಕೊಟ್ಟು ತಂದು ವಿವಾಹಕಾರ್ಯಗಳನ್ನು ನೆರವೇರಿಸುತ್ತಾ ಧರ್ಮಗುರು ಬಸವಣ್ಣನವರ ತತ್ತ್ವಗಳನ್ನು ಆಚರಣೆಗೆ ತರಲು ಪ್ರಾರಂಭಿಸಿದ್ದಾರೆ.

ಇನ್ನಾದರೂ ಲಿಂಗಾಯತ (ವೀರಶೈವ) ಧರ್ಮೀಯರು ಈ ಪಂಚಪೀಠಾಧೀಶರನ್ನು ಕಡೆಗಣಿಸಿ, ಪ್ರಗತಿಪರ ಮಾರ್ಗದಲ್ಲಿ–ಬಸವ ಪಥದಲ್ಲಿ–ಮುನ್ನಡೆದು ಧರ್ಮ ಪ್ರಸಾರ ಮಾಡುತ್ತಿರುವ ಚಿತ್ರದುರ್ಗ ಮುರುಘಾಮಠ, ಚಿತ್ತರಗಿ ಮಹಂತೇಶ್ವರ ಮಠ, ಇಲಕಲ್ಲು, ಗದುಗಿನ ತೋಂಟದಾರ್ಯಮಠ, ಹುಬ್ಬಳ್ಳಿಯ ಮೂರು ಸಾವಿರ ಮಠ, ಸುತ್ತೂರು ಸಂಸ್ಥಾನಮಠ, ಸಿದ್ಧಗಂಗಾಮಠ, ಸಿರಿಗೆರೆ ಸಂಸ್ಥಾನಮಠ, ನಂದೀಗುಡಿ ಸಂಸ್ಥಾನಮಠ, ವಿಶೇಷವಾಗಿ ಕೂಡಲ ಸಂಗಮದ ಬಸವ (ಲಿಂಗಾಯತ) ಧರ್ಮಪೀಠ ಇತ್ಯಾದಿ ಅನೇಕ ಪ್ರಗತಿಪರ ಮಠಗಳ ಮಾರ್ಗದರ್ಶನದಲ್ಲಿ ಮುಂದುವರಿಯುವುದು ಶ್ರೇಯಸ್ಕರ.

ಲಿಂಗಾಯತ ಸಮಾಜದ ವಯೋವೃದ್ಧ ಶರಣ ಮತ್ತು ರಾಜಕಾರಣಿಯಾದ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರು 1992ರ ವೀರಶೈವ ಮಹಾಸಭೆಯಲ್ಲಿ ಹೇಳಿರುವಂತೆ "ವೀರ ಶೈವ ಧರ್ಮ ತತ್ವಗಳಲ್ಲಿಂದ ಬಸವಣ್ಣನವರ ವ್ಯಕ್ತಿತ್ವ, ಬಸವಣ್ಣನವರ ಸಾಧನೆ, ಅವರು ಸಾರಿದ ತತ್ತ್ವ, ಅವರು ಅನುಸರಿಸಿದ ಆದರ್ಶ ಮಾರ್ಗ ಇವುಗಳನ್ನು ತೆಗೆದುಹಾಕಿದರೆ ಉಳಿಯುವುದು ಬರೀ ಶೂನ್ಯಮಾತ್ರ" ಇಂತಹ ರಾಷ್ಟ್ರ ರಾಜಕಾರಣಿ, ಮಹಾಮೇಧಾವಿಯ ಮಾತು ಪೊಳ್ಳುಮಾತೇ ?

ಲಿಂಗಾಯತ ಸಮಾಜದ ಇನ್ನೊಬ್ಬ ವಯೋವೃದ್ಧ ಶರಣ ಮತ್ತು ರಾಷ್ಟ್ರದ ಅತ್ಯುನ್ನತ ಸ್ಥಾನಗಳಲ್ಲಿ ಎರಡನೆಯದಾದ ಉಪರಾಷ್ಟ್ರಪತಿ ಸ್ಥಾನವನ್ನಲಂಕರಿಸಿ (ಕೆಲವು ಕಾಲ ಅತ್ಯುನ್ನತ ಸ್ಥಾನವಾದ–ರಾಷ್ಟ್ರಪತಿಯ ಸ್ಥಾನವನ್ನು ಸಹ) ಎಲ್ಲರ ಪ್ರೀತ್ಯಾದರಗಳಿಗೆ ಪಾತ್ರರಾಗಿರುವ ಶ್ರೀ ಬಿ. ಡಿ. ಜತ್ತಿಯವರು "ಪ್ರಪಂಚದಲ್ಲಿ ಆರ್ಥಿಕ ಕ್ರಾಂತಿ, ಸಾಮಾಜಿಕ ಕ್ರಾಂತಿ, ಸಾಹಿತ್ಯ ಕ್ರಾಂತಿ, ವೈಚಾರಿಕ ಕ್ರಾಂತಿ (ಯಾವುದಾದರೊಂದನ್ನು ತಮ್ಮ ಜೀವಿತಾವಧಿಯಲ್ಲಿ) ಮಾಡಿದವರಿದ್ದಾರೆ.ಆದರೆ ಎಲ್ಲ ಕ್ರಾಂತಿಗಳನ್ನು ಏಕಕಾಲಕ್ಕೆ ಒಬ್ಬರೇ ಮಾಡಿಲ್ಲ. (ವಿಶ್ವಗುರು) ಬಸವಣ್ಣನವರು ಮಾತ್ರ ಎಲ್ಲ ಕ್ರಾಂತಿಗಳನ್ನು (ಧಾರ್ಮಿಕ ಕ್ರಾಂತಿ ಸಹಿತ ಮಾಡಿ) ಏಕಮೇವಾ ದ್ವಿತೀಯವಾಗಿ ಮಾಡಿದವರು. ಅವರಂತಹ ಮಹಾಮಾನವ ಈ ವಿಶ್ವದಲ್ಲಿಯೇ (ಇದುವರೆಗೂ) ಹುಟ್ಟಿಲ್ಲ........ದೀನ ದಲಿತರ ಉದ್ಧಾರಕ್ಕಾಗಿ, ಬಡವರ ಏಳ್ಗೆಗಾಗಿ........ಬಡವರನ್ನು ನೊಂದವರನ್ನು ಮಹಿಳೆಯರನ್ನು (ದಲಿತರನ್ನು) ಜಾಗೃತಗೊಳಿಸಿ, ಸ್ವಾವಲಂಬನೆಯ

ಬದುಕು ಬಾಳುವಂತೆ ಮಾಡುವುದೇ ಧರ್ಮ ಎಂದು ನಂಬಿದ್ದರು. (ವಿಶ್ವಗುರು) ಬಸವಣ್ಣನವರ ಆದರ್ಶಗಳನ್ನು ಅರಿತು ನಡೆದಾಗ ಮಾತ್ರ ಎಲ್ಲರೂ ಮನುಷ್ಯರಾಗುತ್ತಾರೆ" ಎಂದಿದ್ದಾರೆ.

ಕರ್ನಾಟಕ ಪತ್ರಿಕೋದ್ಯಮದ ದಿಗ್ಗಜಗಳಲ್ಲಿ ಒಬ್ಬರಾದ ಶರಣ ಪಾಟೀಲ ಪುಟ್ಟಪ್ಪನವರು– "ಇಡೀ ವೀರಶೈವ ಧರ್ಮಕ್ಕೆ ಬಸವೇಶ್ವರರೊಬ್ಬರೇ ಜಗದ್ಗುರುವಾಗಿದ್ದಾರೆ. ಶ್ರೀ ಬಸವೇಶ್ವರರನ್ನು ಮೀರಿಸಿದ ಜಗದ್ಗುರು ಇನ್ನೊಬ್ಬರಿಲ್ಲ. ಶ್ರೀಬಸವೇಶ್ವರರನ್ನು ವೀರಶೈವದಿಂದ ತೆಗದರೆ ವೀರಶೈವವೇ ಉಳಿಯುವುದಿಲ್ಲ. ವೀರಶೈವ ಧರ್ಮಕ್ಕೆ ಶ್ರೀಬಸವೇಶ್ವರರು ಮೂಲಪುರುಷರು. ಅವರೇ (ಲಿಂಗಾಯತ-ವೀರಶೈವ) ಧರ್ಮದ ಸ್ಥಾಪಕರು. ಪ್ರತಿಯೊಬ್ಬ ವೀರಶೈವನೂ ಇದನ್ನು ಮನಗಾಣಬೇಕು...." ಎಂದಿದ್ದಾರೆ.

ಗೂಳೂರು ಮಹಾಸಂಸ್ಥಾನದ ಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾಸ್ವಾಮಿಗಳು— "ಮಠಾಧಿಪತಿಗಳು ಎಲ್ಲಿಯವರೆಗೆ ಪಲ್ಲಕ್ಕಿ ಬಿಟ್ಟು ಇಳಿಯುವುದಿಲ್ಲವೋ ಅಲ್ಲಿಯವರೆಗೆ ಸಮಾಜದ ಉದ್ಧಾರ ಸಾಧ್ಯವಿಲ್ಲ. ಕೆಲವು ಮಠಾಧಿಪತಿಗಳು ಬೆಳ್ಳಿಪಲ್ಲಕ್ಕಿಯಲ್ಲಿ ಬಂಗಾರದ ಕಿರೀಟ ಹೊತ್ತು ಇಡೀ ಆಯುಷ್ಯವನ್ನು ಉತ್ಸವದಲ್ಲಿ ಕಳೆಯುತ್ತಿದ್ದಾರೆ......ಹಿಂದೆ ಸಮಾಜ ಬೆಳೆಸುವ ಮನೋಭಾವವಿತ್ತು; ಆದರೆ ಈಗ ನಾನು ಹೆಚ್ಚು, ನನ್ನ ಮಠ ಹೆಚ್ಚು ಎನ್ನುವ ಅಹಂಕಾರದಿಂದ ಉತ್ಸವ ಮಾಡಿಕೊಳ್ಳುತ್ತಿದ್ದಾರೆ " ಎಂದು ಹೇಳಿದ್ದಾರೆ.

ವಿಖ್ಯಾತ ವೀರಶೈವ ಸಾಹಿತ್ಯ ದಿಗ್ಗಜಗಳೆಲ್ಲರೂ ವಿಶ್ವಗುರು ಬಸವಣ್ಣನವರನ್ನು ಹಾಡಿಹೊಗಳಿದ್ದಾರೆ. ಪ್ರೊ. ವಿ. ವಿ. ಸಂಗಮದ ಅವರು– "ಶ್ರೀ ಬಸವಣ್ಣನವರು ಭಾರತೀಯ ಸತ್ಪರಂಪರೆಯ ಸಾರವನ್ನೇ ರಸಾಯನವನ್ನಾಗಿ ಮಾಡಿ ಕಟ್ಟಿದ ಈ ಧರ್ಮದ ಹುತ್ತದಲ್ಲಿ ಈ ಪುರೋಹಿತಶಾಹಿ ಸರ್ಪಗಳು ಬಂದು ಸೇರಿವೆ. ಈ ಸರ್ಪಗಳು........ಶ್ರೀ ಬಸವಣ್ಣನವರನ್ನು ಮತ್ತು ಅವರ ಅನುಯಾಯಿಗಳನ್ನು ಕಂಡು ಬುಸುಗುಂಡ ಹತ್ತಿವೆ......ಹೀಗಾಗಿ ಇಂತಹ ಪ್ರತಿಗಾಮಿ ಶಕ್ತಿಗಳಿಗೆ ಸದ್ಯದ ಭವಿಷ್ಯತ್ತಿನಲ್ಲಿಯೇ ವಿಪತ್ತು ಕಾದಿದೆ ಎಂಬ ಆತ್ಮ ಭರವಸೆಯು ಕೋಲ್ಮಿಂಚಿನಂತೆ ಮಿಂಚುತ್ತಿದೆ" ಎಂದಿದ್ದಾರೆ.

ಬೀದರದ "ಉತ್ತರ ಕರ್ನಾಟಕ" ದಿನಪತ್ರಿಕೆಯ ಸಂಪಾದಕರಾದ ಶ್ರೀ ಶಿವಶರಣಪ್ಪ ವಾಲಿಯವರು ವಿಶ್ವಗುರು ಬಸವಣ್ಣನವರನ್ನು ಕುರಿತು ಹೀಗೆ ಹೇಳಿದ್ದಾರೆ– "ಪುರೋಹಿತಶಾಹಿಗೆ ವಿರೋಧಿಸಿ ನಿಂತ ಮಹಾಪುರುಷ, ದೀನ ದಲಿತರಿಗೆ ದಾರಿದೀಪ, ವಿಶ್ವಜ್ಯೋತಿ ಬಸವಣ್ಣ........ಬಸವಣ್ಣನವರು ಕೇವಲ ಧರ್ಮ ಸ್ಥಾಪಕರಲ್ಲ, ಮಾನವೀಯತೆಯ ಸ್ಥಾಪಕರು ವಿಶ್ವದ ಮಾನವರಿಗೆ ದಿಕ್ಸೂಚಿ........ಈ ಪೀಠಾಧೀಶರು ಜಗದ್ಗುರುಗಳಾಗಲು ಸಾಧ್ಯವೇ ? ಇವರು ತಮ್ಮ ಯೋಗ್ಯತೆ ತಾವು ಅರಿತು ಕೊಳ್ಳಬೇಕು........ಧರ್ಮ ಗುರುಗಳು ಪಲ್ಲಕ್ಕಿಯಲ್ಲಿ ಮೆರೆಯಲು ಅಲ್ಲ. ದೀನ ದಲಿತರನ್ನು

ಮೇಲೆತ್ತಲು ಗ್ರಾಮ ಗ್ರಾಮಗಳಿಗೆ ಸುತ್ತಬೇಕು. ಮನೆ ಮನೆಗೆ ಹೋಗಿ ಪ್ರಚಾರ ಮಾಡಬೇಕು.......ವಿಶ್ವಜ್ಯೋತಿ ಬಸವಣ್ಣನವರು ತಾನು ಭಕ್ತನೆಂದು ಹೇಳಿಕೊಂಡರು. ಅವರ ಹಿರಿಮೆಯನ್ನು ಇಡೀ ಜಗತ್ತು ಕಂಡುಕೊಂಡಿದೆ. ಯೋಗ್ಯತೆ ಇಲ್ಲದವರು ಜಗದ್ಗುರುಗಳೆಂದು ಹೇಳಿಕೊಂಡು (ಗೋರ್ಟಾ ಎಂಬ ಸಣ್ಣ ಗ್ರಾಮದಲ್ಲಿಯೇ) ಎಷ್ಟು ಸಣ್ಣವರೆಂದು ತೋರಿಸಿಕೊಂಡರು" ಎಂದು ತಮ್ಮ ಪತ್ರಿಕೆಯ ಸಂಪಾದಕೀಯದಲ್ಲಿ ಬರೆದಿದ್ದಾರೆ.

ಸಿದ್ಧರಾಮೇಶ್ವರ ಶರಣರು, ಬಸವ ಮಹಾಮನೆ, ಬೀದರ ಇವರು "ಜಾಗತಿಕ ಇತಿಹಾಸದಲ್ಲಿ ದೇದೀಪ್ಯಮಾನವಾಗಿ ಬೆಳಗುವ.......ಜಗಜ್ಯೋತಿ ವಿಶ್ವಗುರು ಬಸವಣ್ಣನವರು ಜಾತಿ, ವರ್ಣ, ವರ್ಗ, ಬಡವ–ಬಲ್ಲಿದ, ಆಳು-ಅರಸ, ಸ್ತ್ರೀ–ಪುರುಷ, ಗುರು–ಶಿಷ್ಯ, ದೇವ–ಭಕ್ತ ಮುಂತಾದ ವಿಷಮತೆಯ ಕಗ್ಗತ್ತಲು ಬಸವ ಬೆಳಕಿನ ಸನಿಹದಲ್ಲಿ ಎಂದೆಂದೂ ಸುಳಿಯದಂತೆ ಪ್ರಜ್ವಲಿಸುತ್ತಿದ್ದಾರೆ.......ಶ್ರೀ ಬಸವಣ್ಣನವರು ಸಮಾನತೆ–ಸ್ವತಂತ್ರತೆಯ ಸಮರ್ಥಕ, ಶೋಷಣೆಯ ವಿಮೋಚಕ, ಸತ್ಯ ಶುದ್ಧ ಕಾಯಕ–ದಾಸೋಹ ತತ್ವಗಳ ಪ್ರತಿಪಾದಕ. ಇಹಪರ, ನರಹರ, ಅಂಗಲಿಂಗವೆಂಬ ಭಯ ಭೇದಭಾವವಳಿದು ಎಲ್ಲವನ್ನೂ 'ಶಿವ'ದಲ್ಲೇಕಾರ್ಥಗೊಳಿಸಿ ಸಕಲ ಜೀವಾತ್ಮರಿಗೆ ಲೇಸನೇ ಬಯಸಿ, ಎಲ್ಲರ ಬಾಳಿಗೆ ಬೆಳಕನ್ನಿತ್ತರು. ದಿವ್ಯ ಜ್ಯೋತಿ ಜಗದ್ಗುರು ಬಸವಣ್ಣನವರು, ಜ್ಯೋತಿಯು ತಾನು ಮುಟ್ಟಿದ ಬತ್ತಿಗಳನ್ನು ತನ್ನಂತೆ ಮಾಡಿಕೊಳ್ಳುವಂತೆ, ಅವರಿವರೆನ್ನದೆ ತನ್ನನ್ನಪ್ಪಿದ ಜಗದ ಜನರನ್ನು ತನ್ನಂತೆ ಮಾಡಿಕೊಂಡ ಜಗದ ಜ್ಯೋತಿಯವರು.......ಅಗ್ರಜನಿಂದ ಅಂತ್ಯಜನವರೆಗೆ ಅವರಿವರೆನ್ನದೆ ಎಲ್ಲಾ ಪ್ರಜ್ಞಾವಂತರೂ ಈ ಲಿಂಗವಂತ ಸಮತಾಧರ್ಮದಲ್ಲಿ ಸಹ ಭಾಗಿಗಳಾದರು. ಆದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶೈವರೂ ಈ ಧರ್ಮವನ್ನಪ್ಪಿದರು. ಶೈವರಲ್ಲಿ ಆದೇ ಆಗ ನಿರ್ಮಾಣವಾಗಿ ವೀರಶೈವರೆಂದು ಹೇಳಿಕೊಳ್ಳುತ್ತಿದ್ದವರನೇಕರೂ ಸಹ ಇದ್ದರು. ಇವರು ಲಿಂಗಾಯತ ಮತ್ತು ವೀರಶೈವ ಎರಡೂ ಪದಗಳನ್ನೂ ಬಳಸುತ್ತಾ ಬಂದರು, ಇದರಲ್ಲಿ ಈಗಿನ ಪಂಚಾಚಾರ್ಯರೂ ಈ ಲಿಂಗವಂತ ಧರ್ಮಾನುಯಾಯಿಗಳಾಗಿದ್ದರು" ಎಂದು ಹೇಳಿದ್ದಾರೆ.

" ಲಿಂಗಾಯತ ಧರ್ಮವನ್ನಿತ್ತ ಬಸವಣ್ಣನವರನ್ನು ಅವರ ಧರ್ಮ ಗುರುತ್ವವನ್ನು ಅಲ್ಲಮ ಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣನವರು, ಸಿದ್ಧರಾಮ ಶಿವಯೋಗಿ ಮೊದಲಾದ ಅಸಂಖ್ಯಾತ ಶರಣ ಸಮೂಹವು ಒಪ್ಪಿ ತಮ್ಮ ವಚನಗಳಲ್ಲಿ ಮುಕ್ತಕಂಠದಿಂದ ಹಾಡಿದೆ. ಕಲ್ಯಾಣ ಕ್ರಾಂತಿಯ ನಂತರವೂ ಜನಜಂಗುಳಿಯು ಶ್ರೀ ಬಸವಣ್ಣನವರ ಗುರುತ್ವವನ್ನು ಜಾನಪದ ಗೀತೆಗಳಲ್ಲಿ ಒಪ್ಪಿ ಹಾಡುತ್ತಾ ಬಂದಿದೆ. ಲಿಂಗಾಯತ ಧರ್ಮವು ಜನಸಾಮಾನ್ಯರ ಧರ್ಮವಾಗಿ ಪಟ್ಟಭದ್ರ ಪುರೋಹಿತ ಶಾಹಿಗಳ ಅಧಿಕಾರಕ್ಕೆ ಧಕ್ಕೆತಗಲಿ ಅವರ ಪರಾವಲಂಬಿ ಜೀವನಕ್ಕೆ ಧಕ್ಕೆಯುಂಟಾಯಿತು. ಯಾರು ಬೇಕಾದರೂ ಗುರುವಾಗಬಹುದು, ಜಂಗಮವಾಗಬಹುದು ಎಂಬ ಬಸವಣ್ಣನವರ ತತ್ವವಂತೂ ಅವರಿಗೆ ನುಂಗಲಾರದ ತುತ್ತಾಯಿತು.

ಡಾ॥ ಎಂ. ಚಿದಾನಂದ ಮೂರ್ತಿಯವರು ಪಂಚಾಚಾರ್ಯರಲ್ಲಿ ಮೊದಲಿಗರಾದ ರೇಣುಕರು ದ್ವಾಪರಯುಗದವರಲ್ಲ, ಅವರು ಬಸವೇಶ್ವರರ ಹಿರಿಯ ಸಮಕಾಲೀನರು, ರೇಣುಕ, ರೇವಣಸಿದ್ಧ ಎಂಬುವವರು ಇಬ್ಬರಲ್ಲ. ಒಬ್ಬರೇ ಆಗಿದ್ದಾರೆ. ಅವರ ಮಗನೇ ರುದ್ರಮುನಿ, ಬಸವಣ್ಣನವರ ಸಮಕಾಲೀನರು. ರೇಣುಕ ಅಥವಾ ರೇವಣಸಿದ್ಧರು ಧರ್ಮಸ್ಥಾಪನೆ ಮಾಡಿದುದಕ್ಕೆ ಯಾವುದೇ ಆಧಾರಗಳು ಇಲ್ಲ. ಈ ಐತಿಹಾಸಿಕ ರೇಣುಕರಿಂದ ಭಿನ್ನರಾದ ಆದಿ ರೇಣುಕ ಎಂಬುದು ತೀರಾ ಇತ್ತೀಚಿನ ಪ್ರಜ್ಞಾಪೂರ್ವಕ ಕಲ್ಪಿತ ಸೃಷ್ಟಿ" ಎಂದು ಪ್ರಾಮಾಣಿಕವಾಗಿ ಐತಿಹಾಸಿಕ ಸತ್ಯವನ್ನು ಸ್ಪಷ್ಟಪಡಿಸಿದ್ದಾರೆ. ಕೇಶಿರಾಜ ಬಸವ ಪೂರ್ವದವನು. ಅವನ ಕಾವ್ಯಗಳಲ್ಲಿ ಲಿಂಗವಂತ, ವೀರಶೈವ ಎಂದು ಬಳಕೆಯಾಗಿದೆ. ಆದುದರಿಂದ ಲಿಂಗಾಯತ (ವೀರಶೈವ) ಮತ ಸ್ಥಾಪಕರು ಯಾರೆಂಬುದು ಗೊತ್ತಿಲ್ಲವೆಂದೂ ಹೇಳಿದ್ದಾರೆ. ಆದರೆ ಡಾ॥ ಎಂ. ಎಂ. ಕಲಬುರ್ಗಿಯವರು ಹೇಳುವಂತೆ ಕೇಶಿರಾಜನ ಹಸ್ತಲಿಖಿತ-ಲಿಂಗ ಸ್ತೋತ್ರದ ಕಂದ-೨, ಮತ್ತು ಶೀಲಾಮಹತ್ವದ ಕಂದ–ಇವುಗಳ ಪ್ರಾರಂಭವು ॥ ಶ್ರೀ ಗುರು ಬಸವಲಿಂಗಾಯ ನಮಃ ॥ ಕೇಶಿರಾಜ ದಣ್ಣಾಯಕರು ನಿರೂಪಿಸಿದ ಕಂದ"ಎಂದೇಕೆ ಪ್ರಾರಂಭವಾಗುತ್ತದೆ? ಒಪ್ಪಿಸಲ್ಲಿ ಕೊಂಡಗುಳಿ ಕೇಶಿರಾಜ ಶುದ್ಧ ಶೈವ ಭಕ್ತನಾಗಿ ಬಸವಾದಿ ಶರಣರ ಪ್ರಭಾವದ ನಂತರ ಲಿಂಗಾಯತ (ವೀರಶೈವ) ಪದ ಬಳಸಿರಬಹುದು, ಈತನೂ ಬಸವಣ್ಣನವರ ಹಿರಿಯ ಸಮಕಾಲೀನನೆಂದು ಹೇಳಬಹುದು."

ಬಸವಣ್ಣನವರು ಧರ್ಮಗುರು–ಧರ್ಮ ಸಂಸ್ಥಾಪಕರು ಎಂಬುದನ್ನು ಅವರ ಕಾಲದ ಶರಣರ ವಚನ ವಾಙ್ಮಯದ ಸಹಾಯದಿಂದಲೇ ದೃಢಪಡಿಸಬಹುದು. ಪಂಡಿತರು ಸುಳ್ಳು ಬರೆಯಬಹುದು. ಆದರೆ ಜಾನಪದಗಳು ಸುಳ್ಳು ಸೃಷ್ಟಿಯಾಗಲಾರವು.

ಈ ಮೇಲಿನ ವಿವರಗಳಿಂದ ಈ ಪಂಚಪೀಠಾಧೀಶರು ವೀರಶೈವ ಧರ್ಮ ಸ್ಥಾಪಕರಲ್ಲ. ಇದೆಲ್ಲಾ ಜನರನ್ನು ಮೋಸಗೊಳಿಸಲು ಸೃಷ್ಟಿಸಿದ ಕಲ್ಪನೆಯ ಪುರಾಣಗಳು ಎಂಬುದು ಸಿದ್ಧಪಡುತ್ತದೆ. 1992ನೇ ಇಸವಿ ಮೇ ತಿಂಗಳಿನಲ್ಲಿ ಬೀದರ ಜಿಲ್ಲೆ ಗೋರ್ಟಾ ಗ್ರಾಮದಲ್ಲಿ ತಮಗಾದ ಮುಖಭಂಗ, ಅಖಿಲ ಭಾರತ ವೀರಶೈವ ಮಹಾಸಭೆಯಲ್ಲಿನ ವಿಚಾರ ಮಂಥನ ಮತ್ತದರ ಫಲಿತಾಂಶ ಮತ್ತೂ ಈ ವರುಷ ಜನವರಿಯಲ್ಲಿ ಕೂಡಲ ಸಂಗಮದಲ್ಲಿ ನಡೆದ ಶರಣ ಮೇಳದಲ್ಲಿನ ವಿಚಾರ ಮಂಥನ ಮತ್ತೂ ಆದರ ಫಲಿತಾಂಶಗಳನ್ನು ನಿರ್ವಿಕಾರ ದೃಷ್ಟಿಯಿಂದ ಅವಲೋಕಿಸಲಿ, ದೂರಾಲೋಚನೆಯಿಂದ ಪರಾಮರ್ಶಿಸಲಿ.

ಈ ಪಂಚಾಚಾರ್ಯರು ಹಿಂದಿನ ವೈದಿಕ ಶೈವ ಧರ್ಮದ ವರ್ಣ, ವರ್ಗ, ಜಾತಿಭೇದ, ಪಂಗಡ ಭೇದಗಳನ್ನು ಪರಿಪೋಷಿಸುತ್ತಿರುವುದು ತಾವು ಅಂಗೀಕರಿಸಿದ ಧರ್ಮಕ್ಕೆ ಇವುಗಳು ಹೊಂದಿಕೆಯಾಗುತ್ತಿವೆಯೇ ? ಕಾಲ, ದೇಶಕ್ಕೆ ತಕ್ಕಂತೆ ಮತ್ತು ಪ್ರಸ್ತುತ ಸಮಾಜದ ಜನತೆಯ ಮನೋಭಿಲಾಷೆಯ ಪ್ರಕಾರ ತಮ್ಮ ಇದುವರೆಗಿನ ಪಾತ್ರವೇನಾಗಿತ್ತು ? ತಮ್ಮಿಂದ ಲಿಂಗಾಯತ (ವೀರಶೈವ) ಸಮಾಜಕ್ಕೆ ಏನಾದರೂ ಉಪಕಾರವಾಗಿದೆಯೇ ? ಅಥವಾ ಅನಾನುಕೂಲವಾಗಿದೆಯೇ ? ಹೇಗೆ ನಡೆದುಕೊಂಡರೆ ತಮ್ಮ

ಘನತೆ ಗೌರವಗಳು ಹೆಚ್ಚುತ್ತವೆ ? ಏನು ಮಾಡಿದರೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಲಿಂಗಾಯತ ಧರ್ಮೀಯರ ಮನಸ್ಸನ್ನು ಗೆಲ್ಲಬಹುದು ? ಎಂಬುದರ ಬಗ್ಗೆ ದೀರ್ಘವಾಗಿ ಆಲೋಚಿಸಿ, ಗುರುಸ್ಥಾನವನ್ನಲಂಕರಿಸುವವರಿಗೆ ಇರಬಾರದ ಅಹಂಭಾವ, ಮಮಕಾರ, ರಾಗ, ದ್ವೇಷಾಸೂಯಾದಿಗಳನ್ನು ಬಿಟ್ಟು ಪ್ರವಾಹಕ್ಕೆ ಎದುರಾಗಿ ಈಜಲು ಪ್ರಯತ್ನಿಸುವುದನ್ನು ಬಿಟ್ಟು, ಸ್ಥಾನಪ್ರತಿಷ್ಠೆಯನ್ನು ತ್ಯಾಗಮಾಡಿ ಧರ್ಮದ ಹಿತದೃಷ್ಟಿಯಿಂದ, ಸರ್ವಜನರ ಹಿತಕ್ಕಾಗಿ, ಸೇವಾಮನೋಭಾವದಿಂದ ಗುರುವಾದಡೆಯೂ ಕಾಯಕ ಮಾಡಿಯೇ ಜೀವಿಸಬೇಕೆಂದರಿತು, ನಿಜವಾದ ಲಿಂಗಾಯತ ಧರ್ಮದ ತಿರುಳನ್ನು ಅಭ್ಯಸಿಸಿ ಜನರಲ್ಲಿ ಪ್ರಸಾರಮಾಡಿ, ದುಡಿಯುತ್ತಾ ತಮ್ಮ ಗುರುಸ್ಥಾನವನ್ನು ಉನ್ನತಗೊಳಿಸಿಕೊಳ್ಳಲಿ.

ಹೀಗೆ ಮಾಡಿದರೆ ಅವರ ಸ್ಥಾನದ ಘನತೆ, ಗೌರವಗಳು ಹೆಚ್ಚಿ, ಕೆಲವರಿಂದ ಜಗದ್ಗುರುಗಳೆನ್ನಿಕೊಳ್ಳದೆ ಇಡೀ ಲಿಂಗಾಯತ (ವೀರಶೈವ) ಸಮಾಜದ ಜಗದ್ಗುರುಗಳಾಗಿ, ಲೋಕ ಪೂಜ್ಯರಾಗುವರು. ಇದರಿಂದ ಲಿಂಗಾಯತ ಧರ್ಮವೂ ಭಾರತದಲ್ಲಿ ಧಾರ್ಮಿಕವಾಗಿ,ರಾಜಕೀಯವಾಗಿ ಬಲಾಢ್ಯವಾಗಿ,ಮುಸ್ಲಿಂ ಮತ್ತು ಸಿಖ್ ಧರ್ಮೀಯರಂತೆ, ಪ್ರಬಲ ಶಕ್ತಿಯಾಗಿ ಹೊರ ಹೊಮ್ಮುವುದರಲ್ಲಿ ಯಾವ ಸಂದೇಹವೂ ಇಲ್ಲ. ಅಲ್ಲದೆ ಜಗತ್ತಿನಲ್ಲಿ ಲಿಂಗಾಯತ ಧರ್ಮವು ಸರ್ವ ಮಾನ್ಯವಾಗುವುದು.

ಈ ದೃಷ್ಟಿಯಿಂದ, ನಿರ್ವಿಕಾರ ಭಾವದಿಂದ. ಪೂರ್ವಾಗ್ರಹ ಪೀಡಿತರಾಗದೆ ದೂರ, ಬಹುದೂರ ಭವಿಷ್ಯತ್ತನ್ನು ದೀರ್ಘವಾಗಿ ಆಲೋಚಿಸಲಿ. ಈ ಭಾವನೆಯಿಂದ ಧರ್ಮದ ನೇತೃತ್ವವನ್ನುವಹಿಸಲಿ. ಗುರು ವಿರಕ್ತರಿಬ್ಬರೂ ಸಮಾನಸ್ಕಂಧರಾಗಿ ಧರ್ಮದ ಬಗ್ಗೆ ಕಾಳಜಿ ವಹಿಸಲಿ. ಪರಸ್ಪರ ಪ್ರೀತಿ ವಿಶ್ವಾಸಗಳು ಸರ್ವಜನರ ಹಿತಾರ್ಥವಾಗಿ ವರ್ಧಿಸಲಿ. ಮುಖ್ಯವಾಗಿ ಭಕ್ತವರ್ಗದವರೂ ಸಹ ಸಮಾಜದ ಹಿತದೃಷ್ಟಿಯಿಂದ ವಿಚಾರವಂತರಾಗಿ ಗುರುಗಳು ಈ ದಿಕ್ಕಿನಲ್ಲಿ ನಡೆಯುವಂತೆ ಪ್ರೇರೇಪಿಸಲಿ. ಲಿಂಗಾಯತ ಧರ್ಮದ ವಿಶ್ವಮಾನ್ಯ ತತ್ತ್ವಗಳು ಜನ ಸಾಮಾನ್ಯರಲ್ಲಿ ಅನುಷ್ಠಾನಗೊಳ್ಳುವಂತೆ ಮಾಡುವುದು ಈಗಿನ ಮುಖ್ಯ ಅವಶ್ಯಕತೆಯಾಗಿದೆ. ಅದಕ್ಕೆ ಎಲ್ಲ ಗುರುಗಳೂ ತಮ್ಮ ಅಹಂಭಾವ, ಸ್ವ ಪ್ರತಿಷ್ಠೆಗಳನ್ನು ಬಿಟ್ಟು ಸಮಾಜಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಳ್ಳಬೇಕಾಗಿದೆ. ಹಿಂದಿನವರು ಯಾವ ಸದುದ್ದೇಶದಿಂದ ಸಮಾಜವನ್ನು ಸರಿದಾರಿಯಲ್ಲಿ ಕೊಂಡೊಯ್ದು ಸಮಾಜ ಸೇವೆ ಮಾಡುವುದಕ್ಕಾಗಿ ಸಂಸಾರ ತ್ಯಾಗ, ರಕ್ತ ಸಂಬಂಧ ತ್ಯಾಗ ದಿಂದ ಕೂಡಿದ ಗುರು ತತ್ತ್ವವನ್ನು ರಚಿಸಿದರೋ ಆ ಉದ್ದೇಶಕ್ಕಾಗಿ ಗುರು ವೃಂದದವರು ದುಡಿಯುತ್ತಿಲ್ಲವೆಂಬುದನ್ನು ವಿಷಾದದಿಂದ ಗುರುತಿಸಬೇಕಾಗಿದೆ. ಸಮಾಜದ ಮುಖಂಡರೂ ಸಹ ನಿಸ್ವಾರ್ಥ ಬುದ್ಧಿಯಿಂದ ಇವರ ಲೋಪ ದೋಷಗಳನ್ನು ಮನವರಿಕೆ ಮಾಡಿ ಕೊಟ್ಟು ಇವರನ್ನು ಸರಿದಾರಿಗೆ ತರಬೇಕೇ ವಿನಾ ಪಕ್ಷ–ಪರ ಪಕ್ಷಗಳನ್ನು ವಹಿಸಿ ಸಮಾಜವನ್ನು ಒಡೆದು ನಿರ್ವೀರ್ಯಗೊಳಿಸುವ ಕೆಲಸ ಮಾಡಬಾರದು. ಕೆಲವು ಗುರುಗಳು ಸಮಾಜ ಸೇವಾ ನಿರತರಾಗಿದ್ದಾಗ್ಯೂ ಪಕ್ಷಪಾತ

ದೋಷವನ್ನು ದೂರಮಾಡಿಲ್ಲ. ಸರ್ವ ಸಮಾನ ದೃಷ್ಟಿಯನ್ನು ಬೆಳಸಿಕೊಂಡಿಲ್ಲ. ಹೀಗೆಯೇ ಮುಂದುವರಿಯುವುದಾದರೆ ಅಂತಹ ಸೇವಾಸಕ್ತರಲ್ಲದ ಗುರುಗಳನ್ನು ನಿರ್ಲಕ್ಷಿಸಿ, ಪಕ್ಕಕ್ಕೆ ಸರಿಸಿ, ಇಂದಿನ ಆಧುನಿಕ ವಿಚಾರವಂತ ಸಮಾಜ ತನ್ನ ಮಾರ್ಗವನ್ನು ತಾನೇ ಕಂಡುಕೊಳ್ಳುತ್ತದೆಂಬುದನ್ನು ಎಲ್ಲರೂ ಮನಗಾಣಬೇಕಾಗಿದೆ.

ಸರ್ವ ಕಾರಣ ಕರ್ತೃವಾದ ಪರಮೇಶ್ವರನು ಮತ್ತು ವಿಶ್ವಗುರು ಬಸವೇಶ್ವರರೂ ಎಲ್ಲಾ ಗುರು ವೃಂದದವರಿಗೂ ಸಮಾಜ ಧುರೀಣರಿಗೂ ಸರ್ವಜನ ಹಿತಕಾರ್ಯದಲ್ಲಿ ಪ್ರವೃತ್ತರಾಗಿ ಲೋಕ ಕಲ್ಯಾಣ ಮಾಡುವ ಸದ್ಬುದ್ಧಿ, ಸನ್ನಡತೆಗಳನ್ನು ಕರುಣಿಸಲೆಂದು ಅನನ್ಯ ಭಕ್ತಿಯಿಂದ ಬೇಡುತ್ತೇನೆ.

ಹಾಸನ
ತಾ–1–3–1994

ಸದ್ಗುರು ಕಿಂಕರ
ಎಂ. ಗಂಗಪ್ಪ
(ಸಿ. ಎಂ. ಗಂಗಪ್ಪ)

ಗಣಮೇಳದಲ್ಲಿ ಸಂದೇಶ ವಾಚನ

ದಿ. 10–3–1994 ರಚನೆ : **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**
ಬಸವ ಧರ್ಮಪೀಠ, ಕೂಡಲ ಸಂಗಮ.

(ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಿಂದ ಅಥವಾ ಸರಿಯಾಗಿ ಓದಬಹುದಾದ– ಆಹ್ವಾನಿತ ಅತಿಥಿಗಳಿಂದ)

ಓಂ ಶ್ರೀ ಗುರು ಬಸವಲಿಂಗಾಯ ನಮಃ. ಧರ್ಮಗುರು ಬಸವಣ್ಣನವರನ್ನು ಸ್ಮರಿಸಿ, ಜಗತ್ಕರ್ತ ಪರಮಾತ್ಮನನ್ನು ಧ್ಯಾನಿಸಿ, ಈ ಪವಿತ್ರ ಶರಣ **"ಗಣಮೇಳ"**ದಲ್ಲಿ ಸಮಾವೇಶವಾಗಿರುವ ಎಲ್ಲ ಶರಣ ಬಂಧುಗಳಿಗೂ ಶರಣು ಶರಣಾರ್ಥಿಗಳು.

ಇಂದು ನಡೆಯುತ್ತಲಿರುವ ಪವಿತ್ರ ಶರಣ **"ಗಣಮೇಳ"**ವು ಧರ್ಮಪಿತರ ಜೀವಿತಾ ನಂತರ ನಡೆಯುತ್ತಿರುವ ಮೊಟ್ಟ ಮೊದಲನೆಯದು ಮತ್ತು ಚಾರಿತ್ರಿಕವಾಗಿ ಮಹತ್ವಪೂರ್ಣವಾದುದು. ಧರ್ಮಪಿತರ ಕಾಲದಲ್ಲಿ ಹಲವಾರು ಗಣ ಪರ್ವಗಳು, ಗಣ ಸಭೆಗಳು ನಡೆದು, ಸಂಸ್ಕಾರ ಮತ್ತು ಸಂಘಟನೆ ಎರಡನ್ನೂ ಸಾಧಿಸಿದವು. ಹರಿಹರ ಮಹಾಕವಿ ಬಣ್ಣಿಸುವಂತೆ ಧರ್ಮಪಿತರು 'ಪಾಷಂಡಿ ಭೂಮಿಯಲ್ಲಿ ಭಕ್ತಿಯನ್ನು ಬಿತ್ತಿ ಬೆಳೆದು ಗಣಪರ್ವಗಳನ್ನು ಸಫಲಂ ಮಾಡಿ, ಭಕ್ತಿಯ ಬಣ್ಣವೇರಿಸಿದ ಕಾರಣಿಕರಾದರು.' ಕಲ್ಯಾಣ ಪಟ್ಟಣದಲ್ಲಿ ಸಾಕಷ್ಟು ಗಣಪರ್ವಗಳನ್ನು ಸಂಯೋಜಿಸಿದರು.

'ಗಣ' ಎಂದರೇನು ? ಗಣ ಎಂದರೆ ಸಮೂಹ, ಸಮಾಜ. ಧರ್ಮಪಿತ ಬಸವಣ್ಣನವರು 'ಗಣಧರ್ಮ' ಒಂದನ್ನು ಸ್ಥಾಪಿಸಿದರು. ಕುಟುಂಬ, ಜಾತಿ, ಕುಲ, ವರ್ಣಗಳ ಸೀಮೆ ದಾಟಿದ ಗಣ ಧರ್ಮದ ಪರಿಕಲ್ಪನೆ ಕೊಟ್ಟರು. ಈ ಗಣ ಧರ್ಮದ

ಸದಸ್ಯರನ್ನು ಬಂಧಿಸುವ ಸೂತ್ರ ಜಾತಿಕುಲವಲ್ಲ, ವರ್ಣ-ವರ್ಗವಲ್ಲ 'ದೇವರ ಕುರುಹು' ಎಂಬುದನ್ನು ಸಾರಿದರು. ದೇವ ಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಭಕ್ತರಲ್ಲಿ ಕುಲವನ್ನು ಅರಸುವುದಿಲ್ಲ, ಎಂದು ಘೋಷಿಸಿ ತಾತ್ವಿಕ ಗಣಧರ್ಮದ ಸೂತ್ರವನ್ನು ಬೋಧಿಸಿದರು. ಈ ತಾತ್ವಿಕ ಗಣಧರ್ಮದ ಸದಸ್ಯತ್ವ ಪಡೆದವರು ಸಹಬಾಳ್ವೆ ಮಾಡುವ ಹಿರಿಯ ಗುಣ ಹೊಂದಬೇಕೆಂದು ಸಾರಿ ಹೇಳಿದರು.

ಕಾಗೆ ಒಂದಗುಳ ಕಂಡಡೆ ಕೂಗಿ ಕರೆಯದೆ ತನ್ನ ಬಳಗವನು ?
ಕೋಳಿ ಒಂದು ಕುಟುಕ ಕಂಡಡೆ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ, ಕೂಡಲ ಸಂಗಮದೇವಾ,

ಕಾಗೆಯಂತಹ ಪಕ್ಷಿ ಅನ್ನದ ಅಗುಳನ್ನು ಕಾಣುತ್ತಲೇ 'ಕಾ ಕಾ' ಎಂದು ಕರೆದು ತನ್ನ ಬಳಗವನ್ನು ಸೇರಿಸಿಕೊಂಡು ತಿನ್ನುತ್ತದೆ. ಕೋಳಿಯು ಕಾಳುಗಳನ್ನು ನೋಡುತ್ತಲೇ 'ಕೊ ಕ್ಕೋ' ಎಂದು ಕರೆದು ಹಂಚಿಕೊಂಡು ತಿನ್ನುತ್ತದೆ. ಭಕ್ತಿವಂತನಾಗಿ ಒಬ್ಬ ವ್ಯಕ್ತಿಯು ಇಂತಹ ಸಮುದಾಯ ಜೀವನವನ್ನು ನಡೆಸದಿದ್ದರೆ ಹೇಗೆ ? ಆದ್ದರಿಂದ ಭಕ್ತಿಜೀವಿಯಾದವನು ಭಕ್ತಿಪಕ್ಷವನ್ನು ಕಟ್ಟಿಕೊಂಡು, ಸಹಬಾಳ್ವೆ ನಡೆಸಬೇಕು.

ಕರ್ಮವೆಂಬ ಅಂಕದೊಡನೆ ತೊಡರಿದೆ
ಬಿನ್ನಪವ ಅವಧಾರು ; ನಿಮ್ಮಾಳಿನ ಭಾಷೆಯ
ಕಡೆಗಳಕ್ಕೆ ನೂಂಕುವೆ ಕೆಡಹುವೆನಂಕವ
ಕರೆದೊಡೋ ಎನಿಸದಡೆ ನಿಮ್ಮಾಳಲ್ಲ
ಶಿವಶರಣೆಂಬ ದಂಡೆಯ ಹೂಡಿ
ಗಣಮೇಳಾಪವೆಂಬ ಅಲಗಿನಿಂದಿರಿವೆ, ಕೂಡಲ ಸಂಗಮದೇವಾ.

ಕರ್ಮ, ಭವ ಎಂಬುದೇ ಶತ್ರು. ಈ ಭವವೆಂಬ ಶತ್ರುವಿನೊಡನೆ ಭಕ್ತನು ಹೋರಾಟಕ್ಕೆ ನಿಲ್ಲುತ್ತಾನೆ. ಈ ಶತ್ರುವನ್ನು ಗೆಲ್ಲಬೇಕಾದರೆ ಎರಡು ಸಾಧನಗಳಿವೆ. ಒಂದು, ಪರಮಾತ್ಮನಿಗೆ ಶರಣಾಗುವುದು, ಇನ್ನೊಂದು ಶರಣರ ಸಂಗದಲ್ಲಿ ಒಡನಾಡುವುದು. 'ಗಣಮೇಳಾಪ'–ಶರಣ ಸಂಗದಲ್ಲಿ ಸೇರಿ ದೈವೀಚಿಂತನೆ ಮಾಡುವುದೇ ಅತ್ಯಂತ ಪ್ರಬಲ ಶಸ್ತ್ರ.

ಧರ್ಮಗುರುವಿನ ಆದೇಶದಂತೆ ನಾವು ನೀವುಗಳೆಲ್ಲ ಗಣಮೇಳದಲ್ಲಿ ಭಾಗಿಗಳಾಗಿ ಇಲ್ಲಿ ಒಟ್ಟುಗೂಡಿದ್ದೇವೆ. ಈ ಗಣ ಮೇಳವು ಸಮಾನತೆ, ಧಾರ್ಮಿಕ ಸಹೋದರತ್ವ-ಸಹ ಬಾಳ್ವೆಗಳ ಸಂಕೇತವುಳ್ಳ ಕಾರ್ಯಕ್ರಮವಾಗಿದೆ. ಸೃಷ್ಟಿಕರ್ತನಿಗೆ ಮತ್ತು ಧರ್ಮಗುರುವಿಗೆ ಕೃತಜ್ಞತೆಯನ್ನು ಸಮರ್ಪಿಸುವ ಶ್ರೇಷ್ಠ ಕ್ರಿಯೆಯಾಗಿದೆ.

ಬಸವ ಗುರುವಿಗೆ ಶರಣಾಗಿದ್ದೇನೆ.
ಜಗತ್ ಕರ್ತನಿಗೆ ಶರಣಾಗಿದ್ದೇನೆ.
ಶರಣ ಗಣಕ್ಕೆ ಶರಣಾಗಿದ್ದೇನೆ.

ಎಂಬ ತ್ರಿತತ್ವದ ಪ್ರತೀಕವಾಗಿದೆ. ಸೃಷ್ಟಿಕರ್ತ ಮತ್ತು ಧರ್ಮಕರ್ತರನ್ನು ಕೃತಜ್ಞತೆಯಿಂದ ಸ್ತುತಿಸಲು ಸೇರಿದ್ದೇವೆ.

ಸರ್ವ ಶರಣರ ದಿನಾಚರಣೆ

ಒಂದು ತತ್ವಜ್ಞಾನವಾಗಲೀ, ಧರ್ಮವಾಗಲೀ ಜೀವಂತವಾಗಿರಬೇಕಾದರೆ ಅದು ಪರಂಪರೆಯಾಗಿ (heritage) ಸಾಗಿಬರಬೇಕು. ಶ್ರೀ ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಆರಂಭವಾದ ಲಿಂಗವಂತ ಧರ್ಮದ ಪರಂಪರೆಯು ಶೂನ್ಯ ಪೀಠಾಧೀಶ ಅಲ್ಲಮಪ್ರಭು, ಚಿನ್ಮಯಜ್ಞಾನಿ ಚೆನ್ನಬಸವಣ್ಣ, ಶಿವಯೋಗಿ ಸಿದ್ಧರಾಮೇಶ, ವೀರವಿರಾಗಿಣಿ ಅಕ್ಕಮಹಾದೇವಿ, ವೀರಶರಣ ಮಡಿವಾಳ ಮಾಚಿದೇವ ಇವರನ್ನೊಡಗೂಡಿ ಅವ್ಯಾಹತವಾಗಿ ಸಾಗಿ ಬಂದಿದೆ. ಗುರು ಬಸವಣ್ಣನವರ ಕಾಲದ ಆದಿ ಪ್ರಮಥರಿಂದ ಈ ವರೆಗೆ ಆಗಿ ಹೋಗಿರುವ ಶಿವಯೋಗಿಗಳು, ಶರಣರು ಅಸಂಖ್ಯಾತರು. ಅವರ ಜಯಂತಿ–ಲಿಂಗೈಕ್ಯ ದಿನ ಆಚರಿಸಲು ವರ್ಷದ 365 ದಿನಗಳು ಸಾಕಾಗವು. ಅಂಥ ಸಮೃದ್ಧ ಪರಂಪರೆಯ ವಾರಸುದಾರರು ನಾವು. ಆದ್ದರಿಂದ ಜಗತ್ತಿನ ಮೊಟ್ಟ ಮೊದಲ ಯೋಗಿಯೂ, ಹಿಂದೂ ಧಾರ್ಮಿಕ ಪರಂಪರೆಯ ಮೂಲಿಗನಾದ ವೇದಪೂರ್ವದ ಪ್ರವಾದಿ 'ಯೋಗಿಶಿವ' ನ ತಪಸ್ಸಿನ ದಿನವಾದ 'ಶಿವರಾತ್ರಿಯಂದು' ಸರ್ವ ಶರಣರ ಸಂಸ್ಮರಣೆಯನ್ನು ಒಟ್ಟಾಗಿ ಮಾಡೋಣ.

ಬಸವ ಧರ್ಮದ ಸಾರ

ಇಂದು ನಾವು ಸಾರರೂಪದಲ್ಲಿ ಮಂತ್ರಪುರುಷ ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ ಲಿಂಗಾಯತ ಧರ್ಮದ ಸಾರವನ್ನು ಮನನ ಮಾಡೋಣ. ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ, ಕ್ರಿ. ಶ. 1106 ರಲ್ಲಿ ಇಂಗಳೇಶ್ವರ ಬಾಗೇವಾಡಿಯಲ್ಲಿ ಜನಿಸಿದರು. ಶೈವ ಬ್ರಾಹ್ಮಣರಾದ ಮಾದಿರಾಜ – ಮಾದಲಾಂಬಿಕೆಯರ ಗರ್ಭದಲ್ಲಿ ಪೂಜಾಫಲದಿಂದ ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯದಂದು ಜನಿಸಿದರು. ವೈದಿಕ ಧರ್ಮದಲ್ಲಿ ಹುಟ್ಟಿದ ಅವರು ಬಹು–ದೇವತೋಪಾಸನೆ, ಮೂಢನಂಬಿಕೆ, ವರ್ಣವ್ಯವಸ್ಥೆ, ಜಾತಿ ಪದ್ಧತಿ, ಇವುಗಳ ಪ್ರತಿಫಲವಾದ ಅಸ್ಪೃಶ್ಯತೆ. ಯಜ್ಞ–ಯಾಗಾದಿಗಳ ಹಿಂಸೆ, ಕ್ರೂರ ದೇವತೆಗಳಿಗೆ ಕೊಡುವ ಪ್ರಾಣಿಬಲಿ, ಪೂಜಾದಿಗಳಲ್ಲಿದ್ದ ಆಡಂಬರ, ಭೇದಭಾವಗಳನ್ನು ಬಿತ್ತಿ ಬೆಳೆದ ದೇವಾಲಯಗಳ ಸಂಕುಚಿತತೆ, ದೇವ–ಭಕ್ತರ ನಡುವೆ ಇವು ಬೆಳೆಸಿದ ಕಂದರ, ಸ್ತ್ರೀ ಶೋಷಣೆ, ಮುಂತಾದವುಗಳನ್ನು ಕಂಡು ಬೇಸತ್ತು, ನೊಂದು ತಾಯಿ-ತಂದೆ, ಸಂಪ್ರದಾಯದ ಬಂಧನದಿಂದ ಆಚೆ ನಡೆದರು. ಕೂಡಲ ಸಂಗಮದ ಗುರುಕುಲದಲ್ಲಿ ಆಶ್ರಯ ಪಡೆದು, ವಿದ್ಯಾಭ್ಯಾಸ ಕೈಗೊಂಡು, ಸಂಗಮೇಶ್ವರನ ಅರ್ಚಕರಾಗಿ ಕೆಲಸ ಮಾಡತೊಡಗಿದರು. ಒಂದು ದಿನ ಪರಮಾತ್ಮನಿಂದ ದಿವ್ಯ ಆದೇಶವನ್ನು ಪಡೆದರು. ಸಾಕ್ಷಾತ್ಕಾರದ ಅನುಭವವಾಗಿ ವಿಶ್ವದಾಕಾರದಲ್ಲಿ ವಿಶ್ವಾತ್ಮನನ್ನು ಪೂಜಿಸುವ ಇಷ್ಟಲಿಂಗದ ಕಲ್ಪನೆ ಹೊಂದಿದರು. ಈ ಇಷ್ಟಲಿಂಗವೇ ಕೇಂದ್ರವಾದ ಹೊಸಧರ್ಮದ ರೂಪುರೇಷೆ

ಮೂಡಿಸಿಕೊಂಡು ಬಸವರಸ–ಸಂಗನ ಬಸವಣ್ಣನಾಗಿ ಕಲ್ಯಾಣಕ್ಕೆ ಮುನ್ನಡೆದರು, ರಾಜಕೀಯದಲ್ಲಿ ವಿವಿಧ ಹುದ್ದೆ ಹೊಂದಿ, ಪ್ರಧಾನಿಯೂ ಆದರು. ಅನುಭವ ಮಂಟಪ ಎಂಬ ಅಧ್ಯಾತ್ಮಿಕ ಅಭೂತಪೂರ್ವ ಸಂಸ್ಥೆ ಕಟ್ಟಿದರು. ಭಾರತದ ವಿವಿಧ ದಿಕ್ಕುಗಳಿಂದ ಜನರು ಆಗಮಿಸಿದರು. ಅನುಭವ ಮಂಟಪದ ಶರಣರು ವಚನ ಸಾಹಿತ್ಯ ಎಂಬ ಶ್ರೇಷ್ಠ ಕೊಡುಗೆ ಕೊಟ್ಟರು. ತಮ್ಮ ಅನುಯಾಯಿಗಳಾಗಿದ್ದ ಇಬ್ಬರು ಶರಣರ ಮಕ್ಕಳ ಮಧ್ಯೆ ಬಸವಣ್ಣನವರು ವಿವಾಹಕ್ಕೆ ಪ್ರೋತ್ಸಾಹ ನೀಡಿದರು. ಆ ಶರಣರಲ್ಲಿ ಒಬ್ಬರು ಪೂರ್ವಾಶ್ರಮದಲ್ಲಿ ಹುಟ್ಟಿನಿಂದ ಅಸ್ಪೃಶ್ಯರು, ಮತ್ತೊಬ್ಬರು ಬ್ರಾಹ್ಮಣರು ಇದ್ದುದು ಜಾತಿವಾದಿಗಳ ಅಸಹನೆಗೆ ಕಾರಣವಾಗಿ, ಬಸವಣ್ಣನವರು ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ಕೊಡಬೇಕಾಯಿತು. ಧರ್ಮಪಿತರು ಗಡಿಪಾರು ಶಿಕ್ಷೆ ಹೊಂದಿದರು. ಅವರ ನಿರ್ಗಮನದ ನಂತರ ಕಲ್ಯಾಣದಲ್ಲಿ ಕ್ರಾಂತಿಯಾಗಿ ಶರಣರ ವಧೆಯಾಯಿತು. ಗಡಿಪಾರು ಹೊಂದಿ ಕೂಡಲ ಸಂಗಮಕ್ಕೆ ಬಂದ ಬಸವಣ್ಣನವರು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ದಿನ–ಕ್ರಿ. ಶ. 1168 ರಲ್ಲಿ ಲಿಂಗೈಕ್ಯರಾದರು.

ನಮ್ಮ ಧಾರ್ಮಿಕ ಸಂಹಿತೆಯಾದ ವಚನ ಸಾಹಿತ್ಯದ ಮೂಲಕ ಬಸವಾದಿ ಪ್ರಮಥರು ವಿಶೇಷ ಪಥವನ್ನು ತೋರಿದ್ದಾರೆ, ಅವರು ಬೋಧಿಸಿದ ತತ್ತ್ವದ ಸಾರ ಹೀಗಿದೆ.

ತತ್ತ್ವಗಳು : ಪಂಚಸೂತ್ರ (ಆಚಾರ) ಗಳು

1. ದೇವನು ಒಬ್ಬ (ಲಿಂಗಾಚಾರ)
2. ಪ್ರತಿಯೊಬ್ಬನೂ ಸತ್ಯಶುದ್ಧ ಕಾಯಕದಿಂದ ಗಳಿಸಬೇಕು. ದಾಸೋಹ ಭಾವದಿಂದ ಸಮಾಜಕ್ಕೆ ವಿನಿಯೋಗಿಸಬೇಕು. (ಸದಾಚಾರ)
3. ಮಾನವರೆಲ್ಲರೂ ಸಮಾನರು. ನೀತಿ-ಸಂಸ್ಕಾರದಿಂದ ಶ್ರೇಷ್ಠರಾಗುವರು (ಶಿವಾಚಾರ)
4. ಅನ್ಯಾಯವನ್ನು-ಅಸತ್ಯವನ್ನು ಆತ್ಮಸ್ಥೈರ್ಯದಿಂದ ಎದುರಿಸಬೇಕು (ಗಣಾಚಾರ)
5. ವ್ಯಕ್ತಿಗಿಂತಲೂ ಸಮಾಜ–ಸಮಷ್ಟಿ ದೊಡ್ಡದೆಂದು ಭಾವಿಸಿ ವ್ಯಕ್ತಿಯು ಸಮಾಜದ ಸೇವೆ ಮಾಡಬೇಕು. (ಭೃತ್ಯಾಚಾರ)

ದರ್ಶನ ಶಾಸ್ತ್ರ : ಷಟ್‌ಸ್ಥಲ–ಮಾನವ ಜೀವನದ ಗುರಿಯೇ ತಾನು ಹೊರಟ ಮೂಲ ನೆಲೆ–ಪರಮಾತ್ಮನಲ್ಲಿ ಒಡವೆರೆದು ಒಂದಾಗುವುದು. ಜೀವನು ಪರಶಿವನೊಡನೆ ಒಂದಾಗ ಬೇಕಾದರೆ ಭಕ್ತ ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲ (stages) ಗಳನ್ನು ಅಳವಡಿಸಿಕೊಳ್ಳಬೇಕು.

ಆಚರಣೆ : ಅರ್ಚನೆ–ಅರ್ಪಣೆ–ಅನುಭಾವ. ದಿನನಿತ್ಯವೂ ಸೃಷ್ಟಿಕರ್ತನನ್ನು ಪೂಜಿಸುವುದು; ಕಾಯಕ ಮಾಡಿ ಊಟ ಮಾಡುವುದು; ಶರಣರ ಸಂಗದಲ್ಲಿ ಒಡನಾಡುವುದು.

ಲಾಂಛನಗಳು : ಭಕ್ತಿಯ ಅಭಿವ್ಯಕ್ತಿಗೆ ಅಷ್ಟಾವರಣಗಳಾದ ಗುರು–ಲಿಂಗ–

ಜಂಗಮ-ವಿಭೂತಿ-ರುದ್ರಾಕ್ಷಿ-ಮಂತ್ರ-ಪಾದೋದಕ-ಪ್ರಸಾದ ಅಳವಡಿಸಿಕೊಳ್ಳುವುದು.

ಸಪ್ತಶೀನಿ–ಸೂತ್ರ : ಕಳವು ಮಾಡದಿರುವುದು, ಕೊಲ್ಲದಿರುವುದು (ಅಹಿಂಸೆ), ಸುಳ್ಳು ಹೇಳದಿರುವುದು, ಕೋಪಗೊಳ್ಳದೆ ಸಮಾಧಾನ ಚಿತ್ತದಿಂದಿರುವುದು, ತನಗಿಂತ ಕೀಳಾದವರನ್ನು ತಿರಸ್ಕಾರದಿಂದ ಕಾಣದಿರುವುದು, ಆತ್ಮಸ್ತುತಿ ಮಾಡದಿರುವುದು, ಪರನಿಂದೆ ಮಾಡದಿರುವುದು, ಅಂತರಂಗ ಶುದ್ಧಿ ಸಂಪಾದಿಸುವುದು, ಬಹಿರಂಗ ಶುದ್ಧಿ ಸಾಧಿಸುವುದು, ತನ್ಮೂಲಕ ದೇವನ ಕೃಪೆ ಪಡೆಯುವುದು.

ಜಗತ್ತಿನ ಅನೇಕ ಪ್ರವಾದಿಗಳು ಸುವ್ಯವಸ್ಥಿತ ರೂಪದಲ್ಲಿ ಧರ್ಮವನ್ನು ಕೊಡದೆ ಕೇವಲ ವಚನ ಸಂದೇಶ ಕೊಟ್ಟುಹೋಗಿದ್ದರೂ ಕಾಲಾನಂತರದಲ್ಲಿ ಅವರ ಅನುಯಾಯಿಗಳು ಅತ್ಯಂತ ಸುಂದರವಾಗಿ ಸಂಘಟಿಸಿಕೊಂಡಿದ್ದಾರೆ, ತಮ್ಮ ಸ್ಥಾಪಕರು ಕೊಟ್ಟುದಕ್ಕಿಂತ ಚೆನ್ನಾಗಿ ಸರ್ವಾಂಗ ಸುಂದರವಾಗಿ ಬೆಳೆಸಿಕೊಂಡಿದ್ದಾರೆ. ನಮ್ಮಲ್ಲಿ ದುರ್ದೈವದ ಸಂಗತಿ ಎಂದರೆ ಧರ್ಮಗುರು ಬಸವಣ್ಣನವರು ಸುಸಂಬದ್ಧವಾಗಿ ಕೊಟ್ಟುದನ್ನು ಬೆಳೆಸಿಕೊಳ್ಳುವ ಬದಲಿಗೆ ಅಂದಗೆಡಿಸಿರುವುದನ್ನು ಕಾಣಬಹುದು. ಈ ತಪ್ಪನ್ನು ಈಗಲಾದರೂ ಆತ್ಮಾವಲೋಕನ ಮಾಡಿಕೊಂಡು ತಿದ್ದಿಕೊಳ್ಳುವುದು ಅತ್ಯಗತ್ಯವಾಗಿದೆ.

ಧರ್ಮದ ಗುರಿ ಒಟ್ಟುಗೂಡಿಸುವುದು-ಒಡೆಯುವುದಲ್ಲ

ವಿಶ್ವಗುರು ಬಸವಣ್ಣನವರು ನಮಗೆಲ್ಲ ವಿಶ್ವಕುಟುಂಬತ್ವದ ಬೋಧೆ ನೀಡಿದ್ದಾರೆ,

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ
ಕೂಡಲ ಸಂಗಮದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯ

ಇವನಾರು ? ಎಂದು ಪ್ರಶ್ನಿಸಿ ಜಾತಿ, ಉದ್ಯೋಗ, ಅಂತಸ್ತು ಹಿಡಿದು ಯಾರನ್ನೂ ತಿರಸ್ಕರಿಸದೆ, ಎಲ್ಲರನ್ನೂ ನಮ್ಮವರು ಎಂದು ಆದರಿಸಬೇಕು. ಆಗ ಮಾತ್ರ ನಾವು ನಿಜವಾದ ದೇವಭಕ್ತರು, ದೇವರ ಮಕ್ಕಳು ಆಗಲು ಸಾಧ್ಯ.

ಇಂದು ಜಗತ್ತಿನಲ್ಲಿ,ಭಾರತ ಭೂಮಿಯಲ್ಲಿ ಧರ್ಮವು ಪರಸ್ಪರರನ್ನು ಒಡೆಯುವ ವಿಕೃತರೂಪಹೊಂದಿದೆ. ಕಾರಣವೆಂದರೆ ಧರ್ಮವು ತನ್ನ ಮೂಲಸ್ವರೂಪವನ್ನು ಕಳೆದುಕೊಂಡು ಮತಾಂಧತೆ, ಜಾತ್ಯಂಧತೆ ಆಗಿರುವುದು. ಬಸವ ಧರ್ಮೀಯರಾದ ನಾವು ಈ ಲೋಪವನ್ನು ಅರಿತುಕೊಂಡು ಧರ್ಮವನ್ನು ಒಡೆಯುವ ಸಾಧನವಾಗಿ ಮಾಡಿಕೊಳ್ಳದೆ ಬೆಸೆಯುವ ಸಾಧನವನ್ನಾಗಿ ಮಾಡಿಕೊಳ್ಳಬೇಕು. ಹೇಗೆ ಪೃಥ್ವಿ ತನ್ನ ಅಕ್ಷದ ಮೇಲೆ ತಿರುಗುತ್ತಲೇ ಸೂರ್ಯನ ಸುತ್ತಲೂ ತಿರುಗುವುದೋ ಹಾಗೆ ನಮ್ಮ ಧರ್ಮಾಚರಣೆಯನ್ನು ನಾವು ನಿಷ್ಠೆಯಿಂದ ಪಾಲಿಸುತ್ತ ದೇಶದ ಹಿತಾಸಕ್ತಿ ಕಾಪಾಡಬೇಕು. ವಿಶ್ವಕುಟುಂಬತ್ವದ ಸಂದೇಶ ಸಾರಬೇಕು. ಇಂಥದೊಂದು ಪವಿತ್ರ ಸಂಕಲ್ಪವನ್ನು ಗಣಮೇಳದ ಇಂದು ತೊಡೋಣ.

"ಜಯಗುರು ಬಸವೇಶ ಹರಹರ ಮಹಾದೇವ."

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಹೈದರಾಬಾದ ನಗರದ
ನಿಜಾಮುದ್ದೀನ್ ಕಾಲೇಜ್ ಮೈದಾನದಲ್ಲಿ
1994 ರ ಮೇ **21-22** ರಂದು

ಅಖಿಲ ಭಾರತ ಬಸವ ಧರ್ಮ ದ್ವಿತೀಯ ಸಮ್ಮೇಳನ

ಶರಣ ಬಂಧುಗಳೇ,

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ ಕ್ರಾಂತಿ ದಿನದ ಅಂಗವಾಗಿ ಪ್ರತಿ ವರ್ಷದ ಜನವರಿ 12 ರಿಂದ 15 ರವರೆಗೆ ಶರಣ ಮೇಳವು ನಡೆದು ಬರುತ್ತಿದೆಯಷ್ಟೆ. ಮುಸಲೀಮರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಗಯೆ, ಪವಿತ್ರ ಧರ್ಮಕ್ಷೇತ್ರಗಳಾದಂತೆ ಬಸವ ತತ್ವಾನುಯಾಯಿಗಳಾದ ಲಿಂಗವಂತರಿಗೆ ಕೂಡಲ ಸಂಗಮವು ಧರ್ಮಕ್ಷೇತ್ರವಾಗಿರುವ ಕಾರಣ, ಲಿಂಗವಂತ ಧರ್ಮೀಯರು ವರ್ಷಕ್ಕೊಮ್ಮೆಯಾದರೂ ಒಂದು ಕಡೆ ಸೇರಿ, ತಮ್ಮ ಧಾರ್ಮಿಕ ಅನುಯಾಯಿತ್ವವನ್ನು ಸ್ಥಿರೀಕರಿಸಬೇಕೆಂಬುದೇ ಶರಣ ಮೇಳದ ಉದ್ದೇಶ. ಶರಣ ಮೇಳದ ಮಹಾಸಭೆಯಲ್ಲಿ ಎಲ್ಲೆಡೆಯಲ್ಲಿ ಚೆದುರಿ ಹೋಗಿರುವ ಲಿಂಗವಂತ ಧರ್ಮೀಯರನ್ನು ಸಂಘಟಿಸಲು, ಸಂಸ್ಕಾರ ನೀಡಲು ಮತ್ತು ಏಕರೂಪದ ಆಚಾರ–ವಿಚಾರಗಳನ್ನು ಸಮಾಜದಲ್ಲಿ ತರಲೋಸುಗ ಕರ್ನಾಟಕದ ಹೊರರಾಜ್ಯಗಳಲ್ಲಿ ಬಸವ ಧರ್ಮ ಸಮ್ಮೇಳನ ನಡೆಸಬೇಕೆಂದು ನಿರ್ಣಯ ಕೈಗೊಳ್ಳಲಾಯಿತು. 1993ರ ಮೇ ತಿಂಗಳಿನಲ್ಲಿ ಮೊಟ್ಟ ಮೊದಲ ಸಮ್ಮೇಳನವು ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕಾಟೇರಿಯಲ್ಲಿ ಯಶಸ್ವಿಯಾಗಿ ನೆರವೇರಿತು. ಎರಡನೆಯ ಸಮ್ಮೇಳನ ನಡೆಸುವ ಭಾಗ್ಯವು ಆಂಧ್ರ ಪ್ರದೇಶದವರಿಗೆ ಒದಗಿ ಬಂದಿದೆ.

ಇಂಥ ಸಮ್ಮೇಳನವನ್ನು ನಡೆಸುವುದರಿಂದ ಶರಣ ಬಂಧುಗಳೆಲ್ಲ ಒಟ್ಟಾಗಿ ಸೇರಲು, ಸಂಸ್ಕಾರ ಹೊಂದಲು, ಸಂಘಟನೆ ಮಾಡಲು ಅನುಕೂಲವಾಗುವುದು.

ಹಿಂದುಳಿದ ವರ್ಗಗಳ ಆಯೋಗಕ್ಕೆ ಮನವಿ

ಆಂಧ್ರ ಸರ್ಕಾರವು ಪ್ರಸಕ್ತ ವರ್ಷದ ಜನವರಿ ಕೊನೆಯವಾರದಲ್ಲಿ ನ್ಯಾಯ ಮೂರ್ತಿ ಶ್ರೀ. ಕೆ. ಎಸ್. ಪುಟ್ಟಸ್ವಾಮಿಯವರ ನೇತೃತ್ವದಲ್ಲಿ ಬಹುದಿನಗಳಿಂದ ಎಲ್ಲರೂ ನಿರೀಕ್ಷಿಸುತ್ತಿದ್ದ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿರುವುದು ಸರ್ವರಿಗೂ ತಿಳಿದಿದೆಯಷ್ಟೆ. ಲಿಂಗವಂತರು (ಲಿಂಗಾಯತ, ವೀರಶೈವ ಎಂಬ ಪರ್ಯಾಯ ಹೆಸರುಗಳಿವೆ) ಬಹಳ ಹಿಂದುಳಿದವರಾಗಿದ್ದು ಶೈಕ್ಷಣಿಕವಾಗಿ, ಆರ್ಥಿಕ-ವಾಗಿ, ದುರ್ಬಲರಿದ್ದಾರೆ, ಸಮಾಜದ ಈ ಪರಿಸ್ಥಿತಿಯನ್ನು ಎಲ್ಲರೂ ಒಗ್ಗಟ್ಟಿನಿಂದ ಹಿಂದುಳಿದ ವರ್ಗಗಳ ಆಯೋಗಕ್ಕೆ, ತನ್ಮೂಲಕ ಆಂಧ್ರ ಸರಕಾರಕ್ಕೆ ಮನಗಾಣಿಸಿ ಕೊಡಬೇಕಾಗಿದೆ.

ಕನ್ನಡವನ್ನೇ ಧರ್ಮಭಾಷೆಯನ್ನಾಗಿ ಹೊಂದಿ, ಕರ್ನಾಟಕದಲ್ಲಿ 12 ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರಿಂದ ಸ್ಥಾಪಿತವಾಗಿರುವ ಲಿಂಗಾಯತ ಧರ್ಮೀಯರು ಹಲವಾರು ರಾಜ್ಯಗಳಲ್ಲಿ ಚದುರಿ ಹೋಗಿದ್ದು ಧಾರ್ಮಿಕವಾಗಿ, ಸಾಮಾಜಿಕವಾಗಿ ಒಟ್ಟುಗೂಡಬೇಕಾದುದು ಅತ್ಯಂತ ಅಗತ್ಯವಾಗಿರುವುದರಿಂದ ಈ ಸಮ್ಮೇಳನವನ್ನು ಏರ್ಪಡಿಸಲಾಗಿದೆ.

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾ ಸ್ವಾಮಿಗಳು, ಬಸವ ಧರ್ಮ ಪೀಠ ಕೂಡಲ ಸಂಗಮ, ಇವರು ದ್ವಿತೀಯ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ. **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ** ಯವರ ಮಾರ್ಗದರ್ಶನದಲ್ಲಿ, ಪೂಜ್ಯ ಶ್ರೀ ಮ. ಘ. ಚ. ಬಸವಲಿಂಗ ಪಟ್ಟದ್ದೇವರು, ಹಿರೇಮಠ, ಭಾಲ್ಕಿ ಮತ್ತು ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರ ನೇತೃತ್ವದಲ್ಲಿ ನೆರವೇರಲಿರುವ ಈ ಸಮ್ಮೇಳನದಲ್ಲಿ ಹಲವಾರು ಪೂಜ್ಯರುಗಳು ಗಣ್ಯರು, ರಾಜಕೀಯ ನೇತಾರರು ಭಾಗವಹಿಸಿ ಉಪನ್ಯಾಸ ಮಾಡಲಿದ್ದಾರೆ. ಈ ಕಾರ್ಯಕ್ರಮದ ವ್ಯವಸ್ಥೆಗಾಗಿ ಬೃಹತ್ ಪ್ರಮಾಣದ ಖರ್ಚು ಬರಲಿದ್ದು ತಮ್ಮೆಲ್ಲರ ಸಹಾಯ ಸಹಕಾರ ಅತ್ಯಗತ್ಯ. ಧನ ಸಹಾಯ ಮಾಡುವವರಿಗೆ ಕೆಳಗಿನಂತೆ ವಿವರ–ಗಳನ್ನು ನೀಡಲಾಗಿದೆ.

ಮಹಾಪೋಷಕರು	10, 000 ರೂಗಳಿಗೆ ಮೇಲೆ	ಕೊಟ್ಟವರು	
ಪೋಷಕರು	5000 ರೂ.	"	"
ದಾನಿಗಳು	1000 ರೂ.	"	"
ಹಿತೈಷಿಗಳು	500 ರೂ.		
ಪ್ರತಿನಿಧಿ ಶುಲ್ಕ	100 ರೂ.		

ಬಂದಂತಹ ಪ್ರತಿನಿಧಿಗಳಿಗೆ ಸೂಕ್ತವಾದ ಊಟ–ವಸತಿಯ ವ್ಯವಸ್ಥೆ ಮಾಡುವ ಹೊಣೆಗಾರಿಕೆ ನಮ್ಮ–ನಿಮ್ಮ ಮೇಲಿದೆ. ಆದ್ದರಿಂದ ತಾವೆಲ್ಲರೂ ಉದಾರವಾಗಿ ದೇಣಿಗೆ ನೀಡಬೇಕೆಂದು ಕೋರುತ್ತೇವೆ. ಬಸವ ತತ್ವಾಭಿಮಾನಿಗಳು ಸ್ಥಳೀಯ ಸಮಿತಿ ಗಳನ್ನು ರಚಿಸಿಕೊಂಡು ಉದಾರವಾಗಿ ದೇಣಿಗೆ ಸಂಗ್ರಹಿಸಿ ಕಳುಹಿಸಿಕೊಡಬೇಕೆಂದು ವಿನಂತಿಸುತ್ತೇವೆ.

Andhra Pradesh Veerashaiva Lingayat Fedaration, ಹೆಸರಿಗೆ ಬ್ಯಾಂಕ್ D. D. ಚೆಕ್, ಎಂ. ಓ. ಕಳಿಸಬೇಕು. ಹೈದರಾಬಾದಿನ ಯಾವುದೇ ಬ್ಯಾಂಕ್ ಶಾಖೆಗೆ D. D. ತೆಗೆಸಬಹುದು.

ವ್ಯವಹರಿಸುವ ವಿಳಾಸ ;

All India Basava Dharma Second Conference
Committee C/o Chairman V. V. Hostel
Narayana Guda, Hyderabad–500027, Andhra Pradesh.

ದೂರವಾಣಿ ಸಂಖ್ಯೆಗಳು : 668317, 515166, 271671, 876599.
ತಾವು ಅಧಿಕಧಿಕ ಸಂಖ್ಯೆಯಲ್ಲಿ ಆಗಮಿಸಿ, ಉದಾರವಾಗಿ ಧನ ಸಹಾಯ ಮಾಡಿ ಸಮ್ಮೇಳನಕ್ಕೆ ಯಶಸ್ಸು ತಂದುಕೊಡುವಿರಾಗಿ ನಂಬುತ್ತೇವೆ.

★ ಶರಣರ ಬರವೆಮಗೆ ಪ್ರಾಣಜೀವಾಳ ★

ಶರಣ. ಶಿವರಾಜ ಶೆಟಕಾರ
ಗೌರವಾಧ್ಯಕ್ಷರು

ಶರಣ. ಸುಭಾಷ್ ಪಾಟೀಲ
ಕಾರ್ಯಾಧ್ಯಕ್ಷರು.

ಶರಣ. ಶೆಟ್ಟಿ ಚಂದ್ರಶೇಖರ.
ಪ್ರಧಾನ ಕಾರ್ಯದರ್ಶಿ

ಶರಣ. ಪಿ. ಶಿವರಾಜ ಬಿರಾದಾರ
ರಾ. ಬ. ದಳ, ಜಿಯಾಗುಡ, ಹೈದರಾಬಾದ

ಅಪ್ರತಿಮ ಸಾಧನೆಯ ಅಮೂಲ್ಯ ಚೇತನ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

—ಡಾ॥ ನೀತಿನಚಂದ್ರ ಹತ್ತೀಕಾಳ, ಧಾರವಾಡ

ತಮ್ಮ ಅಪೂರ್ವವಾಗ್ಮಿತ್ವ, ಪ್ರಗತಿ ಪರ ಚಿಂತನೆ, ಸಘಂಟನಾ ಸಾಮರ್ಥ್ಯ ಸಮುಷ್ಟಿ ಪ್ರಜ್ಞೆಯಿಂದ ಧಾರ್ಮಿಕ ಜಗತ್ತಿನಲ್ಲಿ ಚಿರಪರಿಚಿತರಾಗಿರುವ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ಅವರು ಸಾರ್ಥಕವಾಗಿ 48 ವರ್ಷಗಳನ್ನು ಪೂರೈಸಿ, ಇದೇ ಮಾರ್ಚ್ 13 ರಂದು 49 ನೆಯ ವರ್ಷಕ್ಕೆ ಪಾದಾರ್ಪಣ ಮಾಡುತ್ತಿರುವ ಸನ್ನಿವೇಶದಲ್ಲಿ ಅವರ ಭಕ್ತವೃಂದವು ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಪೂಜ್ಯರ ವರ್ಧಂತಿ ಉತ್ಸವವನ್ನು ಆಚರಿಸುತ್ತಲಿದ್ದು, ಈ ಹಿನ್ನೆಲೆಯಲ್ಲಿ ಶ್ರೀ ಮಾತಾಜಿಯವರನ್ನು ಕುರಿತ ವಿಶೇಷ ಲೇಖನ ಕೊಡಲಾಗಿದೆ.

ಧಾರ್ಮಿಕ ಜಗತ್ತಿನಲ್ಲಿಂದು ಅಪಾರ ಖ್ಯಾತಿಯನ್ನು ಹೊಂದಿ, ಸಕ್ಕರೆ ಇದ್ದಲ್ಲಿ ಇರುವೆಗಳು ಮುಂಕುರುವಂತೆ ತಮ್ಮ ಅಪೂರ್ವ ವಾಗ್ಮಿತ್ವದಿಂದ ಜನ ಸಮೂಹವನ್ನು ಆಕರ್ಷಿಸುತ್ತಿರುವ ಅಮೂಲ್ಯ ಚೇತನ **—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯ**ವರು. ಚಿನ್ಮೂಲಾದ್ರಿ ಎಂಬ ಐತಿಹಾಸಿಕ, ಧಾರ್ಮಿಕ ಹೆಸರು ಹೊತ್ತ ಚಿತ್ರದುರ್ಗದಲ್ಲಿ ಶ್ರೀ ಡಾ॥ ಎಸ್. ಆರ್. ಬಸಪ್ಪ ಮತ್ತು ಶ್ರೀಮತಿ ಗಂಗಮ್ಮನವರ ಚಿದ್ಗರ್ಭದಲ್ಲಿ ದಿ. 13-3-1946 ರಂದು ಜನಿಸಿದ ಪೂಜ್ಯ ಮಾತೆಯವರ ಬಾಲ್ಯದ ಹೆಸರು ರತ್ನ. ತಮ್ಮ ಮನೆಯನ್ನು ಬೆಳಗುವ ರತ್ನವಾಗಲೆಂದು ಹಾರೈಸಿ ಹೆತ್ತವರು ಇಟ್ಟ ಹೆಸರು, ಇಂದು ಜ್ಞಾನರತ್ನವಾಗಿ ಬೆಳಗುತ್ತಿರುವ ಮಾತಾಜಿಯವರಿಗೆ ಅನ್ವರ್ಥಕವಾಗಿದೆ. ಬಾಲ್ಯದಿಂದಲೂ ಅಧ್ಯಾತ್ಮಿಕ ಅಭೀಪ್ಸೆ ಹೊಂದಿದ ಮಾತಾಜಿಯವರ ಮನಸ್ಸು ಬಿ. ಎಸ್‌ಸಿ ಪದವಿ ಪರೀಕ್ಷೆ ಪೂರೈಸುತ್ತಲೇ ಸನ್ಯಾಸ ಜೀವನ ಸ್ವೀಕರಿಸುವತ್ತ ವಾಲಿತು. ಚಿತ್ರದುರ್ಗದಲ್ಲಿ ನಡೆದ ಬೃಹತ್ ಸಮಾರಂಭವೊಂದರಲ್ಲಿ ಗುರುದರ್ಶನವನ್ನು ಪಡೆವ ಭಾಗ್ಯದೊರೆಯಿತು. ಮೊದಲಿನಿಂದಲೂ ಸ್ವಾಮಿ ವಿವೇಕಾನಂದರ ಜೀವನ–ಸಂದೇಶಗಳಿಂದ ಪ್ರಭಾವಿತರಾಗಿದ್ದ ಮಾತೆಯವರು ಅಭಿನವ ವಿವೇಕಾನಂದರೆಂದು ಖ್ಯಾತನಾಮರಾಗಿದ್ದ **ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ** ಅಮೃತವಾಣಿಯಿಂದ ಪ್ರೇರಿತರಾಗಿ ತ್ಯಾಗ ಜೀವನವನ್ನು ಸ್ವೀಕರಿಸಿದರು. ಪೂಜ್ಯ ಶ್ರೀಗಳ ತಾತ್ತ್ವಿಕ ಪ್ರವಚನಗಳು ವಚನ ವಾಙ್ಮಯದ ಅಧ್ಯಯನಕ್ಕೆ ಅನುವು ಮಾಡಿಕೊಟ್ಟವು. 1965 ರಲ್ಲಿ ಜಂಗಮ ದೀಕ್ಷೆಯನ್ನು ಪಡೆದ ರತ್ನ, ವೀರ ವೈರಾಗ್ಯನಿಧಿ, ಜಗನ್ಮಾತಾ ಅಕ್ಕಮಹಾದೇವಿ ನಡೆದ ವೈರಾಗ್ಯ ಪಥದಲ್ಲಿ ಸಾಗಬಯಸಿ, ಮಾತೆ ಮಹಾದೇವಿ ಎಂಬ ನೂತನ ಹೆಸರನ್ನು ಪಡೆದರು. ಒಂದು ದಿನ ಕಂಡ ಕನಸಿನಲ್ಲಿ ಎಂ. ಎ. ತತ್ತ್ವಜ್ಞಾನವನ್ನು ಓದಬೇಕು ಎಂಬ ದಿವ್ಯ ಆದೇಶವನ್ನು ಪಡೆದ ಮಾತೆಯವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡತೊಡಗಿದರು. ವಿಶ್ವಗುರು ಬಸವಣ್ಣನವರ ಧಾರ್ಮಿಕ ಸಂವಿಧಾನದ ಪ್ರಕಾರ ಮಹಿಳೆಯರಿಗೂ ಸಮಾನ ಧಾರ್ಮಿಕ ಹಕ್ಕುಗಳಿದ್ದು, ಪುರುಷರಿಗೆ ಮಠ–ಪೀಠ–ಗುರುತ್ವದ ಅವಕಾಶ ದೊರೆತಂತೆ ಮಹಿಳೆಯರಿಗೂ ಅವಕಾಶವಿರಬೇಕೆಂದು 1970 ರಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠವನ್ನು ಸಂಸ್ಥಾಪಿಸಿದರು. ಪ್ರಥಮ ಮಹಿಳಾ ಜಗದ್ಗುರು ಎಂಬ ವಿಶೇಷ ಗೌರವಕ್ಕೆ ಪಾತ್ರರಾದ ಪೂಜ್ಯ ಮಾತೆಯವರು ಬಹುಮುಖ ವ್ಯಕ್ತಿತ್ವ ಉಳ್ಳವರು. ಎಂ. ಎ. ಪದವಿ ಪೂರೈಸಿದಂದಿನಿಂದಲೂ ಎಡಬಿಡದ ಸಂಚಾರವನ್ನು ಕೈಗೊಂಡು ನಾಡಿನಾದ್ಯಂತ ಸಂಚರಿಸಿ ಧರ್ಮಪ್ರಚಾರ ಮಾಡುತ್ತಲಿದ್ದಾರೆ.

ಅಪೂರ್ವ ವಾಗ್ಮಿ : ಪೂಜ್ಯ ಮಾತಾಜಿಯವರು ಅಸ್ಖಲಿತವಾಣಿಯ ವಾಗ್ಮಿತ್ವಕ್ಕೆ ಹೆಸರಾಗಿದ್ದಾರೆ. ಭಾಷಣವೆಂದರೆ ಬೇಸರದ ಬುಗ್ಗೆ ಎಂದು ಜನರು ಮೂಗೆಳೆಯುವ ಈ ಕಾಲದಲ್ಲಿ ಅವರೆ ಕಂಠಶ್ರೀಯಿಂದ ಬರುವ ಜ್ಞಾನ ಧಾರೆಗಾಗಿ ಜನರು ಆಸಕ್ತಿಯಿಂದ ಸೇರುತ್ತಾರೆ. ಒಂದಲ್ಲ ಎರಡಲ್ಲ 40–50 ದಿವಸಗಳ ಕಾಲ ಪ್ರವಚನ ನಡೆದರೂ ದಿನದಿನಕ್ಕೂ ಶ್ರೋತೃಗಳ ಸಂಖ್ಯೆ ವರ್ಧಿಸುತ್ತಾ ಹೋಗುವುದನ್ನು ಕಾಣುತ್ತೇವೆ. ಪೂಜ್ಯ ಮಾತೆಯವರ ನಾಲಿಗೆಯ ಮೇಲೆ ಕನ್ನಡ ಸಾಹಿತ್ಯ ಸರಸ್ವತಿ ನರ್ತಿಸುತ್ತಾಳೆ ಎಂದು ಡಾ॥ ದೇ. ಜವರೇಗೌಡರು ಉದ್ಗರಿಸಿದುದರಲ್ಲಿ ಉತ್ಪ್ರೇಕ್ಷೆ ಏನಿಲ್ಲ. ಚಿಕ್ಕಮಕ್ಕಳು, ಹೆಣ್ಣುಮಕ್ಕಳಿಂದ ಹಿಡಿದು ಪ್ರೌಢರು, ಚಿಂತನಶೀಲರು ಮುಮುಕ್ಷುಗಳು ಪೂಜ್ಯರ ಜ್ಞಾನ ಸಂಪತ್ತನ್ನು ಪಡೆದುಕೊಳ್ಳಲು ಆಸಕ್ತರಾಗಿ ಧಾವಿಸುವುದು ಮಾತ್ರವಲ್ಲ ಮಂತ್ರ ಮುಗ್ಧರಾಗಿ ಆಲಿಸುವುದನ್ನು ಕಾಣುತ್ತೇವೆ. ಒಂದು ಹೂವು ಪರಿಪೂರ್ಣ ಹೂವು ಎನಿಸಿಕೊಳ್ಳುವುದು ಅದರಲ್ಲಿ ಸೌಂದರ್ಯ, ಸೌರಭ, ಮಕರಂದ ಮೂರೂ ಇದ್ದಾಗಲೆ! ಹಾಗೆಯೇ ಪೂಜ್ಯ ಮಾತೆಯವರ ಪ್ರವಚನಗಳಲ್ಲಿ ಸಾಹಿತ್ಯದ ಸೌಂದರ್ಯ, ತತ್ತ್ವಜ್ಞಾನದ ಸೌರಭ, ಅನುಭಾವ ಭಕ್ತಿಯ ಮಕರಂದ ಮೂರೂ ಮೇಳವಿಸಿರುತ್ತವೆ. ಪ್ರವಚನಗಳ ಧ್ವನಿಸುರುಳಿಗಳು ಅಪಾರ ಜನಪ್ರಿಯತೆ ಗಳಿಸಿವೆ.

ಸಾಹಿತಿ : ಪೂಜ್ಯ ಮಾತೆಯವರು ಎಪ್ಪತ್ತಕ್ಕೂ ಮಿಕ್ಕಿ ಕೃತಿಗಳನ್ನು ರಚಿಸಿದ್ದು ಲೇಖನ, ತಾತ್ತ್ವಿಕ ಗ್ರಂಥ, ದೃಷ್ಟಾಂತ ಕಥೆ, ಕಾದಂಬರಿ, ಜೀವನ ಚರಿತ್ರೆ – ಹೀಗೆ ಎಲ್ಲ

ಪ್ರಾಕಾರಗಳನ್ನೂ ಬಳಸಿಕೊಂಡಿದ್ದಾರೆ. ಅವರ ಕೃತಿಗಳು ಬಹು ಜನಪ್ರಿಯವಾಗಿದ್ದು, ಹಲವಾರು ಮರು ಮುದ್ರಣ ಕಂಡಿವೆ. ಹೆಪ್ಪಿಟ್ಟ ಹಾಲು ಎಂಬ ಸಾಮಾಜಿಕ ಕಾದಂಬರಿ, ತರಂಗಿಣಿ ಎಂಬ ಅಕ್ಕಮಹಾದೇವಿ ಕುರಿತಾದ ಕಾದಂಬರಿ, ಕೆಳದಿ ಚೆನ್ನಮ್ಮಾಜಿ ಎಂಬ ಐತಿಹಾಸಿಕ ಕಾದಂಬರಿಗಳು ವಿಶೇಷವಾಗಿ ಜನಮೆಚ್ಚುಗೆ ಗಳಿಸಿವೆ.

ಸಂಘಟನಾ ಚತುರರು : 'ಗಣಪತಿ' ಎಂಬುದು ತಾತ್ತ್ವಿಕ ಪರಿಕಲ್ಪನೆ ಎಂದು–ಕೊಂಡರೆ ; ಗಣಪತಿ ಅಂದರೆ ಸಮಾಜ ನೇತಾರರಾಗಬೇಕಾದರೆ ಅವರಲ್ಲಿ ಸ್ವತಂತ್ರ ಬುದ್ಧಿ–ವಾಕ್ಸಿದ್ಧಿ ಎರಡೂ ಅತ್ಯಗತ್ಯ, ಪೂಜ್ಯ ಮಾತೆಯವರಲ್ಲಿ ಸ್ವತಂತ್ರ ಚಿಂತನ–ಶಕ್ತಿ ಮತ್ತು ವಾಕ್‌ಸಿದ್ಧಿ ಎರಡೂ ಸಂಯೋಗಗೊಂಡು,ಅವರು ಜನರನ್ನು ಧರ್ಮದತ್ತ ಆಕರ್ಷಿಸುವಲ್ಲಿ ಬಹು ಸಫಲರಾಗಿದ್ದಾರೆ. ಸಮತಾವಾದಿ, ಮಾನವತಾವಾದಿ, ವಿಶ್ವ–ಗುರು ಬಸವಣ್ಣನವರು ಮತ್ತು ಅವರ ಪರಂಪರೆಯ ಶರಣರ ವಚನಗಳು ವಿಪುಲವಾಗಿ ಮುದ್ರಣಗೊಂಡಿದ್ದರೂ ಅವು ಜನಸಾಮಾನ್ಯರನ್ನು ಸೂಕ್ತ ರೀತಿಯಲ್ಲಿ ತಲ್ಪಿರಲಿಲ್ಲ· ವಚನಗಳನ್ನು ಕೇವಲ ಧಾರ್ಮಿಕ ಚೌಕಟ್ಟಿನಲ್ಲಿ ಸಾಂಪ್ರದಾಯಿಕ ಶೈಲಿಯಲ್ಲಿ ಅರ್ಥೈಸ ಲಾಗುತ್ತಿತ್ತು. ಇಂಥ ವಚನಗಳಲ್ಲಿ ಹುದುಗಿರುವ ವಿಶ್ವಮಾನವ ನೀತಿ, ವಿಶಾಲತೆ, ಮಾನವೀಯತೆ, ವಿಶ್ವಧರ್ಮದ ಕಲ್ಪನೆಗಳನ್ನು ತಮ್ಮ ಬರಹ, ಭಾಷಣಗಳಿಂದ ಪ್ರಚಾ-ರಗೊಳಿಸಿ, ಆಧುನಿಕ ದೃಷ್ಟಿಕೋನದಿಂದ ಜನರು ಅರ್ಥಮಾಡಿಕೊಳ್ಳಲು ಪೂಜ್ಯ–ಮಾತೆಯವರು ಅನುವು ಮಾಡಿಕೊಟ್ಟಿದ್ದಾರೆ. ಸಮಾನತೆ, ಧಾರ್ಮಿಕ ಭ್ರಾತೃತ್ವ, ಪ್ರಗತಿಪರ ದೃಷ್ಟಿಕೋನ ಹೊಂದಿದ ಸಮಾನ ಮನಸ್ಕರ ಕೂಟವಾಗಿ ರಾಷ್ಟ್ರೀಯ ಬಸವ ದಳಗಳನ್ನು ರೂಪಿಸಿ ನಗರದಿಂದ ಹಿಡಿದು ಗ್ರಾಮಮಟ್ಟದವರೆಗೆ ಸಾಮೂಹಿಕ ಪ್ರಾರ್ಥನೆ, ಅನುಭವಗೋಷ್ಠಿ ನಡೆಯಲು ಯೋಜನೆ ರೂಪಿಸಿದ್ದಾರೆ, "ಧರ್ಮ ಮತ್ತು ರಾಷ್ಟ್ರ ವ್ಯಕ್ತಿ ಜೀವನದ ಅವಿಭಾಜ್ಯ ಅಂಗಗಳು. ಧರ್ಮವಂತನು ಕೇವಲ ಆತ್ಮೋದ್ಧಾರದಲ್ಲಿ ನಿರತನಾದರೆ ಸಾಲದು ತನ್ನ ಸುತ್ತಣ ಸಮಾಜ–ರಾಷ್ಟ್ರಗಳ ಹಿತಾಸಕ್ತಿ ಕುರಿತು ಚಿಂತನೆ ಮಾಡುವುದು ಅತ್ಯಗತ್ಯ" ಎಂಬ ಮನೋಭಾವ ಬೆಳೆಸುತ್ತಿದ್ದಾರೆ.

ಶರಣ ಮೇಳ : ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ ಪ್ರತಿವರ್ಷವೂ ಬಸವ ಕ್ರಾಂತಿ (ಸಂಕ್ರಾಂತಿ) ದಿನದಂದು ಜಾತಿ, ವರ್ಣ, ವರ್ಗ, ಲಿಂಗಭೇದವಿಲ್ಲದೆ ಬಸವ ತತ್ತ್ವಾನುಯಾಯಿಗಳೆಲ್ಲರೂ ಸಮಾವೇಶವಾಗಬೇಕು ಎಂದು, "ಶರಣ ಮೇಳ" ಎಂಬ ಬೃಹತ್ ಕಾರ್ಯಕ್ರಮದ ರೂಹಾರಿಯಾದರು ಪೂಜ್ಯ ಮಾತೆಯವರು. 1988ರಲ್ಲಿ ಪ್ರಥಮ ಶರಣ ಮೇಳವನ್ನು ಸಂಯೋಜಿಸಿದಾಗ ಹುಬ್ಬೇರಿಸಿದ, ಅನೇಕ ಆತಂಕ ಒಡ್ಡಿದ ಜನರು ಸಹ ಇಂದು ಆಶ್ಚರ್ಯ–ಆನಂದಗಳಿಂದ ಮೂಗಿನ ಮೇಲೆ ಬೆರಳು ಇಡುವಂತೆ ಶರಣ ಮೇಳ ವರ್ಧಿಸಿದೆ. ಇದೇ ಜನವರಿಯಲ್ಲಿ ನಡೆದ "ಶರಣ ಮೇಳ" ಮೂರೂವರೆ ಲಕ್ಷಕ್ಕೂ ಮಿಕ್ಕಿದ ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸಿತಲ್ಲದೆ ಹೊರರಾಜ್ಯಗಳಿಂದೆಲ್ಲ ಅಧಿಕಧಿಕ ಸಂಖ್ಯೆಯಲ್ಲಿ ಶರಣರನ್ನು ಬರಮಾಡಿಕೊಳ್ಳುತ್ತಿದೆ. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಜನರನ್ನು ಆಕರ್ಷಿಸುವ ಜಾತ್ರೆ, ಮೇಳಗಳು ನಡೆದಿರಬಹುದು, ನಡೆಯುತ್ತಿರಬಹುದು.

ಆದರೆ ಶರಣ ಮೇಳವು ಶಿಸ್ತು-ಅಚ್ಚುಕಟ್ಟು ಮತ್ತು ವ್ಯವಸ್ಥೆಗೆ ಖ್ಯಾತಿವೆತ್ತಿರುವುದು ವಿಶೇಷ. ಬರುವ ಲಕ್ಷಾಂತರ ಭಕ್ತರಿಗೆ ವಸತಿ–ಊಟ–ಉಪಚಾರ–ವೈದ್ಯಕೀಯ ಸೇವೆಗಳನ್ನು ಶರಣ ಕಾರ್ಯಕರ್ತರು ನಿಷ್ಠೆಯಿಂದ ತನುಮುಟ್ಟಿ, ಮನಮುಟ್ಟಿ ಮಾಡುವುದು. ಜೇನುಗೂಡಿನಲ್ಲಿ ಕಾರ್ಯನಿರತವಾದ ಜೇನ್ನೊಣಗಳ ಕಾಯಕದಂತೆ ತೋರುವುದು ಇಂತಹ ಶರಣ ಮೇಳದ ಸಚೇತಕ ಶಕ್ತಿ ಅದರ ಕಾರ್ಯಾಧ್ಯಕ್ಷೆಯಾದ ಪೂಜ್ಯ ಮಾತೆಯವರು ಎಂಬುದನ್ನು ಎಲ್ಲರೂ ಬಲ್ಲರು.

ಗಣ ಮೇಳ : ಕಾಗೆಯೊಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವೆಲ್ಲವನು ? ಕೋಳಿ ಒಂದು ಕುಟುಕ ಕಂಡರೆ ಕರೆಯದೆ ತನ್ನ ಕುಲವನೆಲ್ಲವ ? ಎಂದು ಪ್ರಶ್ನಿಸಿದ ವಿಶ್ವಗುರು ಬಸವಣ್ಣನವರು 'ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ ಆ ಕಾಗೆಕೋಳಿಗಳಿಗಿಂತ ಕೀಳು ಮಾನವನ ಜೀವನ,' ಎಂದು ಬೋಧಿಸಿ ಮಾರ್ಗದರ್ಶನ ಮಾಡಿದ್ದಾರೆ. ಈ ಮಾತನ್ನು ಬಸವಣ್ಣನವರ ದಿವ್ಯ ಆದೇಶ (Commandment) ಎಂದೇ ಭಾವಿಸಿದ ಪೂಜ್ಯ ಮಾತೆಯವರು 'ಗಣ ಮೇಳ' ಎಂಬ ವಿಶೇಷ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಮಹಾಶಿವರಾತ್ರಿಯಂದು ಬೆಳಿಗ್ಗೆ 10 ರಿಂದ 11–30 ರ ವರೆಗೆ ಜಾತಿಮತ ಪಂಥಭೇದವಿಲ್ಲದೆ ಬಸವ ತತ್ತ್ವಾನು–ಯಾಯಿಗಳು ಒಂದೆಡೆ ಸಮಾವೇಶವಾಗಿ ಸಮುದಾಯ ಪ್ರಾರ್ಥನೆ-ಪ್ರತಿಜ್ಞಾಸ್ವೀಕಾರಗಳನ್ನು ಹಲವಾರು ಕಡೆ ನಡೆಸಿದುದಾಗಿ ರಾಜ್ಯದಾದ್ಯಂತದಿಂದ ವರದಿಗಳು ಬಂದಿವೆ. ಧಾರವಾಡ–ಹುಬ್ಬಳ್ಳಿ ಅವಳಿ ನಗರಗಳ ಶರಣ ಬಂಧುಗಳು ಆರ್. ಎನ್. ಶೆಟ್ಟಿ ಕ್ರೀಡಾಂಗಣದಲ್ಲಿ ಸಮುದಾಯ ಪ್ರಾರ್ಥನೆ–ಪ್ರತಿಜ್ಞಾ ಸ್ವೀಕಾರ ವಿಧಿಯನ್ನು ಮಾರ್ಚ್ 10 ರಂದು ಮಾಡಿದುದು ಜನತೆಯ ಮನಸ್ಸಿನಲ್ಲಿ ಹಚ್ಚಹಸುರಾಗಿದೆ.

ಸಂಸ್ಥಾ ನಿರ್ಮಾಪಕರು : ಧಾರವಾಡ ನಗರದಲ್ಲಿ ಉಳವಿ ರಸ್ತೆಯಲ್ಲಿರುವ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಬೆಂಗಳೂರಿನ ವಿಶ್ವಕಲ್ಯಾಣ ಮಿಷನ್, ಕೂಡಲ ಸಂಗಮದ ಬಸವ ಧರ್ಮಪೀಠ ಟ್ರಸ್ಟ್ ಪೂಜ್ಯ ಮಾತೆಯವರ ಕರ್ತೃತ್ವ ಶಕ್ತಿಯ ಸಾಕಾರ. ಹಾಗೆ ನೋಡಿದರೆ ಈ ಸಾಕಾರ ಸಂಸ್ಥೆಗಳಿಗಿಂತಲೂ ಚಿಂತನ ಶೀಲ ಜನರನ್ನು ಮಾನಸಿಕ–ಬೌದ್ಧಿಕ ತರಬೇತಿಯೊಡನೆ ವ್ಯಾಪಕವಾಗಿ ತಯಾರು ಮಾಡಿರುವುದು ಇನ್ನೂ ಹೆಚ್ಚಿನದು. ಪುಸ್ತಕ ಪ್ರಕಟಣೆ, ಆಡಿಯೋ–ವೀಡಿಯೋ ಕೆಸೆಟ್ಟು ತಯಾರಿಕೆ, ಕ್ರಾಂತಿಯೋಗಿ ಬಸವಣ್ಣ ಚಲನಚಿತ್ರ ತಯಾರಿಕೆ–ಹೀಗೆ ಎಲ್ಲ ಮಾಧ್ಯಮಗಳನ್ನು ಬಳಸಿ ಧರ್ಮಪ್ರಚಾರವನ್ನು ಪೂಜ್ಯರು ಕೈಗೊಂಡಿದ್ದಾರೆ.

ಕೂಡಲ ಸಂಗಮ ಸುಕ್ಷೇತ್ರವು ಪುರಾತನ ಸಂಗಮೇಶ್ವರ ದೇವಾಲಯ ಹೊಂದಿದ ಶೈವಕ್ಷೇತ್ರ; ಇದಕ್ಕೆ ಎರಡು ನದಿಗಳ ಸಂಗಮದ ಸೌಭಾಗ್ಯ ಸೇರಿ ಪ್ರಾಕೃತಿಕ ಶ್ರೀಯೂ ಮೇಳವಿಸಿದೆ. ಹಿಂದೆ, ಹನ್ನೆರಡನೆಯ ಶತಮಾನದಲ್ಲಿ ಪ್ರಸಿದ್ಧ ಗುರುಕುಲ ಸಹ ಇದ್ದು ನಳಂದ–ತಕ್ಷಶಿಲೆಯಂತಹ ಕೀರ್ತಿ ಹೊಂದಿತ್ತು.

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರವಾಗಿ ಮತ್ತಷ್ಟು ಕೀರ್ತಿ ವಿಶೇಷಿತವಾದ ಭಾಗ್ಯ ಇದರದು. ಆದರೆ ಈ ಎಲ್ಲ ಕನಸನ್ನು

ಹೊತ್ತು ಅಲ್ಲಿ ಹೋದರೆ ನಿರಾಶೆ ಕಟ್ಟಿಟ್ಟದ್ದು: ಇರಲಿಪ್ಪು ಜಾಗವಿಲ್ಲ, ಕುಡಿಯುವ ಶುದ್ಧ ನೀರು ದೊರೆಯದು, ಮಳೆಗಾಲ-ಚಳಿಗಾಲದಲ್ಲಿ ನದಿ ದಡದ ಬಯಲು ಮಂಟಪ ಬಿಟ್ಟರೆ ಬೇರೆ ಚಾಟು ಇಲ್ಲ. ಇಷ್ಟೊಂದು ಹಿಂದುಳಿದಿದ್ದ ಸ್ಥಾನಕ್ಕೆ ಜಂಗಮ ಶಕ್ತಿಯಾಗಿ ಬಂದು 1987 ರಲ್ಲಿ ನೆಲೆಸಿದ ಪೂಜ್ಯರು ಬಸವ ಧರ್ಮಪೀಠ ಟ್ರಸ್ಟನ್ನು ಸ್ಥಾಪಿಸಿದರು. **ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ** ಮಾರ್ಗದರ್ಶನದಲ್ಲಿ ಇಂದು ಬಸವ ಧರ್ಮಪೀಠ ಟ್ರಸ್ಟ್ ಕೇವಲ ಆರೂವರೆ ವರ್ಷಗಳಲ್ಲಿ ಸಾಧಿಸಿರುವುದು ಅಗಾಧವಾದುದು. ಅಕ್ಕನಾಗಲಾಂಬಿಕಾ ಶರಣ ಧಾಮ–50 ಕೋಣೆಗಳ ಅತಿಥಿ ಗೃಹ, ಅಮೃತ ಶಿಲೆಯ ಧ್ಯಾನ ಮಂಟಪ, ಹದಿನಾರು ಶರಣರ ಮಂಟಪ–ಮೂರ್ತಿಗಳು, ನಿತ್ಯ ದಾಸೋಹ ನಮ್ಮನ್ನು ಸಂಭ್ರಾಂತರನ್ನಾಗಿ ಮಾಡಿ ಹನ್ನೆರಡನೆಯ ಶತಮಾನಕ್ಕೆ ಕೊಂಡೊಯ್ಯುತ್ತದೆ. ವಿವಿಧ ರಾಜ್ಯಗಳ, ಕರ್ನಾಟಕದ ಎಲ್ಲ ಜಿಲ್ಲೆಗಳ ದಾನಿಗಳ ನೆರವಿನಿಂದ ಇವೆಲ್ಲ ಮಾಡಲಾಗಿದೆಯಾದರೂ, ಇದೆಲ್ಲ ಕಾರ್ಯದ ಕೇಂದ್ರ ಶಕ್ತಿ **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ** ಯವರು ಎಂಬುದು ಸುಸ್ಪಷ್ಟ. ಪೂಜ್ಯರ ಯೋಜನೆಗಳು ಇನ್ನು ಬಹಳಷ್ಟಿವೆ. ಅವರ ಸತ್‌ಸಂಕಲ್ಪವು ಪೂರ್ಣವಾಗಿ ಸಿದ್ಧಿಯಾಗಲಿ ಎಂದು ಹಾರೈಸೋಣ. 48 ವರ್ಷಗಳನ್ನು ಸಾರ್ಥಕವಾಗಿ ಪೂರೈಸಿ 49ಕ್ಕೆ ಇದೇ ಮಾರ್ಚ್ 13ರಂದು ಪಾದಾರ್ಪಣ ಮಾಡುತ್ತಿರುವ ಅವರಿಗೆ ಪರಮಾತ್ಮನು ಮತ್ತು ವಿಶ್ವಗುರು ಬಸವಣ್ಣನವರು ಆಯುರಾರೋಗ್ಯಭಾಗ್ಯ ಸಕಲ ಸಂಪತ್ತನ್ನು ಅನುಗ್ರಹಿಸಲೆಂದು ಪ್ರಾರ್ಥಿಸೋಣ. ★ ★

[ಈ ಲೇಖನದ ವಿವರಗಳನ್ನು ಸಂಕ್ಷಿಪ್ತಗೊಳಿಸಿ ದಿ–12–3–94 ರಂದು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕವು ಪ್ರಕಟಪಡಿಸಿದ್ದಿತು, ಇದಕ್ಕಾಗಿ ಧನ್ಯವಾದಗಳು]

ಡಾ॥ ನಿತೀನ ಚಂದ್ರ ಹತ್ತೀಕಾಳ
ಗೌರವಾಧ್ಯಕ್ಷರು,
ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳ
ಬಾಪೂಜಿ ಎಕ್ಸರೇ ಯುನಿಟ್, ಗಾಂಧಿಚೌಕ, ಧಾರವಾಡ.

ಬಸವ (ಲಿಂಗಾಯತ) ಧರ್ಮದ ಆರು ಸೂತ್ರಗಳು

1. **ಧರ್ಮಗುರು** –ವಿಶ್ವಗುರು **ಬಸವಣ್ಣನವರು.**
2. **ಧರ್ಮ ಸಂಹಿತೆ** –ಸಮಾನತೆ ಸಾರುವ **ವಚನ ಸಾಹಿತ್ಯ.**
3. **ಧರ್ಮ ಲಾಂಛನ** –ವಿಶ್ವಾತ್ಮನ ಕುರುಹಾದ **ಇಷ್ಟಲಿಂಗ.**
4. **ಧರ್ಮ ಕ್ಷೇತ್ರ** –ಬಸವಣ್ಣನವರ ಐಕ್ಯಕ್ಷೇತ್ರ **ಕೂಡಲಸಂಗಮ.**
5. **ಧರ್ಮ ಧ್ವಜ** –ಷಟ್ಕೋನ ಸಹಿತ **ಬಸವ ಧ್ವಜ.**
6. **ಧರ್ಮದ ಧ್ಯೇಯ** –ಜಾತಿ ವರ್ಣವರ್ಗರಹಿತ, ಧರ್ಮ ಸಹಿತ **ಕಲ್ಯಾಣ ರಾಜ್ಯ ನಿರ್ಮಾಣ.**

[16 ನೇ ಪುಟದಿಂದ ಮುಂದುವರಿದಿದೆ]

ವಿಶ್ವಗುರು ಬಸವಣ್ಣನ ಅಚ್ಚು ಮೆಚ್ಚಿನ ಚೊಚ್ಚಿಲ ಪುತ್ರರೇ :

ವಿಶ್ವಗುರು ಬಸವಣ್ಣನವರಿಗೆ ಜನ್ಮ ಕೊಟ್ಟ ಇತಿಹಾಸ ಪ್ರಸಿದ್ಧ ವಿಜಾಪುರ ಜಿಲ್ಲೆಯಲ್ಲಿ ಜನಿಸಿ ಮೂಢನಂಬಿಕೆ ಕಂದಾಚಾರಗಳಿಂದ ತುಂಬಿದ ಸಮಾಜದ ಬಗ್ಗೆ ಜಿಗುಪ್ಸೆ ಹೊಂದಿ ದೇವರಿಲ್ಲವೆಂದು ವಾದಿಸುತ್ತಿದ್ದಾಗ ಕಾಲೇಜಿನಲ್ಲಿ ತತ್ವಜ್ಞಾನ ಓದಿ ಮಾನಸಾಂತರ ಹೊಂದಿ ಸಾಧನೆ ಗೈಯತೊಡಗಿದಾಗ ತನ್ನ ಕರುಣೆಯನ್ನು ಹರಿಸಿ ನಿಮ್ಮನ್ನು ಆಯ್ಕೆಮಾಡಿಕೊಂಡ ಗುರು ಬಸವ ತಂದೆ ಹುಟ್ಟಿದ ನಾಡಿನಲ್ಲಿ ತಾವು ಹುಟ್ಟಿದ್ದು ವೈಶಿಷ್ಟ್ಯಪೂರ್ಣವಾಗಿದೆ.

ವಿಶ್ವಧರ್ಮ ಪ್ರವಚನಕಾರರೇ :

ತಮ್ಮ ಪ್ರವಚನದಲ್ಲಿ ಸರ್ವಧರ್ಮಗಳ ಸಾರವನ್ನು ಹೇಳುತ್ತಾ ಬಸವ, ಬುದ್ಧ, ಅಂಬೇಡಕರ, ಮಹಾವೀರ, ರಾಮಕೃಷ್ಣ, ಅರವಿಂದ, ರಾಮಾನುಜ ಎಲ್ಲ ಮಹಾತ್ಮರ ಸಂದೇಶಗಳನ್ನು ತಿಳಿಸುತ್ತಾ ಬಸವಣ್ಣನ ಘನವಾದ ವ್ಯಕ್ತಿತ್ವ ಎತ್ತಿ ತೋರಿಸಿದ್ದೀರಿ; ಜೈನ, ಭೌದ್ಧ, ವೈದಿಕ ಧರ್ಮಗಳ ಬಗೆಗೆ ಸುಂದರವಾಗಿ ವಿಷದಿಸುತ್ತಾ ಎಲ್ಲರನ್ನೂ ಆಕರ್ಷಿಸಿ, ಪುರಾಣ ಪ್ರವಚನ ಭಾಷಣಗಳೆಂದರೆ ಬೇಸರಗೊಳ್ಳುವ ಜನ ಅಚ್ಚರಿಗೊಳ್ಳುವಂತೆ ಮಾಡಿ ಪ್ರವಚನ ಕೇಳುವ ಗೀಳು ಹಿಡಿಸಿದ್ದೀರಿ.

ಉತ್ತುಂಗ ಸಾಹಿತಿಗಳೇ :

ಈ ಮೊದಲು ಎಷ್ಟೇ ಧಾರ್ಮಿಕ ಆಧ್ಯಾತ್ಮಿಕ ಸಾಹಿತ್ಯಗಳಿದ್ದರೂ ವಚನದ ವಿಶಾಲವಾದ ಅರ್ಥ ತಿಳಿಸುವ ಸಾಹಿತ್ಯ ವಿರಲಿಲ್ಲ. ನೀವು ತುಂಬಾ ಸರಳವಾಗಿ ವಿಶಾಲ ಅರ್ಥ–ವಚನಗಳಿಗೆ ವ್ಯಾಖ್ಯೆಗಳನ್ನು ಬರೆದ ಪುಸ್ತಕಗಳು ಪಂಡಿತರಿಂದ ಪಾಮರರವರೆಗೂ ಮಾರ್ಗದರ್ಶನ ಮಾಡುವ ಕೃತಿಗಳಾಗಿವೆ. "ಅಕ್ಕನಪ್ರವಚನ" ಪುಸ್ತಕ ಪ್ರವಚನಕಾರರಿಗೆ ಮಾರ್ಗದರ್ಶನ ಮಾಡುವಂಥ ದಾರಿ ದೀಪವಾಗಿದೆ.

ಕ್ರಾಂತಿಕಾರಕ ಧರ್ಮ ಪ್ರಸಾರಕರೇ :

ನಾಸ್ತಿಕರಿಗೂ ಮತ್ತು ಧಾರ್ಮಿಕ ಸಭೆ, ಸ್ವಾಮಿಗಳಿಂದ ದೂರವಿರುವ ವಿಚಾರ ಶೀಲ ಬುದ್ಧಿ ಜೀವಿಗಳಿಗೂ ಕ್ರಾಂತಿಕಾರಕ ವಿಚಾರಗಳನ್ನು ಬೋಧಿಸಿ ಧಾರ್ಮಿಕ ಆಸಕ್ತಿಯನ್ನು ಹುಟ್ಟಿಸಿದ್ದೀರಿ.

ಸ್ತ್ರೀ ಜಗದ್ಗುರು ಪೀಠ ಸಂಸ್ಥಾಪಕರೇ :

ಸ್ತ್ರೀಯು ಧಾರ್ಮಿಕ ಸಂಸ್ಕಾರಕ್ಕೆ ಅರ್ಹಳಲ್ಲ ; ಶೂದ್ರಳು ಎಂದು ಸಂಪ್ರದಾಯ ಜಡರು ಶೋಷಿಸುವ ಕಾಲದಲ್ಲಿ ಗುರು ಬಸವಣ್ಣನವರು ಸ್ತ್ರೀಗೆ ಕೊಟ್ಟ ಧಾರ್ಮಿಕ ಸ್ವಾತಂತ್ರ್ಯತೆಯನ್ನು ಮತ್ತೆ 20 ನೇ ಶತಮಾನದಲ್ಲಿ ಧಾರವಾಡದಲ್ಲಿ ಸ್ತ್ರೀ ಜಗದ್ಗುರು ಪೀಠ ಸ್ಥಾಪಿಸಿ ಪೂಜ್ಯ ಮಾತಾಜಿಯವರಂಥ ಅರ್ಹವ್ಯಕ್ತಿಗಳನ್ನು ಅಧಿಕಾರಿಗಳನ್ನಾಗಿ ಮಾಡುವದರ ಮೂಲಕ ಸಮಾನತೆಯನ್ನು ಎತ್ತಿಹಿಡಿದಿದ್ದೀರಿ.

ರಾಷ್ಟ್ರೀಯ ಬಸವ ದಳಗಳ ಯೋಜಕರೇ :

ಪ್ರವಚನ ಮುಗಿದ ನಂತರವೂ ಕೇಳಿದ ತತ್ವಗಳನ್ನು ತಾವು ಪ್ರಚಾರ ಮಾಡುತ್ತಾ ಸಮಾಜ ಸಂಘಟನೆ ಮಾಡಿಕೊಂಡು ಬಸವ ಧರ್ಮಪೀಠದ ಮಾರ್ಗದರ್ಶನದಲ್ಲಿ ಸಾಮಾ-

–ಜಿಕ–ಧಾರ್ಮಿಕ, ಆಧ್ಯಾತ್ಮಿಕ ಕಾರ್ಯಗೈಯಲು ಬಸವ ದಳಗಳನ್ನು ಸ್ಥಾಪಿಸಿ ಬಲಗೊಳಿಸಿದ್ದೀರಿ. ಈ ರಾಷ್ಟ್ರೀಯ ಬಸವ ದಳಗಳು ಬಸವ ತತ್ವ ವಿರೋಧಿ ಚಟುವಟಿಕೆಗಳನ್ನು ಖಂಡಿಸುತ್ತಾ ಅದ್ಭುತವಾಗಿ ಕಾರ್ಯ ಮಾಡುತ್ತಿರುವುದು ಸ್ತುತ್ಯಾರ್ಹವಾಗಿದೆ. ಅದರಂತೆ ನಾವೂ ತತ್ವ ಪ್ರಚಾರ ಮಾಡುತ್ತಾ ರಾಷ್ಟ್ರೀಯ ಬಸವ ದಳ ಬೆಳೆಸುವ ಸಂಕಲ್ಪ ಮಾಡುತ್ತೇವೆ.

"ಬಸವ ಧರ್ಮಪೀಠ" ಸ್ಥಾಪಕರೇ–ಶರಣ ಮೇಳದ ಯೋಜಕರೇ :

ಯಾವುದೇ ಜಾತಿ ಭೇದವಿಲ್ಲದೆ ಆಸಕ್ತಿ ಇರುವ ಎಲ್ಲರಿಗೂ ಧರ್ಮ ಪ್ರಚಾರದ ತರಬೇತಿಗೊಳಿಸಿ ಭಾಷಣ, ಪ್ರವಚನ, ಸಂಗೀತ ಮುಂತಾದ ಎಲ್ಲ ಮಾಧ್ಯಮಗಳಿಂದ ಜಗತ್ತಿನಾದ್ಯಂತ ಬಸವ ತತ್ವ ಪ್ರಚಾರ ಮಾಡಬೇಕೆಂಬ–ಘನವಾದ ಗುರಿಯನ್ನು ಹೊಂದಿ "ಬಸವ ಧರ್ಮ ಪೀಠ" ಸ್ಥಾಪಿಸಿದ್ದೀರಿ. ಬೇರೆ ಬೇರೆ ಧರ್ಮದವರಿಗೆ ಅದರದೇ ಧರ್ಮಗುರು, ಧರ್ಮಕ್ಷೇತ್ರವಿರುವಂತೆ ಲಿಂಗವಂತರಿಗೆ ಶ್ರೀ ಗುರು ಬಸವಣ್ಣನವರೇ ಧರ್ಮಗುರು, ಕೂಡಲ ಸಂಗಮವೇ ಧರ್ಮಕ್ಷೇತ್ರವೆಂದು ಪರಿಗಣಿಸಿ ವರ್ಷಕ್ಕೊಮ್ಮೆ ಎಲ್ಲರೂ ಒಂದೆಡೆ ಕೂಡಿ ಧರ್ಮಚಿಂತನಗೋಷ್ಠಿ ಮಾಡಬೇಕೆಂದು ಶರಣ ಮೇಳವನ್ನು ರೂಪಿಸಿ ಯಶಸ್ವಿಯಾಗಿದ್ದೀರಿ.

ಬಸವ ಧರ್ಮದ ಮಹಾಜಗದ್ಗುರು ಪೀಠದ ಪೀಠಾಧೀಶರೇ :

ಯಾವುದೇ ಜಾತಿ ಮತದ ಭೇದವಿಲ್ಲದೆ ಅರ್ಹತೆ ಇದ್ದವರು ಯಾರಾದರು ಈ ಪೀಠವನ್ನೇರಬಹುದೆಂಬ ನಿಯಮದಿಂದ ಪೂಜ್ಯ ಮಾತಾಜಿಯವರ ಯೋಜನೆಯಂತೆ ಬಸವ ಭಕ್ತರೆಲ್ಲರ ಸಹಾಯ ಸಹಕಾರದಿಂದ ಸ್ಥಾಪಿಸಿದ ಈ ಮಹಾಜಗದ್ಗುರು ಪೀಠಕ್ಕೆ ತಾವೇ ಪ್ರಪ್ರಥಮ ಮಾರ್ಗದರ್ಶನ ಮಾಡುವಂತೆ ಅಧಿಕಾರಿಗಳಾಗಿರುವದು ಜಾತಿ ಪರಂಪರೆ ರಕ್ತ ಪರಂಪರೆಯ ಮಠಾಧಿಕಾರಿಗಳಿಗೆಲ್ಲ ಆದರ್ಶಪ್ರಾಯವಾಗಿದೆ. ಬಣ್ಣಿಸಿದಷ್ಟೂ ತಮ್ಮ ವ್ಯಕ್ತಿತ್ವ, ಸಾಧನೆ ಅಪೂರ್ವ. ಇಂಥ ತಮಗೆ ಸೃಷ್ಟಿಕರ್ತ ಪರಮಾತ್ಮನು ಮಂತ್ರಪುರುಷ ಬಸವಣ್ಣನವರು-ಆಯುರಾರೋಗ್ಯ-ಭಾಗ್ಯ ಸಕಲ ಸಂಪತ್ತನ್ನು ಕೊಡಲೆಂದು ಹಾರೈಸಿ ಈ ಬಿನ್ನವತ್ತಳೆಯನ್ನು ತಮ್ಮ ಕರಕಮಲಕ್ಕೆ ಅರ್ಪಿಸುತ್ತಿದ್ದೇವೆ.

—:ಅರ್ಪಿಸಿದವರು:—
ಶರಣ ಬಿ. ವಿ. ಕಟ್ಟಿ
ನಿವೃತ್ತ ಡಿವಿಜನಲ್ ಕಮಿಶನರ್
ಬೆಳಗಾವಿ

ಬೆಳಗಾವಿ ನಗರದ ಸಮಸ್ತ
ನಾಗರಿಕರ ಪರವಾಗಿ
ದಿ. 22–3–1994

(8 ನೇ ಪುಟದಿಂದ ಮುಂದುವರಿದದ್ದು)

ತ್ತಿದ್ದಾರೆ. ಆದರೆ ನಿಮ್ಮ ಗುರುಗಳು ಮಾತ್ರ ಪಟ ತೊಟ್ಟು ಹೊರಿಸಿಕೊಳ್ಳುತ್ತಿದ್ದಾರೆ. ಡಾ॥ ನರಸಿಂಹಯ್ಯನವರಂಥವರು ನರವಾಹನ ಜಗದ್ಗುರುಗಳು ಎಂದು ಲೇಖನ ಬರೆದರೂ ಇವರೇನೂ ಆತ್ಮಾವಲೋಕನ ಮಾಡಿಕೊಳ್ಳಲಿಲ್ಲ.

ಗದುಗಿನ ಸ್ವಾಮೀಜಿಯವರು ಪಟ್ಟಾಧಿಕಾರ ವಹಿಸಿಕೊಂಡಾಗ ಅಡ್ಡಪಲ್ಲಕ್ಕಿ ಹತ್ತಿರಬಹುದು. ಆಗಿನ ಚಿಂತನ ಶಕ್ತಿ ಅಷ್ಟೇ ಇತ್ತು. ಈಗ ಸ್ವತಂತ್ರ ವಿಚಾರವಾದಿಗಳಾಗಿ ಇದು ಸಲ್ಲದ ಆಚರಣೆ ಎಂದು ಚಿಂತನೆ ಮಾಡಿ, ಬದಲಾವಣೆ ಹೊಂದಿ ಇನ್ನಿತರ ಸಂಪ್ರದಾಯ ಮಠಾಧಿಕಾರಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಲಿಂಗವಂತ ಧರ್ಮವು ಕಾಲಾನಂತರ ಶೈಥಿಲ್ಯಕ್ಕೆ ಒಳಗಾಯಿತು. ವಿರಕ್ತ ಸಂಪ್ರದಾಯದವರು ಶೈವಾಚರಣೆಗಳನ್ನು ಸೇರಿಸಿ ಬಸವ(ಲಿಂಗವಂತ) ಧರ್ಮವನ್ನು ತೆಳುಗೊಳಿಸಿದರು (dilute), ಪಂಚಾಚಾರ್ಯರು ವೈದಿಕಾಚರಣೆಗಳನ್ನು ಈ ಧರ್ಮ–ಸಮಾಜಗಳಲ್ಲಿ ತೂರಿಸಿ ವಿಷಯುಕ್ತ (pollute) ಮಾಡಿದರು. ಚಿಂತನೆ ಮಾಡಿ, ಇಂಥ ಆಗಂತುಕ ಆಚರಣೆಗಳನ್ನು ಹೊರಹಾಕಿ ವ್ಯಕ್ತಿ ತಾನೂ ಶುದ್ಧಿಗೊಂಡು, ಸಮಾಜ–ಧರ್ಮಗಳನ್ನು ಶುದ್ಧಿಗೊಳಿಸಿದರೆ ತಪ್ಪೇನು ?

ಮೇನೆ, ಪಲ್ಲಕ್ಕಿ, ಅಡ್ಡಪಲ್ಲಕ್ಕಿ

ಸ್ವಾಮಿಗಳು ಮೊದಲು ಭಕ್ತರ ಮನೆಗಳಿಗೆ ಮೇನೆಯಲ್ಲಿ ಹೋಗುತ್ತಿದ್ದುದನ್ನು ಸೇವಾ ಸಂಘದವರು ನೆನಪಿಸಿದ್ದಾರೆ. ಹಿಂದಿನ ಸಾರಿಗೆ ವ್ಯವಸ್ಥೆ ಎಂದರೆ, ಕಾಲು ನಡಿಗೆ, ಎತ್ತಿನ ಬಂಡಿ, ಎತ್ತಿನ ಸವಾರಿ, ಕುದುರೆ ಸವಾರಿ. ನಡೆಯಲು ಆಗದಿದ್ದಾಗ, ಕುದುರೆ ಸವಾರಿ ಬರದೇ ಇದ್ದಾಗ ದೂರದ ದಾರಿಯನ್ನು ಮೇನೆಯಲ್ಲಿ ಕುಳಿತು ಕ್ರಮಿಸುತ್ತಿದ್ದರು. ಕಕ್ಕೇರಿಯಲ್ಲಿರುವ ಶಿಲಾ ಶಾಸನದಲ್ಲಿ ಗಾಯಾಳುವಾಗಿದ್ದ ಚನ್ನಬಸವಣ್ಣನನ್ನು ಶರಣರು ಮೇನೆಯಲ್ಲಿ ಒಯ್ಯುತ್ತಿರುವ ಚಿತ್ರವಿದೆ. ಇಂದಿಗೂ ಬದರಿ-ಕೇದಾರ-ಅಮರನಾಥ ಇಂಥಲ್ಲಿ ಮೇನೆಯಲ್ಲಿ ಕೂರಿಸಿಕೊಂಡು ಜನರನ್ನು ಒಯ್ಯಲಾಗುವುದು. ಅದು ಸಾರಿಗೆ ವಿಧಾನವೇ ವಿನಾ ಆಡಂಬರ ಪ್ರದರ್ಶನವಾಗಿರಲಿಲ್ಲ.

ಜನರು ಗುರುಗಳಿಗೆ ಭಕ್ತಿ–ಗೌರವ ತೋರಿಸಬೇಕೆನ್ನುವರು; ಇದಕ್ಕಾಗಿ ಮೆರವಣಿಗೆ ಇದೆ. ಕಾರು, ಜೀಪ್, ಟ್ರಾಕ್ಟರ್, ಲಾರಿ ಲಭ್ಯವಿರುತ್ತವೆ. ಅಲಂಕೃತವಾಹನಗಳಲ್ಲಿ ಹೋಗಲು ಅನುಕೂಲವಿದೆ. ಪಲ್ಲಕ್ಕಿ–ಅಡ್ಡಪಲ್ಲಕ್ಕಿ ವೈಭವದ ಸಂಕೇತ. ಹೋಗಲೇಬೇಕಾದ ಒಂದು ಕಾರ್ಯಕ್ರಮವಿದೆ ಎಂದುಕೊಳ್ಳುವಾ. ಆಗ ಮೇನೆಯಲ್ಲಿ ಕುಳಿತು ಮಠಾಧೀಶರು ಹೋಗುತ್ತಿದ್ದರು. ಈಗ ಹೋಗಲು ಕಾರುಗಳಿವೆ. ಪಂಚಾಚಾರ್ಯರು ಯಾವುದಾದರೂ ಅನಿವಾರ್ಯ ಕೆಲಸಕ್ಕೆ ಹೋಗದೆ ತಮ್ಮ ವೈಭವ ಪ್ರದರ್ಶನಕ್ಕೆಂದೇ ಅಡ್ಡಪಲ್ಲಕ್ಕಿಯಲ್ಲಿ ಹೋಗುತ್ತಾರೆ. ಭಯಂಕರ ಭಾರದ ಪಲ್ಲಕ್ಕಿಗಳನ್ನು ಕೂಲಿಜನರನ್ನು ಕರೆಸಿ ಹೊರಿಸುತ್ತಾರೆ. ಪಲ್ಲಕ್ಕಿ ಉತ್ಸವ ಮಾಡುವ ಸೇವಾ ಸಂಘಗಳ ಸದಸ್ಯರೇನೂ ಹೊರುವುದಿಲ್ಲ. ಅವರು ಕೂಲಿಕೊಟ್ಟರೆ ಹೊರುವವರನ್ನು ಕರೆಸುತ್ತಾರೆ. ಇದೇನು ಭಕ್ತಿಯೆ ? ಮುಸಲ್ಮಾನರಲ್ಲಿ, ಶವಕ್ಕೆ ಎಲ್ಲರೂ ಭಕ್ತಿಯಿಂದ ಹೆಗಲು ಕೊಡುತ್ತಾರೆ. ಲಿಂಗವಂತರಲ್ಲಿ ಸಹ ಲಿಂಗೈಕ್ಯರನ್ನು ಒಯ್ಯುವ ವಿಮಾನಕ್ಕೆ ಭಕ್ತಿಯಿಂದ ಹೆಗಲು

ಕೊಡುತ್ತಾರೆ. ಆ ಭಕ್ತಿ ಸಹ ಈ ಜೀವಂತ ಮೂರ್ತಿಗಳನ್ನು ಒಯ್ಯುವ ಕೂಲಿಕಾರರಲ್ಲಿ, ಹೊರಿಸುವ ಸೇವಾ ಸಂಘಗಳವರಲ್ಲಿ ಇರದು ಮತ್ತು ಅಡ್ಡಪಲ್ಲಕ್ಕಿ ಉತ್ಸವವಂತೂ ಲಿಂಗಾಯತೇತರ ಸಮಾಜದಲ್ಲಿ ಗೇಲಿಗೆ ಪಾತ್ರವಾಗಿ, ಪ್ರಗತಿಪರ ಲಿಂಗವಂತರು ತಲೆ-ತಗ್ಗಿಸಬೇಕಾದ ವಾತಾವರಣ ನಿರ್ಮಿಸಿದೆ. ಆದ್ದರಿಂದಲೇ "ಪಂಚಪೀಠಾಧೀಶರು ನಮ್ಮ ಗುರುಗಳಲ್ಲ. ಇದು ಲಿಂಗವಂತ ಧರ್ಮದ ಆಚರಣೆಯಲ್ಲ" ಎಂದು ಸ್ಪಷ್ಟವಾಗಿ ಹೇಳುವ ವಾತಾವರಣ ರೂಪಿಸಬೇಕಾಗಿದೆ. ಕೆಲವೇ ಕೆಲವು ಮೂಢಭಕ್ತರ ಆವೇಶದ ಭಕ್ತಿಗಾಗಿ ಇಡೀ ಸಮಾಜವು ತಲೆ ತಗ್ಗಿಸುವಂತೆ ಏಕೆ ಆಗಬೇಕು ?

ಅಡ್ಡಪಲ್ಲಕ್ಕಿ–ಭೂಕಂಪ

"ಲಾತೂರಿನಲ್ಲಿ ಭೂಕಂಪವಾದುದು ಬಹುಶಃ ಅಡ್ಡಪಲ್ಲಕ್ಕಿ ಹೊತ್ತುದರಿಂದಲೇ ಇರಬೇಕು" ಎಂದು ತೋಂಟದ ಶ್ರೀಗಳ ವ್ಯಂಗ್ಯದ ಧ್ವನಿಯಲ್ಲಿ ಹೇಳಿರುವುದನ್ನು ಈ ಲೇಖನದ ಬರಹಗಾರರು ತೀವ್ರವಾಗಿ ತೆಗೆದುಕೊಂಡು ವಿಶ್ಲೇಷಣೆ ಮಾಡುವ ಮೌಢ್ಯತೆ ತೋರಿದ್ದಾರೆ. "ಮಾನವ ಧರ್ಮಕ್ಕೆ ಜಯವಾಗಲಿ" ಎಂದು, (ಮನುಷ್ಯರ ಹೆಗ-ಲೇರಿ ಸಾಗುವ), (ಹೊರುವ) ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಹೇಳಿಕೆಗಳನ್ನು ನೀಡಿ ಈ ಆಚಾರ್ಯರು ಮತ್ತವರ ಶಿಷ್ಯರು ಉಚ್ಚರಿಸುತ್ತಿರುತ್ತಾರೆ. ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ" ಎಂದು ದಾಸರು ಹೇಳಿದಂತೆ ಈ ಭಾರತ ಭೂಮಿಯಲ್ಲಿ ಯಾರು ಏನೇ ಮಾಡುವುದು ವಿಶ್ವಶಾಂತಿಗಾಗಿಯೆ ? ! ಯಜ್ಞ ಮಾಡಿ ಕೋಟಿಗಟ್ಟಳೆ ತುಪ್ಪ–ಪೀತಾಂಬರ ಸುಡಲಿ, ಲೀಟರ್‌ಗಟ್ಟಳೆ ಹಾಲು ಗಂಗಾ ನದಿಗೆ ಸುರಿಯಲಿ, ಬೆಲೆಬಾಳುವ ಕುದುರೆಯನ್ನು ಅಶ್ವಮೇಧಯಾಗ ಮಾಡಿ ಕೊಲ್ಲಲಿ, ಹನುಮಂತನಿಗೆ ಬೆಣ್ಣೆ ಅಲಂಕಾರ ಮಾಡಲಿ, ದೇವತೆಗಳಿಗೆ ಕೋಟಿಗಟ್ಟಳೆ ಬೆಲೆ–ಬಾಳುವ ಕಿರೀಟ, ತೊಟ್ಟಿಲು, ರಥ ಮಾಡಿಸಲಿ, ಆಚಾರ್ಯರುಗಳನ್ನು ಅಡ್ಡಪಲ್ಲಕ್ಕಿಯಲ್ಲಿ ಹೊರಲಿ–ಎಲ್ಲವೂ ವಿಶ್ವಶಾಂತಿಗಾಗಿ, ಮಾನವ ಕುಲದ ಹಿತಕ್ಕಾಗಿಯೆ ! ? ಎಲ್ಲ ಮೌಲಿಕ ಪದಗಳೂ ಸವೆದು ಹೋಗಿ ಈ ದೇಶದಲ್ಲಿ ಕೊಳೆತು ನಾರುತ್ತಿವೆ.

ಇವಾವೂ ಇಲ್ಲದ ಜಪಾನ್–ಅಮೆರಿಕಾ–ಫ್ರಾನ್ಸ್‌ದಂತಹ ದೇಶಗಳು ಸಮೃದ್ಧವಾಗಿ, ಸುಭಿಕ್ಷವಾಗಿವೆ. ಅಲ್ಲಿ ಯಾರೂ ಹಸಿವೆಯಿಂದ ಸಾಯರು. ಕೋಟಿ ಕೋಟಿ ದೇವತೆಗಳನ್ನು, ಸಾಧು–ಸ್ವಾಮಿಗಳನ್ನು ಹೊಂದಿದ ದೇಶ ಹಲವಾರು ಸಂಕಟಗಳಲ್ಲಿ ನರಳುತ್ತಿದೆ. ಈ ದೃಷ್ಟಿಯಿಂದ ವ್ಯಂಗ್ಯವಾಗಿ ಸ್ವಾಮಿಗಳು ಹೇಳಿರಬಹುದೇ ವಿನಾ ಭೂಕಂಪಕ್ಕೆ ಅಡ್ಡಪಲ್ಲಕ್ಕಿ ಕಾರಣವೆಂದೇ ಹೇಳುವಷ್ಟು ಅವರು ಅಪ್ರಬುದ್ಧರೇನಲ್ಲ.

ಧಾರ್ಮಿಕ ಸ್ವಾತಂತ್ರ್ಯ

ಧಾರ್ಮಿಕ ಸ್ವಾತಂತ್ರ್ಯವಿದೆ ಎಂದು ಬೇರೊಬ್ಬರ ಧಾರ್ಮಿಕ ವಿಧಿ ವಿಧಾನಗಳ ಬಗ್ಗೆ ಟೀಕಿಸಬಾರದು ಎಂದು ಸೇವಾ ಸಂಘದವರು ಬರೆದಿದ್ದಾರೆ.

'ಬೇರೊಬ್ಬರೇ ಆಗಿದ್ದರೆ' ಟೀಕಿಸುವುದನ್ನು ಬಸವ ಭಕ್ತರು ಬಿಟ್ಟು ಬಿಡಬಹುದು. ಲಿಂಗವಂತರಾಗಿ ಹೀಗೆ ಮಾಡುತ್ತಿರುವುದರಿಂದಲೇ ಟೀಕಿಸಬೇಕಾಗಿದೆ. ಸತಿ ಪದ್ಧತಿ, ಬೆತ್ತಲೆ ಸೇವೆ, ಅಸ್ಪೃಶ್ಯತೆ ಆಚರಣೆ ಯಜ್ಞ–ಪ್ರಾಣಿಬಲಿ ಮುಂತಾದುವು ವೈದಿಕ ಧರ್ಮದ ಸಂವಿಧಾನಕ್ಕೆ ಹೊರತಾದ ಆಚರಣೆಗಳಲ್ಲ. ಹಾಗೆಂದು, ಅವರವರ ಸಂಪ್ರದಾಯಗಳ ಆಚರಣೆ ಅವರದ್ದು ಎಂದು ಸುಮ್ಮನೆ ಕುಳಿತರೆ ಆಗ ಸುಧಾರಣೆ ಎಂದಾದರೂ ಸಾಧ್ಯವೇ ? ಮಾನವ ಸಮಾಜಕ್ಕೆ ಕಳಂಕ ಪ್ರಾಯವಾದ, ಮಾನವೀ–ಯತೆಯನ್ನು ಕಡೆಗಣಿಸುವ ಯಾವುದೇ ಆಚರಣೆಯನ್ನು ಪ್ರಗತಿಪರ ದೃಷ್ಟಿಯಿಂದ ಯಾರಾದರೂ ಖಂಡಿಸಬಹುದು. ಅದೇ ರೀತಿ ಅಡ್ಡಪಲ್ಲಕ್ಕಿ ಮತ್ತು ಪಂಚಾ–ಚಾರ್ಯರ ವೈಭವ ಪ್ರದರ್ಶನ. ಚಿಮ್ಮನೂರು ಜ್ಯುಯೆಲ್ ಕಂಪೆನಿಯವರು ಇನ್ನಿತರ ಬಂಗಾರದ ಅಂಗಡಿಯವರು ತಮ್ಮ ಆಭರಣಗಳನ್ನು ಪ್ರದರ್ಶನಕ್ಕೆ ಇಡುತ್ತಾರೆ. ಅವರನ್ನು ಯಾರಾದರೂ ಟೀಕಿಸಲು ಹೋಗುವರೆ ? ಧರ್ಮದ ಸೋಗಿನಲ್ಲಿ ಇಂಥ ವೈಭವ ಪ್ರದರ್ಶನ ಮಾಡುವವರು ಮಾತ್ರ ವಿಮರ್ಶೆಗೆ ಪಾತ್ರರಾಗುವರಲ್ಲವೆ ?

ಮಠ – ಕ್ರಾಂತಿ

ಗದುಗಿನ ಜಗದ್ಗುರುಗಳ ಕ್ರಾಂತಿಕಾರಿ ವಿಚಾರಗಳನ್ನೂ, ವಿವಾದಾಸ್ಪದ ಮಾತುಗಳೆಂದು ಕರೆದ ಸೇವಾ ಸಂಘದವರು "ಶ್ರೀಗಳಿಗೆ ಕ್ರಾಂತಿಯನ್ನು ಮಾಡಬೇಕೆಂದು ಇಷ್ಟವಿದ್ದರೆ ತೋಂಟದಾರ್ಯ ಮಠಕ್ಕೆ ಬೇರೊಬ್ಬ ಉತ್ತರಾಧಿಕಾರಿಯನ್ನು ಮಾಡಬೇಕು" ಎಂದು ಸೂಚಿಸಿದ್ದಾರೆ. "ಶ್ರೀ ಬಸವಣ್ಣನವರು ಕ್ರಾಂತಿ ಮಾಡಲು ಯಾವುದೇ ಮಠದ ಸ್ವಾಮಿಯಾಗಿದ್ದಿಲ್ಲ." ಎಂದು ಬೇರೆ ಒಗ್ಗರಣೆ ಹಾಕಿದ್ದಾರೆ. ಮಠ ಮತ್ತು ಜಂಗಮದ ಪರಿಕಲ್ಪನೆ (Concept) ಕೊಟ್ಟವರೇ ವಿಶ್ವಗುರು ಬಸವಣ್ಣನವರು. ಕರ್ನಾಟಕದಲ್ಲಿ ಇರುವಷ್ಟು ಮಠಗಳು ಎಲ್ಲೆಲ್ಲೂ ಇಲ್ಲ. ಒಂದು ಕುಗ್ರಾಮದಲ್ಲಿ ಸಹ ಮಠವಿರುತ್ತದೆ. ಚನ್ನಬಸವಣ್ಣನವರ ವಚನ ೩೪೫ ನೋಡಿರಿ. ಮಠಗಳ ವ್ಯವಸ್ಥೆ ಮೂಲಕ ಸಮಾಜ ಪರಿವರ್ತನೆಯ ಕಾರ್ಯ ಧರ್ಮಪಿತರು ಕೈಗೊಂಡರು. ಮಾತ್ರವಲ್ಲದೆ ಇವೆಲ್ಲವನ್ನು ನಿಯಂತ್ರಿಸಲು ಮಾರ್ಗದರ್ಶನ ಮಾಡಲು ಶೂನ್ಯಪೀಠವನ್ನು ಸ್ಥಾಪಿಸಿದರು. ಮಠಗಳು ಅದರ ಮುಖಂಡರಾದ ಸ್ವಾಮಿಗಳು ಸಮಾಜ ಪರಿವರ್ತನೆಯ ಹರಿಕಾರರಾಗಬೇಕು, ಪ್ರಗತಿಪರ ವಿಚಾರದವರಾಗಿರಬೇಕೆಂಬುದೇ ಧರ್ಮಪಿತರ ಆಶಯ (desire) ಮತ್ತು ಆದೇಶ (Commandment) ವಾಗಿದ್ದಿತು.

> ಸಾಧು ಸಾಧೆಲೆ ಬಸವಾ, ಓದು ಕಲಿಯಿತು ಜನವು
> ಹೋದ ಹೋದಲ್ಲಿ ಹೊಸ ಮಾತು ಕೇಳಿದವು ।
> ಮೇದಿನಿಗೆ ಬಂತು ಹೊಸಬೆಳಕು ॥

ಮೇದಿನಿಗೆ ಈ ಹೊಸಬೆಳಕು ತರಲು ಅಂದು ಮಠಗಳನ್ನು ಸಾಧನವಾಗಿ ಬಸವಣ್ಣನವರು ಮಾಡಿದರು.

ಚನ್ನಬಸವಣ್ಣನ ಇನ್ನೊಂದು ವಚನ ಹೀಗಿದೆ :

“ಲೋಕಾದಿ ಲೋಕಂಗಳಿಗೆ
ಪರಮ ಗುರುವಾದನಯ್ಯ ಬಸವಣ್ಣನು
ಜಡರುಗಳ ಮನದ ಕತ್ತಲೆಯ ಕಳೆಯಲೆಂದು
ಕಟ್ಟಿತ್ತು ಕಲ್ಯಾಣದಲ್ಲಿ **ಮಹಾಮಠವು**”

ಬಸವಣ್ಣನವರು ಕಟ್ಟಿದ್ದು ಮನೆಯಲ್ಲ, ಮಹಾಮನೆ; ಕೇವಲ ಮಠವಲ್ಲ ಮಹಾಮಠ. ಚನ್ನಬಸವಣ್ಣ ಹೇಳುವಂತೆ ಮಠವನ್ನು ಕಟ್ಟುವುದೇಕೆ ? “**ಜಡರುಗಳ ಮನದ ಕತ್ತಲೆಯನ್ನು ಕಳೆಯಲು ?**” ಭಕ್ತರ ಮನೆಯಲ್ಲಿ ಬಿನ್ನಹವನ್ನು ಪಟ್ಟಾಗಿ ಹೊಡೆದು, ಅವರ ಹೆಗಲ ಮೇಲೇರಿ ವೈಭವ ಪ್ರದರ್ಶನ ಮಾಡುವುದು ಗುರುವಿನ ಕೆಲಸವಲ್ಲ, ಜಡರುಗಳ ಮನದ ಕತ್ತಲೆ ಕಳೆಯುವುದು ಆತನ ಆದ್ಯ ಕರ್ತವ್ಯ. ಕ್ರಾಂತಿ ಎಂದರೆ ವಿಚಾರ ಪರಿವರ್ತನೆ, ಇದನ್ನು ಮಾಡಬೇಕಾದರೆ ಮಠವನ್ನು ಬಿಡಬೇಕಾಗಿಲ್ಲ, ಅಲ್ಲಿದ್ದೇ ಜನರ ಹೃನ್ಮನಗಳ ಪರಿವರ್ತನೆ ಮಾಡಿ, ಜನರನ್ನು ಬಸವ ಪಥಕ್ಕೆ ಕರೆತರಬೇಕು.

ಹಾಗೆ ನೋಡಿದರೆ ಗದುಗಿನ ಜಗದ್ಗುರುಗಳು ಪೂರ್ತಿಯಾಗಿ ಸಂಪ್ರದಾಯದ ಚೌಕಟ್ಟು ಬಿಡಲಾಗಿಲ್ಲ. ಅವರ ಮಾತಿನಲ್ಲೇ ಹೇಳುವುದಾದರೆ, “ನಾನು ಬಯಲಲ್ಲಿ ನಿಂತು ಹೋರಾಡದೆ ಇನ್ನೂ ಸಂಪ್ರದಾಯದ ಕೋಟೆಯ ಹಿಂದೆ ನಿಂತೇ ಹೋರಾಡುತ್ತಿದ್ದೇನೆ.” [20–12–93] ಧರ್ಮಗುರುವಿನ ಆದೇಶದಂತೆ, ನಡೆಯಬೇಕಾದರೆ ಇನ್ನೂ ಪ್ರಗತಿಪರ ಚಿಂತನೆ ಅಗತ್ಯವಿದೆ. ಅವರು ಸೌಮ್ಯವಾದಿಗಳಾಗಿಯೇ ಇದ್ದಾರೆ. ಆದ್ದರಿಂದ ಕ್ರಾಂತಿ ಮಾಡಲು ಅವರು ಪಟ್ಟಾಧಿಕಾರ ತ್ಯಜಿಸಬೇಕಿಲ್ಲ, ಬಸವಾದಿ ಪ್ರಮಥರು ಹಾಕಿಕೊಟ್ಟ ವಚನ ಸಾಹಿತ್ಯ ಸಂವಿಧಾನದಂತೆ ನಡೆಯುವ ತನಕ ಅವರು ಈ ಮೂಢ ಸಂಪ್ರದಾಯವಾದಿಗಳಿಗೆ ಅಂಜುವ ಅಗತ್ಯವಿಲ್ಲ ; ವಿಚಾರ ಶೀಲರೆಲ್ಲರ ಬೆಂಬಲ ಇವರಿಗಿದೆ.

ವೇದೋಪನಿಷತ್ತು ಬೋಧೆ

ಪ್ರಕಟಣೆ ಹೊರಡಿಸಿರುವ ಈ ಪ್ರಭೃತಿಗಳು ತೀರಾ ಬುದ್ಧಿವಂತರಂತೆ ಕಾಣುತ್ತದೆ. “ಬಾಯಿಬಿಟ್ಟರೆ ಬಣ್ಣಗೇಡು, ಅಂಗೈ ತೋರಿಸಿ ಅವಲಕ್ಷಣ ಎನ್ನಿಸಿಕೊಂಡರು.” ಎಂಬ ಕನ್ನಡ ಗಾದೆ ಇವರಿಗೆ ಚೆನ್ನಾಗಿ ಅನ್ವಯಿಸುತ್ತದೆ. “ವೇದಗಳನ್ನು ಓದಿದ್ದೀರಾ, ಆಗಮಗಳನ್ನು ತಿಳಿದಿದ್ದೀರಾ ? ಉಪನಿಷತ್ತುಗಳನ್ನು ನೋಡಿದ್ದೀರಾ ?........” ಎಂದು ಕೇಳಿ ತಮ್ಮ ಅಜ್ಞಾನ ಪ್ರದರ್ಶನ ಮಾಡಿಕೊಂಡಿದ್ದಾರೆ. ಈ ಪ್ರಶ್ನೆಗಳನ್ನು ಶೃಂಗೇರಿ, ಕಂಚಿ ಸ್ವಾಮಿಗಳಿಗೆ, ಉಡುಪಿಯ ಅಷ್ಟ ಮಠದವರಿಗೆ ಕೇಳಿ ಖಚಿತ ಪಡಿಸಿಕೊಳ್ಳಬೇಕೇ ವಿನಾ ಲಿಂಗವಂತ ಸ್ವಾಮಿಗಳಿಗಲ್ಲ, ಅದೂ ವಿರಕ್ತ ಮಠಾಧೀಶರಿಗಲ್ಲ, ಇವರಿಗೆ ಕೇಳಬೇಕಾದ್ದು, “ವಚನ ಸಾಹಿತ್ಯ ಓದಿದ್ದೀರಾ ? ಬೋಧಿಸುತ್ತೀರಾ ? ಎಂದು; ಏಕೆಂದರೆ ಬಸವಾದಿ ಪ್ರಮಥರು ಹೇಳಿದ್ದಾರೆ.

1. “ಆದಿಪುರಾಣ ಅಸುರರಿಗೆ ಮಾರಿ
ವೇದಪುರಾಣ ಹೋತಿಂಗೆ ಮಾರಿ.”

2. ವೇದಂಗಳ ಹಿಂದೆ ಹರಿಯದಿರು ಹರಿಯದಿರು
ಶಾಸ್ತ್ರಂಗಳ ಹಿಂದೆ ಸುಳಿಯದಿರು ಸುಳಿಯದಿರು
ಪುರಾಣಂಗಳ ಹಿಂದೆ ಬಳಲದಿರು ಬಳಲದಿರು
ಆಗಮಂಗಳ ಹಿಂದೆ ತೊಳಲದಿರು ತೊಳಲದಿರು
ಆದಯ್ಯ–207

3. ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮಬಾರದಯ್ಯಾ
ಎಮ್ಮ ವಚನದ ನೂರೆಂಟರ ಅಧ್ಯಯನಕ್ಕೆ
ಶತರುದ್ರೀಯ ಸಮಬಾರದಯ್ಯ
ಎಮ್ಮ ವಚನದ ಸಾಸಿರ ಪಾರಾಯಣಕ್ಕೆ
ಗಾಯತ್ರೀ ಲಕ್ಷಜಪ ಸಮಬಾರದಯ್ಯಾ
ಕಪಿಲ ಸಿದ್ಧಮಲ್ಲಿಕಾರ್ಜುನಾ. (ಸಿ. ವ. 856)

ಅಂದಾಗ ನಾವು ಬಸವಣ್ಣನವರು, ಆದಯ್ಯ, ಸಿದ್ಧರಾಮೇಶ್ವರರಂತಹ ಮಹಾನುಭಾವಿಗಳ ಮಾತು ಕೇಳಬೇಕೋ ಪಂಚಾಚಾರ್ಯ ಸೇವಾ ಸಂಘದವರ ಮಾತು ಕೇಳಬೇಕೊ ? ಇವರು ತಮ್ಮ ಗುರುಗಳಿಗೆ ಹೊಂದಿಕೆಯಾಗುವುದನ್ನೇ ಸೂತ್ರವನ್ನಾಗಿ ಮಾಡಿಕೊಂಡಂತೆ ತೋರುತ್ತದೆ. ದಿನ ನಿತ್ಯದ ಜೀವನ, ಪರಿಸರ, ಸುತ್ತಲಿನ ಆಗುಹೋಗುಗಳಿಂದ ಉದಾಹರಣೆ ಆಯ್ದುಕೊಂಡು ಧರ್ಮವನ್ನು ಜನಮನದ ಆಳಕ್ಕೆ ಇಳಿಸುವ ಕರ್ತವ್ಯ ಗುರುವಿನದು. ಇದನ್ನು ಮಾಡದೆ ಎರಡು, ಐದು ವರ್ಷಕ್ಕೊಮ್ಮೆ ಪಲ್ಲಕ್ಕಿಯಲ್ಲಿ ಬಂದು ವೈಭವದ ಪ್ರದರ್ಶನ ಮಾಡಿ, ಹತ್ತಾರು ಲಕ್ಷರೂಪಾಯಿಗಳನ್ನು ಧಾಂ ಧೂಂ ಮಾಡಿಸಿ ‘ಆಶೀರ್ವಚನ’ ಮಾಡಿ, ಹಾವಿನಂತೆ ಕೈ (ಹೆಡೆ)ಯಾಡಿಸಿ ಆಶೀರ್ವಾದ ಮಾಡಿ ಹೋಗುವ ಪಂಚಾಚಾರ್ಯರದು ಒಂದು ಅನುಕರಣೀಯ ಆದರ್ಶವೆ ? ಲಿಂಗವಂತ ಸ್ವಾಮಿಗಳು (ಗುರು–ವಿರಕ್ತರು ಉಭಯತರೂ) ಸತತವಾಗಿ ಧರ್ಮಬೋಧೆ ಮಾಡದೆ ಇರುವುದರಿಂದಲೇ ಇಂದು ಲಿಂಗವಂತರು ಸ್ವಧರ್ಮವನ್ನು ಮರೆತು ಲಿಂಗವಿರಹಿತವಾದ ಆರೂಢ ಪಂಥ, ಬ್ರಹ್ಮಕುಮಾರಿ, ಸಹಜ ಸಿದ್ಧಿಯೋಗ, ಅವಧೂತ ಮಾರ್ಗ ಮುಂತಾದ ಹತ್ತುಹಲವಕ್ಕೆ ಮೊದಲನೇ ಬಲಿ ಆಗಿರುವುದು ಲಿಂಗವಂತ ಸಮಾಜದ ಅಧಿಕೃತ ಪಾಲಕ–ಪೋಷಕರು ತಾವೆಂದು ಹಕ್ಕುಗಳನ್ನು ಚಲಾಯಿಸುತ್ತ (ಸಂಪ್ರದಾಯ ಮಠ ಅಲ್ಲದವರಿಗೆ ದೀಕ್ಷೆಯನ್ನು ಕೊಡುವ ಹಕ್ಕಿಲ್ಲವೆಂದು ಉಡಾಫೆ ಮಾಡುತ್ತ) ಇರುವ ಗುರು–ವಿರಕ್ತರು ಲಿಂಗವಂತ ಧರ್ಮೀಯರು ಸ್ವಧರ್ಮದಲ್ಲಿ ಶ್ರದ್ಧಾರಹಿತರಾಗಿ ಅನ್ಯ ಮಾರ್ಗಗಳಿಗೆ ಧಾವಿಸುವುದನ್ನಾದರೂ ಇಂದು ಅರ್ಥ ಮಾಡಿಕೊಳ್ಳಬಾರದೆ ? ಬೇಕಾದರೆ ಯಾವುದೇ ಒಂದು ಹೊಸ ಪಂಥದ ತರಗತಿ ಆರಂಭ

ವಾಗಲಿ ಅಲ್ಲಿ ಹೋಗಿ ನೋಡಿರಿ, ಹಾಜರಿ ಲಿಂಗವಂತರದೇ ಜಾಸ್ತಿ. ಇದನ್ನು ಅರಿತು ಅವಲೋಕನ ಮಾಡಿಕೊಳ್ಳುವುದು ಬಿಟ್ಟು ಪಂಚಾಚಾರ್ಯ ಸೇವಾ ಸಂಘದವರು ಭಾಷಣ ಮಾಡದೆ ಆಶೀರ್ವಚನ ಮಾತ್ರ ಮಾಡಬೇಕೆಂದು ಉತ್ತಮ ಕಾರ್ಯ ಮಾಡುತ್ತಿರುವ ಗದುಗಿನ ಶ್ರೀ ಗಳಿಗೆ ಉಪದೇಶ ಮಾಡಹೊರಟಿದ್ದಾರೆ.

ಕೆಲವು ಮಠಾಧೀಶರು ಹತ್ತು ಬೆರಳುಗಳಲ್ಲಿ ಉಂಗುರ, ಜರತಾರಿ ಅರಿವೆ. ಬಂಗಾರದ ಕಿರೀಟ ಧರಿಸಿ ಸಿಂಹಾಸನಾರೂಢರಾಗುತ್ತಾರೆ ಎಂದು ಡಾ॥ ಶ್ರೀ ಸಿದ್ಧಲಿಂಗ ಸ್ವಾಮೀಜಿ ಟೀಕಿಸಿದ್ದರಿಂದ ಪಂಚಾಚಾರ್ಯರ ಪರವಾಗಿ ಕೆರಳಿರುವ ಅವರ ಭಕ್ತವೃಂದ [ಅದಕ್ಕೀ ಒಂದು ಸಂಭಾಷಿತ ಹೇಳುತ್ತದೆ ಸೂರ್ಯನ ಬಿಸಿಲಿಗಿಂತಲೂ ಆದರಿಂದ ಕಾಯ್ದ ಮರಳನ್ನು ತಡೆದುಕೊಳ್ಳುವುದು ಕಷ್ಟ ಎಂದು.] ಬಹಳ ಅದ್ಭುತವಾದ ವಾದವನ್ನು ಮಂಡಿಸಿದ್ದಾರೆ. ಹೀಗೆ ಮಾಡುವವರು ವೀರಶೈವ ಧರ್ಮಸಾಮ್ರಾಜ್ಯದ ಧರ್ಮ ಗುರುಗಳು, **ರಾಜಗುರುಗಳಂತೆ** ಇವರು **ಸನ್ಯಾಸಿಗಳಲ್ಲವಂತೆ** ಅದರಂತೆ ಪಂಚಾಚಾರ್ಯರು ಸಿಂಹಾಸನಾರೂಢರಾಗಿ ರಾಜವೈಭವದಿಂದ ಧರ್ಮಾಧಿಕಾರ. ನಡೆಸುವ ಹಕ್ಕು ಇವರಿಗೇ ಮೀಸಲಂತೆ.

ಇವರಿಗೆ ಈ ಅಧಿಕಾರ ಕೊಟ್ಟವರು ಯಾರೊ ? ಇವರು ಸನ್ಯಾಸಿಗಳಲ್ಲವಾದರೆ ವಿವಾಹವಾಗಬಹುದಾಗಿತ್ತು. ಎಂಥಾ ಹಾಸ್ಯಾಸ್ಪದ ವಾದ ! ಸನ್ಯಾಸಿ ಎಂದರೆ ಸಂಸಾರದಿಂದ ನಿವೃತ್ತಿ ಹೊಂದಿದವನು. ವೈದಿಕ ಧರ್ಮದ ಪ್ರಕ್ರಿಯೆಯಲ್ಲಿ ತ್ಯಾಗಿಯನ್ನು ಸನ್ಯಾಸಿ ಎಂದರೆ ಲಿಂಗವಂತ ಧರ್ಮದಲ್ಲಿ 'ಜಂಗಮ', 'ವಿರಕ್ತ' ಎನ್ನಲಾಗುವುದು. ಜಗತ್ತಿನ ಯಾವುದೇ ಧರ್ಮದ ಗುರುವಿರಲಿ, ಅವನಲ್ಲಿ ಕೆಲವು ಆದರ್ಶಗಳಿರಬೇಕೆಂದು ಧರ್ಮವು ನಿರೀಕ್ಷಿಸುತ್ತದೆ, ನಿಬಂಧನೆಗಳನ್ನು ವಿಧಿಸುತ್ತದೆ. ಇವರು ತಮಗೆ ಬೇಕಾದಂತೆ ಕಾಯ್ದೆಗಳನ್ನು ಮಾಡಿಕೊಂಡು ಶ್ರೀಮಂತ ಹೆಣ್ಣುಮಕ್ಕಳು ನಾಚಿಸುವಂತೆ ಬಂಗಾರ ಹೇರಿಕೊಂಡು ತಮ್ಮ ನಡೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ಆ ಗುರುಗಳಿಗೆ ತಕ್ಕಂತೆ ಈ ಅನುಯಾಯಿಗಳು ನಡೆಯುತ್ತಿದ್ದಾರೆ. ಕಾವಿ-ಸರಳವಾಗಿದ್ದರೂ ಅದಕ್ಕೆ ಅದ್ಭುತ ಬೆಲೆ ಇದೆ. ರತ್ನಹಾರಕ್ಕೆ ಇರದ ಬೆಲೆ-ಗೌರವ ರುದ್ರಾಕ್ಷಿಗಿದೆ ; ಪಟ್ಟೆ ಪೀತಾಂಬರಕ್ಕೆ ಇಲ್ಲದ ಗೌರವ ಕಾವಿಗಿದೆ. ಅದನ್ನು ಬಿಟ್ಟು ಬಗೆ ಬಗೆಯ ಬಣ್ಣದ ಪೀತಾಂಬರ ಧರಿಸಿ ಪಂಚ ಪೀಠಾಧೀಶರು ತ್ಯಾಗಿಗಳನ್ನು, ನಿಜ ಗುರುಗಳನ್ನು ನಾಚಿಸುವಂತೆ ಆಡಂಬರ ಪ್ರದರ್ಶಿಸುವರು, ಆ ರಾಜವೈಭವವೇ ತಮ್ಮ ಸಂಪ್ರದಾಯ ಎನ್ನುವರು. ತ್ಯಾಗ ಸರಳತೆಗಳು ಯೋಗಿಯು ತಾನು ಸ್ವೀಕರಿಸುವ ನೇಮಗಳೇ ವಿನಾ ಆಡಂಬರವೇ ಒಂದು ಸಂಪ್ರದಾಯವಾಗದು. ರಾಜತ್ವ ಮತ್ತು ಗುರುತ್ವಗಳಲ್ಲಿ ಸಾಕಷ್ಟು ಅಂತರವಿದೆ. ಪೀತಾಂಬರ-ಕಿರೀಟ-ಸಿಂಹಾಸನ-ವಜ್ರ-ವೈಢೂರ್ಯ ಇದ್ದ ರಾಜನು ಸಹ ಏನೂ ಇಲ್ಲದ ತ್ಯಾಗಿಗೆ ತಲೆ ಬಾಗುವುದು ಮತ್ತಿನೇಕೆ ? "ನೀನು ಲೋಕೋದ್ಧಾರಕ್ಕಾಗಿ ಇವನ್ನು ವಿನಿಯೋಗಿಸು." ಎಂದು ಸ್ವತಃ ರಾಜನು ರತ್ನಹಾರವನ್ನು ಕೊಟ್ಟರೂ ಗುರುವು ಅದನ್ನು ತಾನು ಧರಿಸನು; ಮಾರಿ ಆ ಹಣವನ್ನು ಲೋಕ ಹಿತಕ್ಕೆ ಬಳಸಬಹುದಷ್ಟೆ.

ಇನ್ನು ವೈಯಕ್ತಿಕ ಟೀಕೆಯನ್ನು ಈ ಸೇವಾ ಸಂಘದವರು ಮಾಡಿದ್ದಾರೆ. ವಿರಕ್ತ ಸ್ವಾಮಿಗಳು ಕಟ್ಟಿಗೆ ಗಾಡಿಯಲ್ಲಿ ಅಡ್ಡಾಡಬೇಕು ಕಾರೇಕೆ ? ಎಂದಿದ್ದಾರೆ. ಈ ಕಾಲದಲ್ಲಿ ಇದು ಅಸಂಬದ್ಧ. ಒಬ್ಬ ವ್ಯಕ್ತಿಯು ಸಮಯವನ್ನು ಸಾರ್ಥಕವಾಗಿ ಬಳಸಬೇಕು. ಕಾಲು ನಡಿಗೆಯಲ್ಲಿ, ಕಟ್ಟಿಗೆ ಗಾಡಿಯಲ್ಲಿ ತಿರುಗಿ ಸಮಯ ವ್ಯಯಿಸದೆ ಅದನ್ನು ಬರವಣಿಗೆಗೆ ಜ್ಞಾನದಾಸೋಹಕ್ಕೆ ಬಳಸಿದರೆ ವೇಳೆ ಸಾರ್ಥಕವಾಗುತ್ತದೆ. ಆದರೆ ಒಂದು ವಿಷಯದ ಬಗ್ಗೆ ಎಲ್ಲರು ಲಕ್ಷ್ಯವಿಡಬೇಕು. ಸಂಚಾರ ವ್ಯವಸ್ಥೆಯ ಅಗತ್ಯವನ್ನು ಅಂಬಾಸಿಡರ್ ಕಾರು ಪೂರೈಸುವಾಗ ತುಂಬಾ ಬೆಲೆ ಬಾಳುವ ಕಾರುಗಳು, ವಿದೇಶಿ ಕಾರುಗಳ ಮೋಹ ನಮ್ಮ ಸ್ವಾಮಿಗಳಲ್ಲಿ ಹೆಚ್ಚಾಗುತ್ತಿದೆ. ಒಬ್ಬ ಸ್ವಾಮಿಗಳ ಬಳಿ ಇದೆ ಎಂದರೆ ನನ್ನ ಬಳಿ ಏಕೆ ಇರಬಾರದು ? ಎಂಬ ಆಸೆ, ಸ್ಪರ್ಧೆ, ಇದಕ್ಕೆ ಪೂರಕವಾಗಿ ಕೆಲವು ಸಿರಿವಂತ ಭಕ್ತರ ಬೆಂಬಲ ! ಈ ಭೌತಿಕ ವಸ್ತುಗಳಿಂದ ವ್ಯಕ್ತಿಯ ಘನತೆ ಏನೂ ಬೆಳೆಯದಷ್ಟೆ.

ಬೆದರಿಕೆಯ ತಂತ್ರ

ಪಂಚಾಚಾರ್ಯವಾದದವರು ತಮ್ಮ ಮೂಢತನವನ್ನು, ಅವೈಜ್ಞಾನಿಕ ಪ್ರಗತಿ ವಿರೋಧಿ ವಿಚಾರವನ್ನು ಎಷ್ಟೂ ತಿದ್ದಿಕೊಳ್ಳದೆ ಪ್ರಗತಿಪರ ಚಿಂತಕರಾದವರನ್ನು "ನೀವು ಸಮಾಜ ಒಡೆಯುತ್ತೀರಿ" ಎಂದು ಆರೋಪಿಸುತ್ತಾರೆ. ಬಸವಣ್ಣನವರನ್ನು ಧರ್ಮದ ಆದಿಗುರುವೆಂದು ಒಪ್ಪಿದರೆ, ಪಂಚಪೀಠಾಧೀಶರ ಅಡ್ಡಪಲ್ಲಕ್ಕಿಯನ್ನು ಪುರಸ್ಕರಿಸದಿದ್ದರೆ ಸಮಾಜ ಒಡೆಯುತ್ತದೆ ಎಂದು ಹುಸಿ ಬೆದರಿಕೆ ಹಾಕಿ. ವಿಚಾರ ಶೀಲರ ಬಾಯಿ ಮುಚ್ಚಿಸಲು ಯತ್ನಿಸುತ್ತಾರೆ, ವಿಚಾರಶೀಲರನ್ನು ಮೂಢರನ್ನಾಗಿ ಮಾಡಿ ಸಮಾಜವನ್ನು ಒಂದುಗೂಡಿಸುವ ಬದಲು, ತಾವೇ ವಿಚಾರಶೀಲರಾಗಿ ಬಸವಣ್ಣನವರನ್ನು ಧರ್ಮಗುರುವೆಂದು ಒಪ್ಪಿ, ವಚನ ಸಾಹಿತ್ಯದಂತೆ ನಡೆದು, ಅವರ ಆಚಾರ್ಯರನ್ನು ಈ ಮಾರ್ಗಕ್ಕೆ ತಂದು ಹಚ್ಚಿದರೆ ಸಮಾಜವೂ ಒಂದುಗೂಡುತ್ತದೆ, ಅವರೂ ಉದ್ಧಾರವಾಗುತ್ತಾರೆ, ಲಿಂಗವಂತರು ಪ್ರಗತಿಪರ ಚಿಂತಕರೆಂದು ತಲೆ ಎತ್ತಿ ಓಡಾಡಬಹುದು.

ಪಂಚಾಚಾರದವರ ಮೌಢ್ಯತೆ

ಲಿಂಗವಂತ ಸಮಾಜದಲ್ಲಿ ಬಹುಸಂಖ್ಯಾತರು, ಸ್ವಲ್ಪ ಸುಧಾರಿಸಿದವರು ಎಂದರೆ ಪಂಚಮಸಾಲೆಯವರು ಮತ್ತು ಬಣಜಿಗರು. [ಇವರು ಇನ್ನಿತರ ಲಿಂಗವಂತರನ್ನು ತಿರಸ್ಕಾರದಿಂದ ನೋಡಿದ್ದರಿಂದಲೇ ಅವರುಗಳು ಪ್ರತ್ಯೇಕ ಮನೋಭಾವ ರೂಢಿಸಿಕೊಂಡು ಮಠ-ಸಂಘ-ಸಂಸ್ಥೆ ಸ್ಥಾಪಿಸಿಕೊಂಡು ಈಗ ಸಾಕಷ್ಟು ಪ್ರಗತಿ ಸಾಧಿಸಿದ್ದಾರೆ. ಉದಾಹರಣೆಗೆ ಸಾದರು, ನೊಳಂಬರು, ಸಜ್ಜನರು, ಪಟ್ಟಸಾಲಿ ಇತ್ಯಾದಿ] ತುಂಗ ಭದ್ರಾ ದಾಟಿದ ತಕ್ಷಣ ಉತ್ತರ ಕರ್ನಾಟಕದಲ್ಲಿ ಪಂಚಮಸಾಲೆ ಎಂದು ಹೆಸರು ಹೊಂದುತ್ತಾರೆ, ಹಳೆಯ ಮೈಸೂರಲ್ಲಿ ಪಂಚಾಚಾರದವರು ಎನ್ನಿಸಿಕೊಳ್ಳುತ್ತಾರೆ. ಜನರು ಮೌಢ್ಯತೆಯಲ್ಲಿದ್ದಾಗ "ನೀವು ಭಕ್ತರು. ನಮ್ಮನ್ನು ಹೊರಲು, ಗುರು ಪೀಠಕ್ಕೆ ಏರಿಸಲು ಅಷ್ಟೆ ಅರ್ಹರು, ನೀವು ಗುರು-ಜಂಗಮರಾಗಲು ಅರ್ಹರಲ್ಲ"

ಎಂದು ಹೇಳುತ್ತಿದ್ದುದನ್ನು ಎಲ್ಲರೂ ಕೇಳುತ್ತಾ ಬಂದರು. ಈಗೀಗ ಜಾಗೃತಿಯಾಗುತ್ತ ಹೊರಟಂತೆ, "ಎಲಾ, ಇವರು ನಮ್ಮ ಮೂಲಭೂತ ಹಕ್ಕನ್ನೇ ನಿರಾಕರಿಸುತ್ತಾರಲ್ಲ" ಎಂದು ತಿಳುವಳಿಕೆ ಹುಟ್ಟಿತು. ಹೀಗೆ ಒಬ್ಬೊಬ್ಬರಾಗಿ ಲಿಂಗವಂತ ಸಮಾಜದ ಉಪಪಂಗಡಗಳವರು ಜಾಗೃತರಾಗತೊಡಗಿರಲು, ಪಂಚಾಪೀಠಾಧೀಶರು ಹೊಸದೊಂದು ತಂತ್ರ ಹೂಡಲಾರಂಭಿಸಿದರು. ಸಾದರು ಹೇಗೆ ಅವರ ಜಾತಿಯ ಮಠಕ್ಕೆ ನಡೆದುಕೊಳ್ಳುವರೋ ನೊಳಂಬರು ಅವರ ಜಾತಿಯ ಮಠಗಳಿಗೆ ನಡೆದುಕೊಳ್ಳುವರೋ ಹಾಗೆ ಪಂಚಾಚಾರದವರು(ಪಂಚಮಸಾಲೆಯವರು) ಪಂಚಾಚಾರ್ಯ ಮಠಕ್ಕೆ ನಡೆದುಕೊಳ್ಳಬೇಕು ಎಂಬ ಸುಂಟರಗಾಳಿ ಬಿಟ್ಟು ಕೆಲವು ಪಂಚಾಚಾರದವರನ್ನು ಭ್ರಮಾಧೀನರನ್ನಾಗಿ ಮಾಡಿ ಬಿಟ್ಟಿದ್ದಾರೆ. "ಅಶ್ವತ್ಥಾಮ ಹತಃ" ಎಂದು ಜೋರಾಗಿ ಹೇಳಿ ದ್ರೋಣಾಚಾರ್ಯನನ್ನು ನಿಸ್ಸತ್ವಗೊಳಿಸಿ, ಕುಂಜರಃ ಎಂದು ಮೆಲ್ಲಗೆ ಹೇಳಿ ಪಾಂಡವರು ಪ್ರಾಮಾಣಿಕತೆ ಮೆರೆದಂತೆ !

ಪಂಚಾಚಾರ್ಯರಿಗೆ–ಪಂಚಾಚಾರದವರಿಗೂ ಯಾವ ಬಾದರಾಯಣ ಸಂಬಂಧವೂ ಇಲ್ಲ. ಒಳ್ಳೆಯ ಖೆಡ್ಡಾದೊಳಕ್ಕೆ ಇವರು ಬೀಳುತ್ತಿದ್ದಾರೆ. ಬಸವಾದಿ ಪ್ರಮಥರು ಪ್ರತಿಪಾದಿಸಿದ ಪಂಚಆಚಾರಗಳನ್ನು ಅಳವಡಿಸಿಕೊಂಡವರು ಪಂಚಾಚಾರದವರು ಎಂದರ್ಥ.

ಅಂಗದ ಮೇಲೆ ಲಿಂಗವಿದ್ದವರು "ಸಂಗಮನಾಥ" ಎಂದು ಬಸವಣ್ಣನವರು ಎಲ್ಲರನ್ನೂ ಸಮಾನವಾಗಿ ಕಂಡರು. ಪಂಚಾಚಾರ್ಯ ವರ್ಗದವರು ಪುನಃ ಲಿಂಗವಂತರಲ್ಲಿ ಚತುರ್ವರ್ಣಗಳನ್ನು ತಂದಿಕ್ಕಲು ಪ್ರಯತ್ನ ಮಾಡಿದರು. ಪಂಚಮಸಾಲೆಯವರು, ಬಣಜಿಗರು, ಸಜ್ಜನರು ಮುಂತಾದವರು ಲಿಂಗವಂತರಿದ್ದರೂ ಭಕ್ತವರ್ಗದವರು, ಗುರು–ಜಂಗಮರಾಗಲು ಅರ್ಹರಲ್ಲ ಎಂದು ವೀರಶೈವ ಪುರೋಹಿತಶಾಹಿ ಜನರು ಪ್ರತಿಪಾದಿಸಿದರೂ, ಈ ಜನ ಅದನ್ನು ವೇದವಾಕ್ಯವೆಂದು ಪಾಲಿಸಿದ್ದುಂಟು. ಭಗವದ್ಗೀತೆಯು ಬ್ರಾಹ್ಮಣ–ಕ್ಷತ್ರಿಯರನ್ನು ಪುಣ್ಯಯೋನಿಜರೆಂದು, ವೈಶ್ಯ-ಶೂದ್ರ-ಸ್ತ್ರೀಯರನ್ನು ಪಾಪಯೋನಿಜರೆಂದು ಕರೆದರೂ ವೈಶ್ಯರು ಶೂದ್ರರು ಭಗವದ್ಗೀತೆಯನ್ನು ಪವಿತ್ರವೆಂದು ತಲೆಯ ಮೇಲಿಟ್ಟುಕೊಂಡಂತೆ, ಮೂಢ ಲಿಂಗವಂತ ಭಕ್ತರ ನಂಬಿಕೆ." ನಮಗೇಕೆ ಈ ಕೆಳಗಿನ ಸ್ಥಾನ ? ಗುರುತ್ವದ ಹಕ್ಕುಗಳ ನಿರಾಕರಣೆ?" ಎಂದು ಪ್ರಶ್ನಿಸುವರು, ಪ್ರತಿಭಟಿಸುವವರು ಕಡಿಮೆ-"ಅಸ್ಪೃಶ್ಯರಿಗಿಂತಲೂ ನಮಗೆ ಹೆಚ್ಚಿನ ಸ್ಥಾನವಿದೆ; ಊರ ಹೊರಗಿಟ್ಟಿಲ್ಲ ಎಂಬ ಸಮಾಧಾನ ಶೂದ್ರರದಾದರೆ; ಶೂದ್ರರಿಗಿಲ್ಲದ ಧರ್ಮ ಸಂಸ್ಕಾರ ನಮಗಿದೆ ಎಂಬ ಸಮಾಧಾನ ವೈಶ್ಯರದು. ಅವರಿಬ್ಬರಿಗೂ ಇಲ್ಲದ ಪುಣ್ಯಯೋನಿಜತ್ವ ನಮಗಿದೆ ಎಂಬ ಸಮಾಧಾನ ಕ್ಷತ್ರಿಯರದು. ನಮಗೇಕೆ ಗುರುತ್ವದ, ಪೀಠಾಧಿಕಾರದ, ಪೂಜಾರಿಕೆಯ ಹಕ್ಕಿಲ್ಲ ಎಂದು ಶಾಸ್ತ್ರವನ್ನಾಗಲೀ, ಸಂಪ್ರದಾಯವನ್ನಾಗಲೀ ಪ್ರಶ್ನಿಸುವ ಜಾಗೃತಿ ಬಹಳ ಜನರಲ್ಲಿ ಕಡಿಮೆ. ಉಳಿದ ಲಿಂಗವಂತರಿಗಿಂತ ತಮ್ಮನ್ನು ಶ್ರೇಷ್ಠರೆನ್ನುವರಲ್ಲ ಎಂಬ ಸಮಾಧಾನ ಪಂಚಮಸಾಲೆ–ಬಣಜಿಗರದು, ಆದರೆ ತಮ್ಮನ್ನು ಗುರುತ್ವದ–ಜಂಗಮತ್ವದ ಮಠ–ಪೀಠಾಧಿಕಾರದ ಹಕ್ಕಿನಿಂದ ವಂಚಿಸುವರಲ್ಲ ಎಂಬ ಬಗ್ಗೆ ಚಿಂತೆಯಿಲ್ಲ.

ಇಂಥಾ ಮೂಢ ಭಕ್ತಿಯ ಖೆಡ್ಡಾದಲ್ಲಿ ಬಿದ್ದ ಲಿಂಗವಂತ ಸಮಾಜದ ಭಕ್ತವರ್ಗದವರು ಇನ್ನಾದರೂ ಜಾಗೃತರಾಗಿ ಸಮಾನತೆಯ ಪ್ರತಿಪಾದಕರಾದ ವಿಶ್ವಗುರು–ಬಸವಣ್ಣನವರು ಹಾಕಿಕೊಟ್ಟ ಪಥದಲ್ಲಿ ಸಾಗುವದು ಒಳ್ಳೆಯದು.

★ ★

ಧಾರವಾಡದಲ್ಲಿ ಗಣಮೇಳ

ಮಹಾಶಿವರಾತ್ರಿಯಂದು ಧಾರವಾಡ ನಗರದಲ್ಲಿ ಶರಣ "ಗಣಮೇಳ" ಬಸವ ತತ್ವಾನುಯಾಯಿಗಳ ಸಮಾವೇಶವು ಅತ್ಯಂತ ಅರ್ಥಗರ್ಭಿತವಾಗಿ ನಡೆಯಿತು. ಸಮಾನತೆ-ಧಾರ್ಮಿಕ ಸಹೋದರತ್ವ ಸಾರುವ ಗಣಮೇಳವು ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ಯಶಸ್ವಿಯಾಗಿ ನಡೆದು ಜನಮನವನ್ನು ಆಕರ್ಷಿಸಿತು.

೧. **ಧ್ವಜಾರೋಹಣ :**

ಗಂಟಾನಾದವನ್ನು ಶರಣ ಶಿವಣ್ಣ ಶಿರೂರು ಅವರು ಮಾಡಿದರು; ನಂತರ ಕಹಳೆ ಮೊಳಗಿತು. ಪೂಜ್ಯ ಮಾತಾಜಿಯವರು "ಕರ್ತನ ಸೃಷ್ಟಿಯೊಳು ಹುಟ್ಟಿಹ ನಾನು" ಎಂಬ ಸಂಕಲ್ಪ ಗೀತೆಯನ್ನು ಹಾಡಿದರು. ಶರಣ ಬಂಧುಗಳು ಧ್ವನಿಗೂಡಿಸಿದರು. ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ ಇವರನ್ನು ಶರಣ ಗುರುಪಾದಪ್ಪ ಬೆಟಗೇರಿ ಸ್ವಾಗತಿಸಿದರು, ಮಾತೆ ಗಂಗಾದೇವಿಯವರು ಧ್ವಜಾರೋಹಣ ಮಾಡಿದರು. ಕಹಳೆ ಮೊಳಗಿತು. "ಹೇ ಶರಣ ಬಂಧುಗಳೇ" ಹಾಡಲಾಯಿತು. "ಬಸವ ಭಕ್ತರು ನಾವು" ಎಂದು ಪ್ರತಿಜ್ಞಾಗೀತೆ ಹಾಡಲಾಯಿತು.

೨. **ಪಥ ಸಂಚಲನ :**

ಆರ್.ಎನ್.ಶೆಟ್ಟಿ ಕ್ರೀಡಾಂಗಣವು ತುಂಬಾ ಸುಂದರವಾಗಿರುವುದರಿಂದ ಎಲ್ಲ ಶರಣರು ಧ್ವಜಾರೋಹಣದ ನಂತರ ಅಲ್ಲೇ ಒಂದು ಸುತ್ತು ಪಥ ಸಂಚಲನ ಮಾಡಬೇಕೆಂದು, ನಂತರ ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳಿಗೆ 'ವಂದನೆ' ಸಲ್ಲಿಸುವುದಾಗಬೇಕೆಂದು ನಿರ್ಣಯಿಸಲಾಗಿತ್ತು. ಆದರೆ ಶರಣ ಬಂಧುಗಳ ಉತ್ಸಾಹ ಮೇರೆಮರಿದು, ಅವರು ಕ್ರೀಡಾಂಗಣದ ಹೊರಗೆ ಸಾಗಿ ಜೂಬಿಲಿ ಸರ್ಕಲ್ ಬಸವೇಶ್ವರ ಸರ್ಕಲ್‌ಗೆ ಹೋಗಿ ಅಲ್ಲಿಟ್ಟ ಬಸವ ಭಾವಚಿತ್ರಕ್ಕೆ ಶರಣು ಸಲ್ಲಿಸಿ ಬರಲು ನಿರ್ಧರಿಸಿದರು. ಸಹಸ್ರಾರು ಸಂಖ್ಯೆಯಲ್ಲಿ ಶುಭ್ರ ವಸ್ತ್ರಗಳನ್ನುಟ್ಟು, ಕಾವಿ ಸ್ಕಾರ್ಫ್ ಧರಿಸಿ, ಬಸವ-ಗಾಂಧಿ (ಷಟ್ ಕೋನ ಚಿತ್ರವಿರುವ) ಟೋಪಿ ಹಾಕಿ ಶರಣರು ನಡೆದುದು ಕಣ್ಣಿಗೆ ಹಬ್ಬವನ್ನು ಉಂಟುಮಾಡುವಂತಿತ್ತು. ಸಮಯ ಮತ್ತು ಬಿಸಿಲಿನ ಪರಿವೆ ಇಲ್ಲದೆ ಇವರು ಸಾಗಿದರು. ಪೂಜ್ಯ ಗಂಗಾಮಾತಾಜಿಯವರೂ ಪಾದಯಾತ್ರೆಯ ನೇತೃತ್ವ ವಹಿಸಿದ್ದರು. ಶರಣ ಶಿವಣ್ಣ ಶಿರೂರು ಧ್ವಜವನ್ನು ಹಿಡಿದು ಮುಂಚೂಣಿಯಲ್ಲಿ ಸಾಗಿದರು.

೩. **ಆದಿ ಗುರುವಿನ ಪೂಜೆ :**

ಪಥ ಸಂಚಲನ ಪೂರೈಸಿ ಶರಣರು ಬರುತ್ತಲೇ ಬಸವ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಪೂಜ್ಯ ಮಾತಾಜಿ "ಮುಕ್ತಿದಾಯಕ" ಹಾಡಿದರು. ಗಂಗಾ ಮಾತಾಜಿ ಪೂಜೆ ಸಲ್ಲಿಸಿದರು.



ಗಣಮೇಳದಲ್ಲಿ ಪ್ರಾರ್ಥನೆ ನಡೆದಾಗ

ಬಲದಿಂದ ಎಡಕ್ಕೆ : ದಿವ್ಯ ಸನ್ನಿಧಿ ವಹಿಸಿದ ಪೂಜ್ಯ ಶ್ರೀಮನ್ ನಿರಂಜನ ಜಗದ್ಗುರು ಲಿಂಗಾನಂದ ಸ್ವಾಮೀಜಿ, ಡಾ|| ನಿತೀನ ಚಂದ್ರ ಹತ್ತಿಕಾಳ, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ, ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ.

೪. **ಉದ್ಘಾಟನೆ :**


ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ದೀಪವನ್ನು ಹೊತ್ತಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪೂಜ್ಯರು ಬಸವ ಭಾವಚಿತ್ರಕ್ಕೆ ಮೊಟ್ಟ ಮೊದಲಿಗೆ, ಮಾತಾಜಿಯವರು ನಂತರ, ಗಂಗಾ ಮಾತಾಜಿಯವರು ಮೂರನೆಯವರಾಗಿ, ರಾ.ಬ. ದಳದ ರಾಜ್ಯ ಶಾಖೆಯ ಗೌರವಾಧ್ಯಕ್ಷ ಡಾ. ನಿತೀನ ಚಂದ್ರ ಹತ್ತಿಕಾಳ ಅವರು ತದ ನಂತರ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

೫. **ಸಮುದಾಯ ಪ್ರಾರ್ಥನೆ :**

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಸಮುದಾಯ ಪ್ರಾರ್ಥನೆ ಮಾಡಿಸಿದರು.

೧. ಓಂ ಶ್ರೀ ಗುರುಬಸವಲಿಂಗಾನಮ:
೨. ಬಸವಂ ಪ್ರಣವಾಕಾರಂ.
೩. ಪ್ರಣವಾರೂಢನು (ಬಸವ ವಚನ)
೪. ಇವನಾರವ (ಬಸವ ವಚನ)
೫. ಸಂಕಲ್ಪ ವಚನ (ಮಾತಾಜಿ ರಚನೆ)
೬. ಗಣಗೀತೆ - ಶ್ರೀಗುರು ಬಸವಂಗೆ ಶರಣಾಗಿಹೆ
೭. ಸಾಂಬ ಸದಾಶಿವ
ಶ್ರೀ ಗುರುಬಸವ ಲಿಂಗಾಯನಮ:
೮. ಓಂ ಗುರುದೇವ ಓಂ ಬಸವಾ
೯. ಕರುಣಾಳು ಹೃತ್ಕಮಲವಾಸ
೧೦. ಪ್ರಭೋ ನೀನು ಸರ್ವವ್ಯಾಪಿ
೧೧. ಮೌನಧ್ಯಾನ
೧೨. **ವಚನ ಗಾಯನ** - ಚಕೋರಂಗೆ ಚಂದ್ರಮನ (ಧರ್ಮಪಿತರ ವಚನ)
ವಚನದಲ್ಲಿ ನಾಮಾಮೃತ (ಧರ್ಮಪಿತರ ವಚನ)
ಮಡಿಕೆಯ ಮಾಡುವರೇ (ಧರ್ಮಪಿತರ ವಚನ)
೧೩. ಬಸವ ಗುರು ಸ್ತುತಿ-ಶ್ರೀಮಹಾಕಾರಣಿಕ
೧೪. ಷಟ್ ಸೂತ್ರ ಘೋಷಣೆ
೧೫. ೧೨ ತತ್ವಗಳ ಪ್ರತಿಜ್ಞಾವಿಧಿ ಬೋಧೆ

೬. ಈ ಕ್ರಮದಲ್ಲಿ ಪ್ರಾರ್ಥನೆಯು ತುಂಬಾ ಚೆನ್ನಾಗಿ ನಡೆಯಿತು. ಡಾ.ನಿತಿನ ಚಂದ್ರ ಹತ್ತೀಕಾಳರು ಬಸವ ಧರ್ಮದ ಮಹಾಜಗದ್ಗುರು ಪೀಠದಿಂದ ಬಂದ, ಪೂಜ್ಯ ಮಾತಾಜಿಯವರು ರಚಿಸಿದ "ಗಣಮೇಳದ ಸಂದೇಶ" ವನ್ನು ಸ್ಪಷ್ಟವಾಗಿ, ಸುಂದರವಾಗಿ, ಪರಿಣಾಮಕಾರಿಯಾಗಿ ಓದಿದರು.



ಗುರುವಂದನೆ ಸ್ವೀಕರಿಸುತ್ತಿರುವ ಪೂಜ್ಯ ಶ್ರೀಮಾನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿ ಗಳು



ಪಥ ಸಂಚಲನದಲ್ಲಿ ಸಾಗಿ ಗುರುವಂದನೆ ಗೈಯುತ್ತಿರುವ ಶರಣ ಗಣ.

೭. ಪೂಜ್ಯ ಮಾತಾಜಿಯವರಿಂದ ವಿಶೇಷ ಸಂದೇಶ

ಶರಣ ಬಂಧುಗಳೇ,

೧. ಇಂದು, ಎಂಟುನೂರು ವರ್ಷಗಳ ಬಳಿಕ ಪ್ರಥಮ ಗಣಮೇಳವನ್ನು ನಾವು ಆಚರಿಸುತ್ತಿದ್ದೇವೆ. ಧರ್ಮಗುರು ಬಸವಣ್ಣನವರು ಮತ್ತು ಅವರ ಪರಂಪರೆಯ **ಶರಣರ ಸತ್ಸಂಕಲ್ಪ** ಇಂದು ಪೂರೈಸುತ್ತಿದೆ.

೨. ಗುರು ಬಸವಣ್ಣನವರು ಒಂದು **ಗಣಧರ್ಮ**ವನ್ನು ಕೊಟ್ಟರು. ಇದು ಜಾತಿ, ಮತ, ಪಂಥ, ವರ್ಣ, ವರ್ಗ, ಲಿಂಗ ಭೇದಗಳನ್ನೂ ದಾಟಿದ, ವಿಶಾಲ ವ್ಯಾಪ್ತಿಯುಳ್ಳದ್ದು. ಅವರ ಕಾಲದಲ್ಲಿ ನಿತ್ಯವೂ ಗಣಗೋಷ್ಠಿ (ಅನುಭವಗೋಷ್ಠಿ) ನಡೆಯುತ್ತಿತ್ತು. ಆಗಾಗ ಗಣಸಭೆ (Holy congregations) ಗಳು ನಡೆಯುತ್ತಿದ್ದವು. ಧರ್ಮಪಿತರು ಅಸಂಖ್ಯಾತ ಗಣಪರ್ವ (conferences) ಗಳನ್ನು ಮಾಡಿದರು. ನಂತರದ ಅನುಯಾಯಿಗಳು ಇದನ್ನು ಮಾದರಿಯಾಗಿ ಇಟ್ಟುಕೊಂಡು ಸಾಗಬೇಕೆಂಬುದೇ ಅವರ ಆಶಯ (desire) ಮತ್ತು ಆದೇಶ (commandment) ವಾಗಿತ್ತು. ಧರ್ಮಪಿತರ ಕಾಲದಲ್ಲಯೇ ಒಂದು ಲಕ್ಷದ ತೊಂಭತ್ತಾರು ಸಾವಿರ ಅನುಯಾಯಿಗಳನ್ನು ಬಸವ ಧರ್ಮವು ಹೊಂದಿತ್ತಾದರೂ, ನಂತರ ಇದು ಸಂಘಟನೆ-ಶಿಸ್ತುಗಳನ್ನೂ ಉಳಿಸಿಕೊಳ್ಳಲಿಲ್ಲ. ಇಂದು ಮೂರು ಕೋಟಿ ಅನುಯಾಯಿಗಳನ್ನು ಹೊಂದಿರುವ ಸಮಾಜವಾಗಿದ್ದರೂ ಇದನ್ನು ಒಂದು ಸಮಾಜ ಎಂದು ಯಾರೂ ಕರೆಯಲಾರರು. ಒಂದು ಕಟ್ಟಡವನ್ನು ಕಟ್ಟಡ ಎನ್ನಬೇಕಾದರೆ ಇಟ್ಟಿಗೆಗಳು ಸುವ್ಯವಸ್ಥಿತವಾಗಿ ಜೋಡಿಸಲ್ಪಟ್ಟಿರಬೇಕು. ಮಧ್ಯೆ ಸಿಮೆಂಟು (ಗಾರೆ) ಮಿಶ್ರಣ ಇರಬೇಕು. ಮರಳಿನ ಗುಡ್ಡೆ ಮೂಟೆಯಲ್ಲಿ ಸಿಮೆಂಟು, ತೊಟ್ಟಿಯಲ್ಲಿ ನೀರು ಇದ್ದರೆ ಅದನ್ನು ಕಟ್ಟಡ ಎಂದು ಯಾರೂ ಅನ್ನರಷ್ಟೇ. ಹಾಗೆಯೇ ಜನರು ಜನಗಣತಿ ದೃಷ್ಟಿಯಿಂದ ಇದ್ದಮಾತ್ರಕ್ಕೆ ಅದನ್ನು ಸಮಾಜ ಎಂದು ಅನ್ನಲಾದೀತೆ ? ಸಂಘಟನೆ, ಸಂಸ್ಕೃತಿ, ಸಾಮರಸ್ಯ, ತಾತ್ತ್ವಿಕ ಖಚಿತತೆ ಇದ್ದಾಗ ಮಾತ್ರ ಅದು ಸಮಾಜ ಎನ್ನಿಸಿಕೊಳ್ಳುವುದು. ಸಮಾನತೆ-ಧಾರ್ಮಿಕ ಸಹೋದರತ್ವ ಶಿಸ್ತು ತರಲೋಸುಗ ಈ ಗಣಮೇಳವು ಏರ್ಪಾಡಾಗಿದೆ.

೩. **ಮಹಾಶಿವರಾತ್ರಿಯಂದು ಗಣಮೇಳ**

ಮಹಾಶಿವರಾತ್ರಿಯಂದು ಪ್ರತಿ ನಗರ, ಊರು, ಗ್ರಾಮಗಳಲ್ಲಿಯೂ ಗಣಮೇಳವು ಏರ್ಪಾಡಾಗಬೇಕು. ಈ ದಿನವನ್ನೇ ಆಯ್ಕೆ ಮಾಡಿಕೊಂಡ ಉದ್ದೇಶವೇನೆಂದರೆ,

ಭಾರತ ದೇಶದಲ್ಲಿ ಹಲವಾರು ಧರ್ಮಗಳಿದ್ದರೂ ಇವುಗಳು ಶೈವ ಇಲ್ಲವೇ ವೈಷ್ಣವ ಸಾಂಸ್ಕೃತಿಕ ಛಾಯೆಯನ್ನು ಹೊತ್ತಿವೆ. ಬಸವ ಧರ್ಮವು ಸ್ವತಂತ್ರ ಧರ್ಮವಾದರೂ ಶಿವಸಂಸ್ಕೃತಿಯ ಸಾರವನ್ನು ಈಂಟಿ ಬೆಳೆದುದಾಗಿದೆ. ಭಾರತದ ಮೊಟ್ಟಮೊದಲ ಯೋಗಿರಾಜ ಶಿವನು ತಪಸ್ಸಿಗೆ ಕುಳಿತ ದಿನ ಶಿವರಾತ್ರಿ ಇಂದು ನಮಗೆ ಬಸವಣ್ಣನವರೇ ಆದಿ ಪ್ರಮಥರಾಗಿ ಆರಂಭವಾದ ಮಹಾನ್ ಪರಂಪರೆ ಇದೆ. ಈ

ಪರಂಪರೆಯ ಶರಣರ ಸಂಖ್ಯೆ ಅಪಾರ. ಅವರೆಲ್ಲರನ್ನೂ ಪ್ರತ್ಯೇಕವಾಗಿ ಸ್ಮರಿಸಲು ನಮಗೆ ವರ್ಷದ 365 ದಿನಗಳು ಸಾಲವು. ಅದಕ್ಕೆ ಎಲ್ಲ ಶರಣರನ್ನೂ ಸ್ಮರಿಸಿಕೊಂಡು ಇದನ್ನೂ ಸರ್ವ ಶರಣರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ.

ಶಿವರಾತ್ರಿ ಆಚರಣೆ

ಶಿವರಾತ್ರಿಯ ದಿನವನ್ನು ಮತ್ತು ರಾತ್ರಿಯನ್ನು ಅತ್ಯಂತ ಪವಿತ್ರವಾಗಿ ಕಳೆಯಬೇಕು. ಧರ್ಮಪಿತ ಬಸವಣ್ಣನವರು ಹೀಗೇ ಹೇಳುವರು:

ಶರಣನೆದ್ದು ಕುಳಿತರೆ ಶಿವರಾತ್ರಿ ಕಾಣಿರಣ್ಣ
ಶರಣ ನಿದ್ರೆಗೈದರೆ ಜಪಕಾಣಿರಣ್ಣಾ

ಇಂಥ ಶಿವರಾತ್ರಿಯನ್ನು ನಿಜ ಶರಣನು ಎಂದೋ ಒಂದು ದಿನ ಮಾಡುವುದಿಲ್ಲ, ನಿಚ್ಚ ನಿಚ್ಚವೂ ಶಿವರಾತ್ರಿ ಆಚರಿಸುವನು. ಜನ ಸಾಮಾನ್ಯರೆಲ್ಲರಿಗೂ ಅಂಥ ಸ್ಥಿತಿ ಲಭ್ಯವಿರದು. ಆದ್ದರಿಂದ ವರ್ಷಕ್ಕೊಂದು ದಿನವನ್ನಾದರೂ ಸಂಪೂರ್ಣ ಅಧ್ಯಾತ್ಮಜೀವನಕ್ಕೆ ಮೀಸಲಿಡಬೇಕು.

೧. ಸುಪ್ರಭಾತದಲ್ಲಿ ಎದ್ದು ಸ್ನಾನಮಾಡಿ ಇಷ್ಟಲಿಂಗಪೂಜೆಯನ್ನು ಮತ್ತು ಗುರು ಬಸವಣ್ಣನವರ ಪೂಜೆಯನ್ನು ನೆರವೇರಿಸಬೇಕು.

೨. ಉಳಿದ ಹಿಂದುಗಳಂತೆ ಉಪವಾಸ ಕಡ್ಡಾಯವಲ್ಲ. ಏಕೆಂದರೆ ಲಿಂಗಪೂಜೆ ಮಾಡಿ ಲಿಂಗಪ್ರಸಾದವನ್ನು ಸ್ವೀಕರಿಸಬಹುದು, ಅನಾರೋಗ್ಯವಿದ್ದವರು ಸ್ನಾನ-ಪೂಜೆ ಮಾಡಿ ಪ್ರಸಾದ ಸ್ವೀಕರಿಸಬಹುದು.

೩. ಎಲ್ಲರೂ ಶುಭ್ರ ಬಿಳಿಯ ಬಟ್ಟೆ ತೊಟ್ಟು, ಕಾವಿಯ ಸ್ಕಾರ್ಫ್ ಹೊದ್ದು ಗಣಮೇಳದ ಪ್ರಾರ್ಥನೆಗೆ ಬರಬೇಕು. ಶರಣರು ಬಿಳಿಯ ಸಮವಸ್ತ್ರಗಳಲ್ಲಿ ಷಟ್ಕೋನಬಸವಮುದ್ರೆ ಮುದ್ರಿತವಾಗಿರುವ ಬಿಳಿಯ ಟೋಪಿ ಧರಿಸಬೇಕು. ಶರಣೆಯರು ತಲೆಯ ಮೇಲೆ ಸೆರಗು ಹೊದೆಯಬೇಕು. ಶರಣರಂತೆ ಶರಣೆಯರಿಗೂ ಸಮಾನ ಅವಕಾಶಗಳು ಇರುವುದರಿಂದ ಅವರೂ ಸಹ ಗಣ ಮೇಳದ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ಚಿಕ್ಕಮಕ್ಕಳಿದ್ದವರು ಇತರರ ಪ್ರಾರ್ಥನೆಗೆ ಭಂಗತರದಂತೆ ಹಿಂದಿನ ಸಾಲುಗಳಲ್ಲಿ ಕುಳಿತುಕೊಳ್ಳಬೇಕು.

ಶರಣು ವಿನಿಮಯ-ಕಲ್ಲುಸಕ್ಕರೆ ವಿನಿಮಯ

ಪ್ರಾರ್ಥನೆ-ಷಟ್ ಸೂತ್ರ ಘೋಷಣೆ-ಪ್ರತಿಜ್ಞಾವಿಧಿ-ಮಂಗಲ ಮುಗಿದ ಮೇಲೆ ಎಲ್ಲರೂ ಪರಸ್ಪರ ಶರಣು ವಿನಿಮಯ ಮಾಡಿಕೊಳ್ಳಬೇಕು. ಕಲ್ಲುಸಕ್ಕರೆಯನ್ನೂ ಪರಸ್ಪರ ಹಂಚಬೇಕು.

ನವರಾತ್ರಿಯಲ್ಲಿ ಬನ್ನಿ ಮುಡಿದು, ಹಿರಿಯರ ದರ್ಶನ ಮಾಡುವ ಪರಸ್ಪರ ಬನ್ನಿ ಕೊಡುವ ಆಚರಣೆಯುಂಟು. ನವರಾತ್ರಿ ಆಚರಣೆ ಶರಣ ಸಂಸ್ಕೃತಿಗೆ ಸಲ್ಲದ್ದು, ಪರಸ್ಪರ ಭೇಟಿಮಾಡಿ ಭಾವೈಕ್ಯತೆ ಸಾಧಿಸುವ ಕಾರ್ಯಕ್ರಮವನ್ನು ಶಿವರಾತ್ರಿಯಂದು ಆಚರಿಸುವುದು ಬಲು ಸೂಕ್ತ.

ದೇವಿಯು (ಆರ್ಯ ಸಂಸ್ಕೃತಿಯ ಪ್ರತಿನಿಧಿ) ರಾಕ್ಷಸ (ದ್ರಾವಿಡ ರಾಜ)ರ ಮೇಲೆ ಜಯ ಸಾಧಿಸಿದಳೆಂದು ವಿಜಯೋತ್ಸವವನ್ನು ವಿಜಯದಶಮಿಯಂದು

ಆಚರಿಸುವುದು ದ್ರಾವಿಡ ಜನಾಂಗಕ್ಕೆ ಅವಮಾನಕಾರಿಯಾದುದು. ಇದನ್ನು ಬಿಟ್ಟು ಶಿವರಾತ್ರಿಯಂದು ಪರಸ್ಪರ ಶರಣು ವಿನಿಮಯ ಮಾಡುವುದು ಬಹಳ ಸೂಕ್ತ.

ಲಿಂಗವಂತ ಧರ್ಮದಲ್ಲಿ ಕಲ್ಲುಸಕ್ಕರೆಯನ್ನೂ ಪ್ರಸಾದವನ್ನಾಗಿ ವಿತರಿಸುವುಧು ಮಹತ್ವಪೂರ್ಣವಾಗಿದೆ. ಅದನ್ನು ಬನ್ನಿ ಸೊಪ್ಪಿನಂತೆ ಬಿಸಾಡುವುದಿಲ್ಲ, ತಿನ್ನುವುದರಿಂದ ಅಂಗಗತವಾಗುವುದು.

ಸಂಜೆಯಲ್ಲಿ ಮನೆಮಂದಿ ಎಲ್ಲರೂ ಸ್ನಾನ ಮಾಡಿ, ಸಾಮೂಹಿಕವಾಗಿ ಇಷ್ಟಲಿಂಗಾರ್ಚನೆ ಮಾಡಬೇಕು. ಬಸವ ಮಂಟಪ ಮಠಗಳಲ್ಲಿ ಎಲ್ಲರೂ ಸೇರಿ ಸಾಮೂಹಿಕ ಲಿಂಗಪೂಜೆ ಮಾಡಬಹುದು. ಇದು ಸಾಧ್ಯವಿಲ್ಲದಿದ್ದರೆ ಕುಟುಂಬದ ಎಲ್ಲ ಸದಸ್ಯರು ಒಂದು ಕಡೆ ಕುಳಿತು ಇಷ್ಟಲಿಂಗಾರ್ಚನೆ ಮಾಡಬೇಕು. ಎಷ್ಟೇ ಲಾಭವಾಗುತ್ತಿದ್ದರೂ ಅದನ್ನು ಮರೆತು ಬಸವ ತತ್ವಾನುಯಾಯಿಗಳು ಗಣಮೇಳದಲ್ಲಿ ಬೆಳಿಗ್ಗೆ ಮತ್ತು ಸಂಜೆಯ ಸಾಮೂಹಿಕ ಲಿಂಗಪೂಜೆಯಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು. ಪೂಜಾನಂತರ ಅಲ್ಪೋಪಹಾರ ಮಾಡಿ ವಚನಾಧ್ಯಯನ, ಸಾಮೂಹಿಕ ವಚನ ಪಠಣ ಮಂತ್ರಜಪ ಮಾಡಬೇಕು.

ಜಾಗರಣೆ ಕಡ್ಡಾಯವಲ್ಲ:

ಶಿವರಾತ್ರಿಯಂದು ರಾತ್ರಿ ಎಲ್ಲ ಜಾಗರಣೆ ಮಾಡಿ ಪುಣ್ಯವನ್ನು ಪಡೆಯಬೇಕೆಂದು ಭಾವುಕರು ಚಲನಚಿತ್ರಗಳನ್ನು ನೋಡುತ್ತಾ ಕಾಲ ಕಳೆಯುವುದು ಅವಿವೇಕ ರಮಣೀಯ. ಇಡೀ ರಾತ್ರಿ ಅಲ್ಲಸಲ್ಲದ್ದು ನೋಡುವುದಲ್ಲದೆ ಮರುದಿನ ಸರ್ಕಾರಿ ರಜಾ ದಿನವೂ ಇರುವುದಿಲ್ಲವಾದ ಕಾರಣ ತೂಕಡಿಸುತ್ತ ಕಾಲ ಕಳೆಯುವುದು ತಪ್ಪು. ವಚನಾಧ್ಯಯನ-ಪಠಣ ಜಪ ಮಾಡಿ ನಂತರ ಮಂತ್ರ ಧ್ಯಾನ ಮಾಡುತ್ತ ನಿದ್ರೆ ಮಾಡುವುದು ಒಳ್ಳೆಯದು.

ಹಬ್ಬಗಳಲ್ಲಿ ಸಾರ್ವತ್ರಿಕತೆ

ಹಿಂದೂಯೇತರರ ಧಾರ್ಮಿಕತೆಯು ಸಾರ್ವತ್ರಿಕ ಸ್ವರೂಪವನ್ನು ಪಡೆದಿರುತ್ತದಾದರೆ ಹಿಂದೂಗಳ ಹಬ್ಬಗಳು ವೈಯಕ್ತಿಕ ಸಂತೋಷ ಸಂಭ್ರಮಗಳಿಂದ ಕೂಡಿರುತ್ತವೆ. ಬಗೆಬಗೆಯ ಅಡಿಗೆಗಳನ್ನು ಮಾಡಿಕೊಂಡು ಉಂಡು, ಹೊಸಬಟ್ಟೆಯುಟ್ಟು ಮನೆಯಲ್ಲಿಯೇ ಪೂಜೆ-ಪುರಸ್ಕಾರ ಮಾಡಿ, ಹೆಂಡತಿ ಮಕ್ಕಳೊಡನೆ ಗುಡಿಗೆ ಹೋಗುವುದಕ್ಕೆ ಹಿಂದುಗಳ ಹಬ್ಬಗಳು ಸೀಮಿತವಾಗಿರುತ್ತವೆ. ಹಿಂದೂಯೇತರ ಹಬ್ಬಗಳು ನಮಾಜ್-ಮಸೀದಿ-ಚರ್ಚ್‌ಗಳ ಸುತ್ತ ಕೇಂದ್ರೀಕೃತವಾಗಿ ಸಾರ್ವತ್ರಿಕ ಸ್ವರೂಪ ಪಡೆಯುತ್ತವೆ ಮತ್ತು ತನ್ಮೂಲಕ ಸಂಘಟನೆಗೆ ಕಾರಣವಾಗುತ್ತವೆ.

ಸಂಸ್ಕಾರ ದೃಷ್ಟಿಯಿಂದಲೂ ಹಿಂದುಗಳ ದೇವಾಲಯ ಸಂದರ್ಶನ ಸೋಲುತ್ತವೆ. ಒಬ್ಬೊಬ್ಬರು ಒಂದು ಸಮಯಕ್ಕೆ ಹೋಗುವರು - ಬರುವರು. ವಿಶೇಷ ದಿನಗಳಂದು ಕ್ಯೂ ನಿಂತೇ ಬಳಲಿ ಬೆಂಡಾಗುವರು. ಒಂದು ದಿವಸ ಬೆಂಗಳೂರಿನಲ್ಲಿ ಕಾರಿನಲ್ಲಿ ಬರುತ್ತಿದ್ದೆ. ಒಂದು ವೈಷ್ಣವ ದೇವಾಲಯದ ಬಳಿ ಕ್ಯೂ ಸುಮಾರು 2 ಕಿಲೋಮೀಟರು ದೂರವಿತ್ತು. ಕೆಟ್ಟ ಬಿಸಿಲು ಮೇಲೆ ಸುಡುತ್ತಿತ್ತು. ಕ್ಯೂ ನಿಂತವರ ಬಳಿ ತಂಪು ಪಾನೀಯಗಳ, ಹಣ್ಣುಗಳ ವ್ಯಾಪಾರ ಸಾಗಿತ್ತು. ಅಂದು ದೇವಾಲಯದಲ್ಲಿರುವ ಒಂದು





ಧಾರವಾಡದಲ್ಲಿ ದಿನಾಂಕ 10-3-1994 ರಂದು ಮಹಾಶಿವರಾತ್ರಿ ಯಂದು ನಡೆದ ಗಣ ಮೇಳದಲ್ಲಿ ಭಾಗಿಯಾದ ಶರಣ ಸಮೂಹ

ಬಾಗಿಲು ವೈಕುಂಠ ಬಾಗಿಲು ತೆರೆಯುವುದಂತೆ. ಆದರಲ್ಲೇ ಎಲ್ಲರೂ ಹಾದು ಹೋಗಬೇಕಂತೆ. ಇದರಿಂದ ವೈಕುಂಠ ಪ್ರಾಪ್ತಿ ಕಟ್ಟಿಟ್ಟ ಬುತ್ತಿಯಂತೆ. ಈ ಸುಡುಬಿಸಿಲಿನಲ್ಲಿ ಕ್ಯೂ ನಿಂತು ಬಳಲುವ ಬದಲು ಮನೆಯಲ್ಲೇ ಪೂಜೆ ಮಾಡಬಹುದು ಅಥವಾ ಸಾಮೂಹಿಕವಾಗಿ ಎಲ್ಲರೂ ಕುಳಿತು ಪ್ರಾರ್ಥಿಸಬಹುದು. ಹಿಂದೂ ಹಬ್ಬಗಳಲ್ಲಿ ಬಳಲಿಕೆಯೇ ಜಾಸ್ತಿ.

ಆದ್ದರಿಂದ ಪ್ರತಿ ಶರಣ ಸಂಸ್ಕೃತಿಯ ಹಬ್ಬಗಳಲ್ಲೂ ನಾವು ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗಪೂಜೆ, ಅನುಭವ ಗೋಷ್ಠಿ, ಮುಂತಾದುವುಗಳನ್ನು ಏರ್ಪಡಿಸಿ ಸಂಘಟನೆ ತನ್ಮೂಲಕ ಸಂಸ್ಕಾರ ನೀಡುವಂತಾಗಬೇಕು. ಉತ್ಸವ ಪ್ರೀಯತೆಯ ಮನೋಭಾವ ತೊರೆದು ತತ್ತ್ವಪ್ರೀಯತೆಯನ್ನು ಬೆಳೆಸಿಕೊಳ್ಳಬೇಕು.

ಮಾಲಾರ್ಪಣೆ ಬೇಡ.

ಶರಣ ಬಂಧುಗಳೇ, ಗಣ ಮೇಳದ ಕಾರ್ಯಕ್ರಮದಲ್ಲಿ ಯಾವುದೇ ವ್ಯಕ್ತಿಗೆ ಮಾಲಾರ್ಪಣೆ ಮಾಡಬೇಡಿರಿ. ಯಾರಾದರೂ ಗಣ್ಯರು, ಹಿರಿಯರು, ಗೌರವಾನ್ವಿತರು ಬಂದಿದ್ದರೆ, ಅವರಿಗೆ ಮಾಲಾರ್ಪಣೆ ಮಾಡದೇ, ಅವರಿಂದ ಶ್ರೀಗುರು ಬಸವಣ್ಣನವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿಸುವ ಮೂಲಕ ಅತಿಥಿಗಳನ್ನು ಗೌರವಿಸಿರಿ. ಇದನ್ನು ಕಡ್ಡಾಯವಾಗಿ ಪಾಲಿಸಿರಿ.

ಮಾಲಾರ್ಪಣೆಗೆ ಅವಕಾಶ ಕೊಟ್ಟರೆ ಬೇರೆ, ಬೇರೆ ಸ್ವಾಮಿಗಳ ಶಿಷ್ಯರು ಅವರವರ ಗುರುಗಳಿಗೆ ಮಾಲಾರ್ಪಣೆ ಮಾಡುವುದರಲ್ಲಿ ಸ್ಪರ್ಧೆ ತೋರಿಸಿ, ಪ್ರತಿಷ್ಠೆ ಪ್ರದರ್ಶಿಸುವರು. ತತ್ತ್ವನಿಷ್ಠೆ - ಶಿಸ್ತು ಕಳೆಯುವರು.

ಮುಖಸ್ತುತಿ ಬೇಡ

ಗಣಮೇಳದ ವೇದಿಕೆಯ ಮೇಲೆ ಯಾರೂ, ಯಾರ ಮುಖಸ್ತುತಿಯನ್ನೂ ಮಾಡಬಾರದು. ಸ್ತುತಿ ಮತ್ತು ಹೊಗಳಿಕೆ ಕೇವಲ ಸೃಷ್ಟಿಕರ್ತ ಮತ್ತು ಧರ್ಮಕರ್ತರಿಗೆ ಮಾತ್ರ ಮೀಸಲಾಗಿರಬೇಕು. ಈ ಕಾರ್ಯಕ್ರಮಕ್ಕೆ ಬರುವ ಯಾರೇ ಆಗಲಿ, ಕರ್ತವ್ಯ ಪ್ರಜ್ಞೆಯಿಂದ ದೇವರು - ಧರ್ಮಗುರುವನ್ನು ಸ್ತುತಿಸಿ, ತತ್ತ್ವಚಿಂತನೆ ಮಾಡಲು ಬರಬೇಕೇ ವಿನಃ ಹೊಗಳಿಸಿಕೊಳ್ಳಲು ಅಲ್ಲ. ಲೌಕಿಕವಾಗಿ ಹಣ, ಅಧಿಕಾರ, ಅಂತಸ್ತಿನಿಂದ ಎಷ್ಟೇ ದೊಡ್ಡವರಿರಲಿ, ಸೃಷ್ಟಿಕರ್ತ - ಧರ್ಮಗುರುವಿನ ಮುಂದೆ ಎಲ್ಲರೂ ಕಿಂಕರರಾಗಿರಬೇಕು.

ಹೆಸರು ಹೇಳಿ ಹೊಗಳುವುದಿಲ್ಲ

ಇಂದು ಇಲ್ಲಿ ಆಚರಿಸಿ ತೋರಿಸಿರುವ ಗಣಮೇಳ ಮಾದರಿಯಾಗಿ ಮಾರ್ಗದರ್ಶನ ಮಾಡಬೇಕು. ಮೊಟ್ಟಮೊದಲನೆಯ ಗಣಮೇಳವಾದರೂ, ಅಭೂತಪೂರ್ವವಾಗಿ ಯಶಸ್ಸು ಹೊಂದಿದೆ. ಈ ಯಶಸ್ಸಿಗೆ ನೀವುಗಳು ಬಹಳ ಜನ ಹಗಲಿರುಳು - ತನು - ಮನ - ಧನಗಳಿಂದ ದುಡಿದಿರುವುದೇ ಮುಖ್ಯ ಕಾರಣ. ಆದರೆ ನಾನು ಯಾರ ಹೆಸರನ್ನೂ ಹೇಳುವುದಿಲ್ಲ. ಒಂದು, ಒಬ್ಬರ ಹೆಸರು ಹೇಳಿ ಮಾನವ ಸಹಜ ಮರೆವಿನಿಂದ ಇನ್ನೊಬ್ಬರ ಹೆಸರು ಮರೆತರೆ, ಇದೇ ನಿಮ್ಮಲ್ಲಿ ರಾಗ - ದ್ವೇಷ,

ಪ್ರೀತಿ - ಮುನಿಸುಗಳಿಗೆ ಕಾರಣವಾಗಬಹುದು. ಎರಡನೆಯದು, ನಮ್ಮ ಕರ್ತವ್ಯ ನಾವು ಮಾಡಿ ಮನೆಯ ಮಕ್ಕಳಾಗಿ ಮಾಡಿದ ಕೆಲಸಕ್ಕೆ ಹೊಗಳಿಕೆ ಏಕೆ ಬಯಸಬೇಕು ? ಬಸವ ಮಹಾಮನೆಯ ಮಕ್ಕಳಾದ ನಮಗೆ ಯಾರ ಹೊಗಳಿಕೆಯೂ ಬೇಕಿಲ್ಲ. ನಮ್ಮ ಅಂತಃಸಾಕ್ಷಿಗೆ ಅನುಗುಣವಾಗಿ ನಾವು ಕಾರ್ಯ ಮಾಡಬೇಕು. ಗಣ ಮೇಳಕ್ಕೆ ದುಡಿಯುವುದು ನಮ್ಮ ಆದ್ಯ ಕರ್ತವ್ಯ ಎಂದು ಭಾವಿಸಬೇಕು. ಬ್ರಹ್ಮಾಂಡಕ್ಕೆ ಬೆಳಕು ಕೊಡುವ ಸೂರ್ಯ ಉದಿಸುವಾಗ ಕೊಂಬು ಕಹಳೆ ನಿರೀಕ್ಷಿಸುವನೇ ? ಮೌನವಾಗಿ ಅರಳುವ ಹೂವು ಯಾವ ಬಾಜಾ ಭಜಂತ್ರಿಯನ್ನು ನಿರೀಕ್ಷಿಸುವುದು ? ಸೃಷ್ಟಿಕರ್ತನ ಉದಾರ ಕೊಡುಗೆ ಧರ್ಮಗುರು ಬಸವಣ್ಣನವರ ತ್ಯಾಗದ ಮುಂದೆ ನಮ್ಮದೆಲ್ಲ ಯಾವ ತ್ಯಾಗ.

ಸೇವಾವಕಾಶ

ಗಣಮೇಳದ ಸಮಯದಲ್ಲಿ ಸೇವಾವಕಾಶ ದೊರಕಿಸಿಕೊಳ್ಳಿರಿ.

೧. ಪ್ರಚಾರ - ಹೆಚ್ಚಿನ ಜನ ಗಣಮೇಳದಲ್ಲಿ ಪಾಲ್ಗೊಳ್ಳಲು ಪ್ರಚಾರ ಮಾಡಿರಿ. ಪ್ರೇರೇಪಿಸಿರಿ. ಇದು ಎಲ್ಲ ಅನುಯಾಯಿಗಳ ಕರ್ತವ್ಯ ಎಂಬುದನ್ನು ಮನಗಾಣಿಸಿ ಕೊಡಿರಿ. ನಿಮ್ಮ ಕೈಲಾದಷ್ಟು ಕರಪತ್ರ ಮುದ್ರಿಸಿರಿ, ಹಂಚಿರಿ.

೨. ನಿಮ್ಮ ಬಳಿ ವಾಹನಗಳಿದ್ದರೆ, ಉಚಿತವಾಗಿ ಜನರನ್ನು ಕರೆದುಕೊಂಡು ಬಂದು ಬಿಡುವ ಸೇವೆ ಮಾಡಿರಿ. ಕಾರು, ಜೀಪು, ವ್ಯಾನು, ಲಾರಿಗಳಲ್ಲಿ ಜನರನ್ನು ಪ್ರಾರ್ಥನೆಗೆ ಕರೆತರುವ, ಒಯ್ದು ಬಿಡುವ ಪವಿತ್ರ ಕಾರ್ಯ ಮಾಡಿರಿ.

೩. ಗಣಮೇಳದ ಪ್ರಾರ್ಥನೆ ಮತ್ತು ಮಂಗಲದ ನಂತರ ಹಂಚಲು ಪ್ರಸಾದ ವ್ಯವಸ್ಥೆಗೆ ನಿಮ್ಮ ಕೈಲಾದಷ್ಟು ನೆರವು ನೀಡಿರಿ. ಬಿಸಿಲಿನಲ್ಲಿ ಬಳಲುವವರಿಗೆ ಕುಡಿಯುವ ನೀರು ಒದಗಿಸುವುದು, ಹಣ್ಣು ಹಂಚುವುದು, ಮುಂತಾಗಿ ಮಾಡಿರಿ. ಯಾವುದಕ್ಕೂ ಹೊಗಳಿಕೆ ನಿರೀಕ್ಷಿಸದೆ ಧರ್ಮಗುರು ಬಸವಣ್ಣನವರ ಮನಮೆಚ್ಚುವಂತೆ ಕಾರ್ಯಮಾಡಿರಿ.

ಗುರು ಕಾಣಿಕೆ

ಗಣಮೇಳದಲ್ಲಿ ಪ್ರಾರ್ಥನೆ ನಡೆದಾನಂತರ ಸಂದೇಶವಾಚನ ನಡೆಯುವಾಗ, ಗುರು ಕಾಣಿಕೆಗಾಗಿ, ಕಾರ್ಯಕರ್ತರು ಬಿಂದಿಗೆ ಹಿಡಿಯಬೇಕು. ಪ್ರತಿಯೊಬ್ಬರೂ ತಮ್ಮ ತಮ್ಮ ಕೈಲಿ ಶಕ್ತಿ ಇರುವಷ್ಟು ಧನ ದಾಸೋಹ ಮಾಡಬೇಕು. ಧನ ದಾಸೋಹ ಧರ್ಮವಂತಿಕೆಯ ಅವಿಭಾಜ್ಯ ಅಂಗ ಎಂಬ ನಂಬಿಕೆ ಬೆಳೆಸಿಕೊಳ್ಳಬೇಕು. ಈ ಪವಿತ್ರನಿಧಿಯನ್ನು ಕಾರ್ಯಕ್ರಮದ ಖರ್ಚು - ವೆಚ್ಚಕ್ಕೆ ಬಳಸಿಕೊಳ್ಳಬೇಕು.

ದ್ವೇಷ - ವಿರಸ ಮರೆಯಿರಿ.

ಪರಸ್ಪರರಲ್ಲಿರುವ ಭಿನ್ನಾಭಿಪ್ರಾಯ, ದ್ವೇಷ, ವಿರಸ ಮರೆತು ಪುನಃ ಗಣಸಂಬಂಧವನ್ನು ಸ್ಥಾಪಿಸಿಕೊಳ್ಳಲು ಅಥವಾ ಸ್ಥಿರೀಕರಿಸಿಕೊಳ್ಳಲು ಗಣಮೇಳ ಉತ್ತಮ ಕಾರ್ಯಕ್ರಮವಾಗಿ ಭಾವೈಕ್ಯತೆಗೆ ನಾಂದಿ ಹಾಡಬೇಕು. ಪ್ರಾರ್ಥನಾ ನಂತರ ಪರಸ್ಪರ

ಶರಣು ವಿನಿಮಯ ಮಾಡಿಕೊಳ್ಳಿರಿ. ಕಲ್ಲುಸಕ್ಕರೆ ಹಂಚಿಕೊಂಡು ತಿನ್ನಿರಿ. ಹೀಗೆ ಮಾಡುವಾಗ ಯಾರು ನಿಮ್ಮ ಶತ್ರುಗಳು, ಆಗದವರು, ಎಂದು ಭಾವಿಸಿದ್ದೀರೋ, ಅವರನ್ನೇ ಹುಡುಕಿ ಹುಡುಕಿ ಶರಣು ಸಲ್ಲಿಸಿರಿ, ಪ್ರಸಾದ ವಿನಿಮಯ ಮಾಡಿಕೊಳ್ಳಿರಿ. ಧರ್ಮಪಿತರ ಆದೇಶ ಹೀಗಿದೆ.

ಕಾಮವೇಕೊ ಲಿಂಗಪ್ರೇಮಿ ಎನಿಸುವಂಗೆ ?
ಕ್ರೋಧವೇಕೊ ಶರಣವೇದ್ಯ ಎನಿಸುವಂಗೆ ?
ಲೋಭವೇಕೋ ಭಕ್ತಿಲಾಭವ ಬಯಸುವಂಗೆ ?
ಮೋಹವೇಕೊ ಪ್ರಸಾದ ವೇದ್ಯನೆನಿಸುವಂಗೆ ?
ಮದಮತ್ಸರ ಉಳ್ಳವರಿಗೆ ಹೃದಯ ಶುದ್ಧಿ ಎಲ್ಲಿಯದೋ ?
ಹದುಳಿಗರಾದಲ್ಲಿಪ್ಪ ನಮ್ಮ ಕೂಡಲ ಸಂಗಮದೇವ.

ಪ್ರತಿ ಗಣಮೇಳವೂ ಹಿಂದಿನ ವಿರಸಗಳ ಕೊನೆಗೊಳಿಸಿ ಹೊಸದಾದ ಭಕ್ತಿ ಬಾಂಧವ್ಯ ಬೆಸೆಯುವಂತಾಗಬೇಕು.

ಕ್ರಿಯಾ ಮೂರ್ತಿಯ ಸ್ಥಾನ

ಗಣಮೇಳ ಮತ್ತು ಸಾಮೂಹಿಕ ಪ್ರಾರ್ಥನೆ ಮಾಡಿಸುವಾಗ ಯಾರಾದರೊಬ್ಬರು ಕ್ರಿಯಾಮೂರ್ತಿ (ನಿರ್ವಾಹಕ) ಯಾಗಿ ಕಾರ್ಯವನ್ನು ನಿರ್ವಹಿಸಬಹುದು. ಅವರ ಜೊತೆ ನಿಮ್ಮ ಸಂಬಂಧ ಅಷ್ಟೊಂದು ಸ್ನೇಹಪೂರ್ಣವಾಗಿರಲಿಕ್ಕಿಲ್ಲ. ಆದರೆ ನೀವು ಅದನ್ನು ಪರಿಗಣಿಸಬಾರದು. ಅವರ ಸ್ಥಾನ ಗೌರವ ಅರಿತು ನಡೆಯಬೇಕು. ಆ ಸ್ಥಳದಲ್ಲಿ ಕುಳಿತು ಕ್ರಿಯಾಮೂರ್ತಿಯ ಸಮವಸ್ತ್ರವನ್ನು ಹೊದ್ದು ಅವರು ನಿರ್ವಹಿಸುವ ಕಾರ್ಯದಲ್ಲಿ ನೀವು ಶ್ರದ್ಧೆಯಿಂದ ತೊಡಗಿಸಿಕೊಳ್ಳಬೇಕು. ಇಲ್ಲಿ ವ್ಯಕ್ತಿ ನಿಮಿತ್ತ ಮಾತ್ರ. ಇದಕ್ಕೊಂದು ಪೌರಾಣಿಕ ಪ್ರಸಂಗ ಹೇಳುವೆ.

ಒಮ್ಮೆ ಏನೋ ಕೆಲಸವಹಿಸಿ ವಿಷ್ಣುವು ಗರುಡನನ್ನು ದೂತನನ್ನಾಗಿ ಕೈಲಾಸಕ್ಕೆ ಕಳಿಸಿದನಂತೆ. ಗರುಡ ಬಂದಾಗ ಶಿವನು ಉನ್ನತಾಸನದಲ್ಲಿ ಇದ್ದ. ಗರುಡ ವಂದಿಸಿ ನಿಂತಾಗ, ಶಿವನ ಕೊರಳಲ್ಲಿದ್ದ ಸರ್ಪ ಗರುಡನನ್ನು ಕಂಡು ಬುಸುಗುಟ್ಟಿದ. ಆದರೆ ಗರುಡ ಸರ್ಪವು ಆಶ್ರಯಿಸಿದ್ದ ಸ್ಥಾನದ ಮಹಿಮೆಯನ್ನರಿತು ಸುಮ್ಮನಾದನಂತೆ. ಹಾಗೆಯೇ, ಪ್ರಾರ್ಥನೆ ನಿರ್ವಹಣೆ ಮಾಡಲು, ಧರ್ಮಗುರುವಿನ ಪ್ರತಿನಿಧಿಯಾಗಿ ಕುಳಿತವನು ಶತ್ರುವೇ ಇದ್ದರೂ ಅದನ್ನು ತೋರ್ಪಡಿಸದೇ, ದ್ವೇಷಿಸದೇ ಪ್ರಾರ್ಥನೆ ಮಾಡಬೇಕು.

ಒಂದು ನಾಟಕವಿದೆ, ಎಂದು ಕೊಳ್ಳಿರಿ. ಅದರಲ್ಲಿ, ಓರ್ವನು ನಾಯಕ, ಇನ್ನೋರ್ವನು ಖಳನಾಯಕ. ನಾಟಕ ರಂಗದ ಮೇಲೆ ಪರಸ್ಪರ ವಾದ ಮಾಡುವ್ವುರು. ಹೊಡೆದಾಡುವರು. ರಂಗದಿಂದ ಕೆಳಗೆ ಇಳಿಯುತ್ತಲೇ ಪರಸ್ಪರ ಸ್ನೇಹಪೂರ್ಣವಾಗಿ ಮಾತನಾಡುವರು. ಇಂಥ ಸಾಮಾನ್ಯ ಮಾನವರಲ್ಲಿರುವ ಸಹೃದಯತೆ ಧಾರ್ಮಿಕ ಜನರಲ್ಲಿ ಇಲ್ಲದಿದ್ದರೆಂತು. ವಿಶಾಲ ಹೃದಯವಂತಿಕೆ ಬೆಳೆಸಿಕೊಳ್ಳಬೇಕು.

ಏಕ ಗುರೂಪಾಸನೆ

ಶರಣ ಬಂಧುಗಳೇ, ಇಂದು ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶರ ದಿವ್ಯ ಸನ್ನಿಧಿಯಲ್ಲಿ, ಎಲ್ಲ ಶರಣ ಗಣ ಸಾಕ್ಷಿಯಾಗಿ ಒಂದು ವಿಚಾರವನ್ನು ಮುಂದಿಡಬಯಸುವೆ. ಬಸವ ಗುರುವು ನಮಗೆ ಪಂಚ ಆಚಾರಗಳೆಂಬ ನೀತಿ ಸಂಹಿತೆ ಕೊಟ್ಟರು. ಪಂಚ ಆಚಾರ ಎಂಬ ಪದವನ್ನು ಮುಗ್ಧರ ಮುಂದೆ ದುರ್ಬಳಕೆ ಮಾಡುತ್ತ ಪಂಚ ಆಚಾರ್ಯರು ಎಂದು ತಿರುಚಿ ನುಡಿಯುವ ಧೂರ್ತರ ಸಂಖ್ಯೆ ಬೆಳೆಯುತ್ತಿರುವುದರಿಂದಲೂ ಮತ್ತು ಏಕ ಗುರು ನಿಷ್ಠೆಯಿಲ್ಲದೆ, ಸಮಾಜವು ದಾರಿ ತಪ್ಪುತ್ತಲಿರುವುದರಿಂದಲೂ, ಏಕ ಗುರುನಿಷ್ಠೆ ಮತ್ತು ಏಕ ಗುರೂಪಾಸನೆ ಎಂಬುದನ್ನು ಅಳವಡಿಸಬೇಕಾಗಿರುವುದರಿಂದಲೂ ಐದು ಆಚಾರಗಳ ಮೊದಲಿಗೆ ಧರ್ಮಾಚಾರ ಎಂಬ ಇನ್ನೊಂದು ಆಚಾರ ಸೇರಿಸಿಕೊಳ್ಳಬೇಕೆಂದು ಮಾಡಿರುವೆ. ಪೂಜ್ಯ ಗುರುಗಳೊಡನೆ ಚರ್ಚಿಸಲು ಅವಕಾಶ ಸಿಕ್ಕಿಲ್ಲ. ಆದ್ದರಿಂದ, ಇನ್ನು ಮುಂದೆ ಪಂಚ ಆಚಾರಗಳ ಬದಲು ಏಕ ಗುರುನಿಷ್ಠೆ ಎಂಬ **'ಧರ್ಮಾಚಾರ'**ವನ್ನೂ ಸೇರಿಸಿ ಷಡಾಚಾರಗಳನ್ನೂ ಅನುಷ್ಠಾನಿಸಲು ಪೂಜ್ಯರು ಒಪ್ಪಿಗೆ ನೀಡಬೇಕೆಂದು ಕೋರುವೆ.

ಪ್ರತಿ ಊರುಗಳಲ್ಲೂ ರಾಷ್ಟ್ರೀಯ ಬಸವ ದಳ ತೆರೆದು ಸಾಮೂಹಿಕ ಪ್ರಾರ್ಥನೆ ಮಾಡಿಸುವ ಸಂಕಲ್ಪ ಹೊಂದಿರಿ. ಈ ಸಲ ಗಣಮೇಳವು ನೂರಾರು ಕಡೆ ನಡೆದಿದೆ. ಮುಂದಿನ ವರ್ಷಗಳಲ್ಲಿ ಇನ್ನೂ ಹೆಚ್ಚು ಊರುಗಳಲ್ಲಿ ನಡೆಯುವಂತೆ ಆಗಬೇಕು. ಸಾಮೂಹಿಕ ಪ್ರಾರ್ಥನೆ ಮೂಲಕ ಸಂಘಟನೆ, ಸಾಮೂಹಿಕ ಲಿಂಗಪೂಜೆ ಮೂಲಕ ಉದಾತ್ತ ಸಂಸ್ಕಾರ ಸಾಧ್ಯವಾಗಬೇಕು ಎಂಬುದೇ ನಮ್ಮ ಆಶಯ. ನಿಮ್ಮೆಲ್ಲರಿಗೂ ಸೃಷ್ಟಿಕರ್ತ ಪರಮಾತ್ಮ ಮತ್ತು ಧರ್ಮಗುರು ಬಸವಣ್ಣನವರು ಆಯುರಾರೋಗ್ಯಭಾಗ್ಯ ಸಕಲ ಸಂಪತ್ತನ್ನು ದಯಪಾಲಿಸಲೆಂದು ಹೃತ್ಪೂರ್ವಕವಾಗಿ ಹಾರೈಸುವೆ.

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ಆಶೀರ್ವಚನ

ಶರಣ ಬಂಧುಗಳೇ, ಇಂದು ಪ್ರಪ್ರಥಮ ಗಣಮೇಳ ಹಲವಾರು ಕಡೆ ನಡೆಯುತ್ತಲಿದೆ. ತಾವೆಲ್ಲ ಅಧಿಕ ಸಂಖ್ಯೆಯಲ್ಲಿ ಸೇರಿದ್ದೀರಿ. ಈ ಕಾರ್ಯಕ್ರಮದ ಪರಿಕಲ್ಪನೆ ಪೂಜ್ಯ ಮಾತಾಜಿಯವರ ತಲೆಯಲ್ಲಿ ಮೂಡಿಬಂದದ್ದು ಬಹುಶಃ ಧರ್ಮಗುರು ಬಸವಣ್ಣನವರ ದಿವ್ಯ ಪ್ರೇರಣೆಯಿಂದಲೇ ಮೂಡಿಬಂದಿರಬೇಕು. ಆದಕ್ಕಾಗಿಯೇ ನಾನು ಗುರುವಾಗಿದ್ದರೂ, ಮಾತಾಜಿಯವರು ದಿವ್ಯಪ್ರೇರಣೆಯಿಂದ ಹಮ್ಮಿಕೊಳ್ಳುವ ಇಂಥ ಕಾರ್ಯಗಳಿಗೆ ಸಮ್ಮತಿ ನೀಡುವೆ.

ಗುರು ಬಸವಣ್ಣನವರು ಸ್ಥಾಪಿಸಿಕೊಟ್ಟದ್ದು ಲಿಂಗಾಯತ ಧರ್ಮ. ಅವರು ತಾವು ಕೊಟ್ಟ ಧರ್ಮಕ್ಕೆ ಹೆಸರಿಟ್ಟದ್ದು ಹೀಗೆಯೇ. ಶರಣ ಧರ್ಮ, ವಚನ ಧರ್ಮ, ಮುಂತಾದುವು ಸಮಾನಾರ್ಥದ ಪದಗಳು. ಆದರೆ, ಬಸವ ಧರ್ಮ ಎಂಬುದು ಅತ್ಯಂತ ಸೂಕ್ತಪದವಾದ ಕಾರಣ ನಾವು ಅದನ್ನೇ ಹೆಚ್ಚು, ಹೆಚ್ಚು ಬಳಕೆಗೆ ತರಬೇಕು. ಬಸವ ಧರ್ಮ ಎಂದಾಗ ಅದರ ಸ್ಥಾಪಕರಾರು, ಎಂಬ ಬಗ್ಗೆ ಗೊಂದಲವೇ ಉಳಿಯದು. ಬಸವ

ಧರ್ಮ ಎಂದು ಕರೆದಾಗ ಇದು ಬಸವಣ್ಣನವರಿಗೂ ಪೂರ್ವದಲ್ಲಿ ಇತ್ತು ಎಂದು ಯಾವ ಧೂರ್ತ ಪಂಡಿತನೂ ಸಾಧಿಸಲಾರ, ಮೂರ್ಖ ಭಕ್ತನೂ ಒಪ್ಪಲಾರ.

ಧರ್ಮಗುರು ನಿಷ್ಠೆ ಅತ್ಯಗತ್ಯ

ಜಗತ್ತಿನ ಇತರ ಧರ್ಮಗಳನ್ನು ನೋಡಿ ಅವರು ಧರ್ಮಗುರು - ಧರ್ಮಗ್ರಂಥ
ಎಂಬ ಎರಡು ಸೂತ್ರ ಹಿಡಿದು ಹೇಗೆ ಸಮಾಜ ಕಟ್ಟಿದ್ದಾರೆ. ಈ ಎರಡು ಹಳಿಗಳ ಮೇಲೆ
ಅವರ ಸಮಾಜಗಳ ಟ್ರೇನು ಚೆನ್ನಾಗಿ ಓಡುತ್ತವೆ. 'ಬುದ್ಧ - ತ್ರಿಪೀಟಕ', 'ಏಸು -
ಬೈಬಲ್', 'ಮಹಮ್ಮದ್ - ಕುರಾನ್', ಇದೇ ರೀತಿ 'ಬಸವಣ್ಣ-ವಚನ ಸಾಹಿತ್ಯ' ಈ
ಹಳಿಗಳ ಮೇಲೆ ನಾವು ಸಾಗಬೇಕು.

ನಮ್ಮ ಸಮಾಜದ ಶಿಥಿಲತೆಗೆ ಸ್ಥಾನಿಕ ಪಂಥ (Loco-cults) ಗಳೇ ಕಾರಣ.
ದೀಕ್ಷಾಗುರು ಭಕ್ತಿ, ಸ್ಥಾನಿಕ ಗದ್ದುಗೆಗಳು, ಸ್ಥಳೀಯ ಮಠಗಳು, ಅಖಂಡ ಸಮಾಜದ
ರಚನೆಗೆ ಆತಂಕವಾಗಿವೆ. ಅದು ಪೀಟರ್ಸ್ ಚರ್ಚ್ ಇರಲಿ, ಪಾಲ್ಸ್ ಚರ್ಚ್ ಇರಲಿ,
ಒಳಗೆ ಆರಾಧಿಸುವುದು ಜೀಸಸನನ್ನು, ಓದುವುದು ಬೈಬಲನ್ನು, ಇಲ್ಲಿ ಹಾಗಲ್ಲ.
ಗದ್ದುಗೆಯ ಕರ್ತೃಗಳೇ ಧರ್ಮಗುರುವಿಗಿಂತ ಶ್ರೇಷ್ಠ ಎಂಬ ಪ್ರಚಾರ. ಒಂದೊಂದು
ಚರ್ಚ್ ಆದಷ್ಟೂ ಆ ಧರ್ಮ ಬಲಗೊಳ್ಳುತ್ತದೆ. ಒಂದು ಮಸೀದಿ ಆದಷ್ಟು ಆ ಧರ್ಮ
- ಸಮಾಜ ಧೃಢಗೊಳ್ಳುತ್ತವೆ. ನಮ್ಮಲ್ಲಿ ಒಬ್ಬೊಬ್ಬ ಗುರು, ಒಂದೊಂದು ಮಠ ಆದಷ್ಟು
ಸಮಾಜದ ಶಕ್ತಿ ಛಿದ್ರಗೊಳ್ಳುತ್ತದೆ. ಆದ್ದರಿಂದ ನಾವು ಇತರ ಜಾಗತಿಕ ಧರ್ಮಗಳನ್ನು
ನೋಡಿ, ಸಂಘಟನಾ ಶಕ್ತಿ ಬೆಳೆಸಿಕೊಳ್ಳಬೇಕಾಗಿದೆ. ಸ್ಥಾನಿಕ ಪಂಥಗಳು ಧರ್ಮಗುರು
ನಿಷ್ಠೆ ಬೆಳೆಸಲು ಸಹಕಾರಿಯಾಗುವಂತೆ ರೂಪಿಸಬೇಕಾಗಿದೆ.

ಪೂಜ್ಯ ಮಾತಾಜಿಯವರು ಏಕ ಗುರುನಿಷ್ಠೆಯ ಬಗ್ಗೆ ಹೇಳಿ, ಪಂಚ
ಆಚಾರಗಳಾದ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರಗಳ
ಜೊತೆಗೆ ಏಕಗುರು ನಿಷ್ಠೆಯ ಬಗ್ಗೆ ಹೇಳುವ ಧರ್ಮಾಚಾರವನ್ನು ಸೇರಿಸಿದರು. ಈ
ಬಗ್ಗೆ ನಾನು ಅದೇ ರೀತಿ ಆಲೋಚಿಸುತ್ತಿದ್ದೆ. ಆದರೆ ನನ್ನ ಸ್ಪಷ್ಟ ಸಲಹೆ ಎಂದರೆ
'ಧರ್ಮಾಚಾರ' ಎಂದು ಅಸ್ಪಷ್ಟ ಪದದಿಂದ ಕರೆಯದೇ ಈ ಏಕಗುರುನಿಷ್ಠೆಯನ್ನು
'ಬಸವಾಚಾರ' ಎಂದು ಖಚಿತವಾಗಿ ಹೇಳಬೇಕು. ಏಕೆಂದರೆ ಪುನಃ ಧೂರ್ತರು
ಧರ್ಮಾಚಾರ ಎಂಬಲ್ಲಿ ಬೇರೆ ಬೇರೆ ದೀಕ್ಷಾಗುರುಗಳನ್ನು ಇಟ್ಟು ತಾತ್ತ್ವಿಕ ಶಿಥಿಲತೆ
ಉಂಟು ಮಾಡುವ ಸಂಭವವಿರುತ್ತದೆ. ಆದ್ದರಿಂದ ಸೂತ್ರೀಕರಿಸುವಾಗಲೇ ದೇವರನ್ನು
ಕುರಿತ ನಿಷ್ಠೆಯನ್ನು **'ಲಿಂಗಾಚಾರ'** ಎಂದಂತೆ, ಬಸವಗುರು ನಿಷ್ಠೆಯನ್ನು ಬಸವಾಚಾರ
ಎನ್ನಬೇಕು. ಪೂಜ್ಯ ಮಾತಾಜಿ ಸೂಚಿಸಿದಂತೆ ಬಸವಾಚಾರವೇ ಮೊದಲ ಆಚಾರವಾಗಿ,
ಕ್ರಮವಾಗಿ ಉಳಿದವು ಬರಬೇಕು. ಗುರು ಬಸವಣ್ಣನಿಂದಲೇ ಏಕೇಶ್ವರವಾದಕ್ಕೆ ಒತ್ತು
ಸಿಕ್ಕಿದ್ದು, ಮತ್ತು ಇಷ್ಟಲಿಂಗವು ಅರ್ಚನೆಗೆ ಪ್ರಾಪ್ತಿಯಾದುದು.

ಲಿಂಗವಂತ ಸಮಾಜವು ಗಟ್ಟಿಯಾದ ಬುನಾದಿಯ ಮೇಲೆ ಧ್ರುವೀಕರಣ
ಹೊಂದಬೇಕು. ಸಮನ್ವಯ ಮಾಡುತ್ತೇವೆಂದು ಪರಸ್ಪರ ವಿರುದ್ಧವಾದ ಎರಡು
ವಿಚಾರಧಾರೆಯನ್ನು ಮಿಶ್ರಣ ಮಾಡಲಿಕ್ಕಾಗದು. ಕಮ್ಯುನಿಸಂ ಮತ್ತು ಭಾ.ಜ.ಪ.
ಎಂದಾದರೂ ಸೈದ್ಧಾಂತಿಕವಾಗಿ ಒಂದಾಗಲು ಸಾಧ್ಯವೇ ? ಬಸವಣ್ಣನವರೇ

ಧರ್ಮಗುರು - ವಚನ ಸಾಹಿತ್ಯವೇ ಧರ್ಮಶಾಸ್ತ್ರ ಎಂಬ ಧೃಢ ನಿಲುವು ಹೊಂದಿದವರು ಒಟ್ಟಾಗಿ ಪರಿಶುದ್ಧ ಸಮಾಜವನ್ನು ಕಟ್ಟ ಬೇಕಾಗಿದೆ. ಇದನ್ನೊಪ್ಪದ ವೀರಶೈವರನ್ನೂ ನಾವೇನೂ ದ್ವೇಷಿಸುವುದಿಲ್ಲ. ಆದರೆ ಅವರು ನಮಗೆ ಸ್ವಧರ್ಮೀಯರಾಗರು, ಬಹಳವೆಂದರೆ ಸ್ನೇಹಿತರಾಗುವರು. ಪಂಚಾಚಾರ್ಯವಾದಿಗಳು, ಬಸವಣ್ಣನವರನ್ನು ಧರ್ಮಗುರು ಎಂದು ಒಪ್ಪದಿದ್ದರೆ ಬಿಡಲಿ. ಆದರೆ ನಮ್ಮ ಬಸವಣ್ಣನವರನ್ನು ಅಪ್ಪ ಅನ್ನದ ಮೇಲೆ ವಚನ ಸಾಹಿತ್ಯದ ಆಸ್ತಿಯನ್ನು ಬಳಸಿಕೊಳ್ಳಲು ಹೋಗಬಾರದು.

ಈಗ ಕಂಡಕಂಡವರ ಹೆಸರಿಗೆಲ್ಲ ನಮಃ ಜೋಡಿಸಿ ಮಂತ್ರ ಪುರುಷರನ್ನಾಗಿ ಮಾಡಲಾಗುವುದು. ಇದು ತಪ್ಪು. ಒಂದು ಹೊಸ ಧರ್ಮಪಥವನ್ನು ಹಾಕಿಕೊಟ್ಟ ಆದಿಗುರು ಮಾತ್ರ ಮಂತ್ರಪುರುಷನಾಗುವನು. ದೀಕ್ಷಾಗುರು - ಶಿಕ್ಷಾಗುರು - ಮೋಕ್ಷಗುರು ಎಂದು ಗುರುಗಳಲ್ಲಿ ಮೂರು ಪ್ರಕಾರ ಉಂಟು. ದೀಕ್ಷಾಗುರುವು ವ್ಯಕ್ತಿಗೆ ಒಬ್ಬನೇ, ಶಿಕ್ಷಾಗುರುಗಳು ಹಲವರು ಇರಬಹುದು. ಮೋಕ್ಷಗುರು ಆ ಧರ್ಮದ ಮೂಲ ಪುರುಷ. ಅವನೂ ಒಬ್ಬನೇ. ನಮಗೆ ಮೋಕ್ಷಗುರು ಬಸವಣ್ಣನೊಬ್ಬನೇ ಮಂತ್ರ ಪುರುಷ. ಗುರುವಿನ ಪೂಜೆ, ಪ್ರಾರ್ಥನೆ - ಧ್ಯಾನದಿಂದ ಸಮಾಜವನ್ನು ಕಟ್ಟಬೇಕು.

ಬಸವ ಗುರುಪೂಜೆ

ನಿಮಗೆ ಬಹುಜನರಿಗೆ ಗೊತ್ತು, ಮೊದಲು ನಾನು ಕೇವಲ ಲಿಂಗಪೂಜೆಯನ್ನು ಏಕದೇವನಿಷ್ಠೆಯ ಅಂಗವಾಗಿ ಹೇಳುತ್ತಿದ್ದೆ. ಲಿಂಗವಂತರು ತಮ್ಮ ಧರ್ಮಗುರುವಿನ ಉಪಾಸನೆ ಬಿಟ್ಟು ಕಂಡಕಂಡ ಮಾರ್ಗಗಳಿಗೆ ಧಾವಿಸುವುದನ್ನು ಕಂಡು, ಬಸವ ಗುರುಪೂಜೆಯನ್ನು ೧೯೭೭ರಲ್ಲಿ ಬಳಕೆಗೆ ತಂದೆವು. ಇದನ್ನು ಬಸವಣ್ಣನವರು ಹೇಳಲಿಲ್ಲವಾದರೂ ಸಿದ್ಧರಾಮೇಶ್ವರರು ಹೇಳಿದರು.

ಬಸವನ ಮೂರ್ತಿಯೆ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೆ ಜ್ಞಾನಕ್ಕೆ ಮೂಲ
ಬಸವ ಬಸವಾ ಎಂಬುದೇ ಭಕ್ತಿ ಕಾಣಾ
ಕಪಿಲ ಸಿದ್ಧಮಲ್ಲಿಕಾರ್ಜುನ.

ಒಂದೊಂದು ರೀತಿಯ ಕಾಯಿಲೆ ಎರಗಿದಾಗ ವೈದ್ಯ ವಿಜ್ಞಾನಿಗಳು ಒಂದೊಂದು ಬಗೆಯ ಔಷಧಿ ಕಂಡು ಹಿಡಿಯುವರು. ಕ್ಷಯ ಇದ್ದಾಗ ಕ್ಷಯಕ್ಕೆ ಔಷಧಿ ಕಂಡು ಹಿಡಿದರು. ಈಗ ಏಡ್ಸ್ ಅನ್ನುವುದು ಸಮಾಜದ ಮೇಲೆ ಧಾಳಿ ಇಟ್ಟಿರುವುದರಿಂದ ಈಗ ಅದಕ್ಕೆ ಚಿಕಿತ್ಸೆ ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದಾರಷ್ಟೆ.ಬಸವಣ್ಣನವರ ಕಾಲದಲ್ಲಿ ಬಹುದೇವತೋಪಾಸನೆ ಒಂದು ರೋಗವಾಗಿದ್ದಾಗ, ಅವರು ಲಿಂಗಾಚಾರ ಎಂಬ ಮದ್ದು ನೀಡಿ ಏಕದೇವೋಪಾಸನೆ ಪ್ರತಿಪಾದಿಸಿದರು. ಈಗ ಲಿಂಗಾಯತ ಸಮಾಜಕ್ಕೆ ಬಹುಗುರೋಪಾಸನೆ ಎಂಬ ರೋಗ ಬಡಿದಿದೆ; ಅದಕ್ಕೆ ಈಗ ಏಕಗುರೂಪಾಸನೆ (monoguruism) ಅತ್ಯಗತ್ಯವಾಗಿದೆ. ಪತಿವ್ರತೆಯು ಗಂಡನನ್ನು ತ್ರಿಕರಣದಿಂದಲೂ ಆದರಿಸುವಳು. ಮಕ್ಕಳು ತ್ರಿಕರಣದಿಂದಲೂ ತಾಯಿತಂದೆಯರ ಸೇವೆ ಮಾಡುವರು. ಹಾಗೆಯೇ ನಾವು ಶರಣಸತಿ-ಲಿಂಗಪತಿ ಭಾವದಿಂದ ದೇವರನ್ನು, ಧರ್ಮಗುರು ಬಸವಣ್ಣನವರನ್ನು 'ಅಪ್ಪ' ನೆಂದು ಭಾವಿಸಿ ಆರಾಧಿಸಬೇಕು.

ಗುರು-ಲಿಂಗ-ಜಂಗಮ ತ್ರಿತತ್ವಗಳು ನಮಗೆ ಬಹಳ ಮುಖ್ಯ. ಇಂದು ಮಾತಾಜಿಯವರು ಒಂದು ಹೊಸ ಪ್ರಾರ್ಥನೆಯನ್ನು ಹೇಳಿಕೊಟ್ಟರು.

ಶ್ರೀ ಗುರುಬಸವಂಗೆ ಶರಣಾಗಿಹೆ
ಲಿಂಗದೇವನಿಗೆ ಶರಣಾಗಿಹೆ
ಶರಣಗಣಕ್ಕೆ ಶರಣಾಗಿಹೆ
ಗಣಪದವಿಯನ್ನು ನಾ ಹೊಂದಿದೆ.

ಕೇಳಿ ರೋಮಾಂಚನವಾಯಿತು. ನಿಜ, ಗಣಪದವಿ ಅಂದರೆ ಸಮಾಜದ ಸದಸ್ಯತ್ವ ಹೊಂದಬೇಕಾದರೆ ನಾವು ಗುರು ಬಸವಂಗೆ-ಲಿಂಗದೇವರಿಗೆ-ಶರಣ ಸಮೂಹಕ್ಕೆ ಶರಣಾಗಬೇಕು.

ಬಸವಾದಿಪ್ರಮಥರು "ಕಾಲ್ಪನಿಕ ದೇವತೆಗಳ ಪೂಜೆ ಬೇಡ. ಏಕೆಂದರೆ ದೇವತೆಗಳು ಪುರಾಣಕಾರರ ತಲೆಯಲ್ಲಿ ಮೂಡಿಬಂದ ಕಲ್ಪನೆಗಳು ಮಾತ್ರ" ಎಂದು ಸೃಷ್ಟಿಕರ್ತನನ್ನು ಪೂಜಿಸಲು ಹೇಳಿದರು. ದೇವತೆಗಳು ಎಂದರೆ ಬಂಜೆಯ ಮಕ್ಕಳಿದ್ದಂತೆ. ತಮಗೇ ಅಸ್ತಿತ್ವವಿಲ್ಲದ ಅವನ್ನು ಪೂಜಿಸಿದರೆ ನಮಗೆ ದೊರೆಯುವುದಾದರೂ ಏನು ? ಯಾರಿಗೆ ಜೀವನ, ಇತಿಹಾಸವಿದೆಯೋ ಯಾರು ಸಂದೇಶ ನೀಡಿದ್ದಾರೋ ಅವರನ್ನು ನಾವು ಪೂಜಿಸಬೇಕು. ಅವರಿಂದ ಜ್ಞಾನ-ಅನುಗ್ರಹಗಳನ್ನೂ ಪಡೆದುಕೊಳ್ಳಬೇಕು.

ನನ್ನನ್ನು ಓರ್ವರು ಕೇಳಿದರು, "ನಮಗೆ ದೀಕ್ಷೆ ಕೊಟ್ಟ ಗುರುಗಳು ಹೀಗೆ ಹೇಳಿದ್ದಾರೆ. ಎರಡೇ ಬೆರಳಿನಿಂದ ವಿಭೂತಿ ಹಚ್ಚಬೇಕು. ಗೃಹಸ್ಥರು ಮೂರು ಬೆರಳಿನಿಂದ ಹಚ್ಚಬಾರದು ಎಂದು. ನೀವುಗಳೋ ಎಲ್ಲರೂ ಯಾವ ಭೇದವೂ ಇಲ್ಲದೆ ಮೂರು ಬೆರಳಿನಿಂದ ಹಚ್ಚಬಹುದು ಎನ್ನುತ್ತೀರಿ. ಹೀಗಿರುವಾಗ ನಾವು ಯಾವುದನ್ನು ಅನುಸರಿಸಬೇಕು ?" ಆಗ ನಾನು ಹೇಳಿದೆ: "ನೀವು ಒಂದು ಕೇಸ್ ತೆಗೆದುಕೊಂಡು ಮೊದಲು ಜಿಲ್ಲಾಕೋರ್ಟಿಗೆ ಹೋಗುವಿರಿ. ನಂತರ ಹೈಕೋರ್ಟಿಗೆ, ಸುಪ್ರೀಂ ಕೋರ್ಟಿಗೆ ಹೋಗುವಿರಿ. ಜಿಲ್ಲಾ ಕೋರ್ಟಿನ ತೀರ್ಪನ್ನು ಹೈಕೋರ್ಟ್ ಅನುಮೋದಿಸಿದರೆ ಆಗ ವಿವಾದವೇ ಇರದು, ವಿರುದ್ಧ ತೀರ್ಪು ನೀಡಿದರೆ ಹೈಕೋರ್ಟಿನ ಆಜ್ಞೆಯನ್ನು ಪಾಲಿಸುವಿರಿ. ಆದೇ ರೀತಿ ಸುಪ್ರೀಂ ಕೋರ್ಟಿನ ಆಜ್ಞೆಯನ್ನು ಪಾಲಿಸುವಿರಿ. ದೀಕ್ಷಾಗುರು ಜಿಲ್ಲಾಕೋರ್ಟ್ ಶಿಕ್ಷಾ (ಜ್ಞಾನ) ಗುರು ಹೈಕೋರ್ಟ್, ಧರ್ಮಗುರು ಸುಪ್ರೀಂ ಕೋರ್ಟ್ ಧರ್ಮಗುರುವಿನ ಆದೇಶದಂತೆ ದೀಕ್ಷಾಗುರು-ಶಿಕ್ಷಾಗುರು ಹೇಳಿದರೆ ನೀವು ಅದನ್ನು ಪಾಲಿಸಿರಿ. ವಿರುದ್ಧವಾಗಿ ಹೇಳಿದರೆ ಆಗ ಧರ್ಮಗುರುವಿನ ಮಾತನ್ನಷ್ಟೇ ಪಾಲಿಸಿರಿ. "ಧರ್ಮಗುರು ಬಸವಣ್ಣ ನಡೆದುದೇ ನಮಗೆ ಮಾರ್ಗ, ನುಡಿದುದೇ ಶಾಸ್ತ್ರ."

ಮನೆಯಲ್ಲಿ ಕುಳಿತು ನೀವು ಮಾಡುವ ಅರ್ಚನೆ ನಿಮ್ಮ ವೈಯಕ್ತಿಕ ಮುಕ್ತಿಗೆ ಕಾರಣವಾಗುವುದು. ಸಾಮೂಹಿಕ ಪ್ರಾರ್ಥನೆ ಸಮಷ್ಟಿಯುದ್ಧಾರದ ಸಾಧನವಾಗುವುದು. ಆದ್ದರಿಂದ ಶರಣ ಬಂಧುಗಳು ಏನೇ ಭಿನ್ನಾಭಿಪ್ರಾಯವಿದ್ದರೂ ಅದನ್ನು ಮರೆತು, ಗಣ ಮೇಳದಂಥ ದಿವಸ ಒಂದಾಗಬೇಕು. ತತ್ವವನ್ನು **ಅರಿಯಲಿಕ್ಕೆ,** ಭಿನ್ನಾಭಿಪ್ರಾಯ **ಮರೆಯಲಿಕ್ಕೆ,** ಶರಣ ಬಂಧುಗಳು ಪರಸ್ಪರ **ಬೆರೆಯಲಿಕ್ಕೆ** ಈ ಪವಿತ್ರ ಸಮಾವೇಶ ಸಹಕಾರಿಯಾಗಲೆಂದು ಹೃತ್ಪೂರ್ವಕವಾಗಿ ಹಾರೈಸುವೆ.

ಪೂಜ್ಯ ಗುರುಗಳ ಆದೇಶದಂತೆ 'ಧರ್ಮಾಚಾರ' ಎಂಬ ಪದವನ್ನು 'ಬಸವಾಚಾರ' ಎಂದು ಹೆಸರಿಸುವುದಾಗಿ ಪೂಜ್ಯ ಮಾತಾಜಿಯವರು ಗಣ ಸಭೆಯಲ್ಲಿ ಘೋಷಿಸಿದರು. ನಿಜಗುಣಾನಂದಸ್ವಾಮಿಯವರು ಶರಣುಸಮರ್ಪಣೆ ಮಾಡಿದರು. ಸಾಮೂಹಿಕ ಮಂಗಲವಾಯಿತು. ಎಲ್ಲ ಶರಣ ಬಂಧುಗಳು ಪರಸ್ಪರ ಶರಣು ಸಮರ್ಪಣೆ ವಿನಿಮಯ ಮಾಡಿಕೊಂಡರು. ಕಲ್ಲುಸಕ್ಕರೆ ಪ್ರಸಾದ ವಿತರಿಸಲಾಯಿತು. ನಂತರ ಧಾರವಾಡದ ರಾಷ್ಟ್ರೀಯ ಬಸವದಳದವರು ವ್ಯವಸ್ಥೆ ಮಾಡಿದ್ದ ಪಾನಕ ಮತ್ತು ಪ್ರಸಾದದ ವಿತರಣೆಯಾಯಿತು.

ಪ್ರಾರ್ಥನಾ ಕ್ರಮದಲ್ಲಿ ಬದಲಾವಣೆ – ಮಾತಾಜಿ

ಬಹಳ ದಿನಗಳಿಂದಲೂ ಶರಣ ಬಂಧುಗಳು ಕೆಲವು ಬದಲಾವಣೆಗಳನ್ನು ಪ್ರಾರ್ಥನೆಯಲ್ಲಿ ಆಶಿಸಿದ್ದರು. ಈ ಬದಲಾವಣೆಗಳನ್ನು ಯಾವುದಾದರೊಂದು ಮಹತ್ವದ ದಿನದಂದು ಜಾರಿಗೆ ತರಲು ಉದ್ದೇಶಿಸಿದ್ದೆನು. ಅದನ್ನು ದಿನಾಂಕ ೧೦ ೩ ೯೪ ರಂದು ಅನುಷ್ಠಾನಕ್ಕೆ ತರಲಾಗಿದೆ.

೧. ಪೂರ್ಣಮದ: ಪೂರ್ಣಮಿದಂ ಬದಲಿಗೆ,
ಪ್ರಣವಾರೂಢನು ಪ್ರಣವ ಸ್ವರೂಪನು
ಪ್ರಣವ ಪ್ರಕೃತಿ ಸೌಂಜ್ಞನು
ಪ್ರಣವ ಷಡಂಗ ಸಮರಸ ನಮ್ಮ ಕೂಡಲ ಸಂಗಮ ದೇವ.
– ವಿಶ್ವಗುರು ಬಸವಣ್ಣ.

೨. ಸಹನಾಭವತು ಸಹನೌಭುನಕ್ತು ಬದಲಿಗೆ
ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯಾ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯಾ.
ಕೂಡಲ ಸಂಗಮದೇವಾ, ನಿಮ್ಮ
ಮಹಾಮನೆಯ ಮಗನೆಂದೆನಿಸಯ್ಯಾ. – ವಿಶ್ವಗುರು ಬಸವಣ್ಣ

೩. ಶ್ರೀ ಗುರು ಬಸವಂಗೆ ಶರಣಾಗಿಹೆ
ಲಿಂಗದೇವನಿಗೆ ಶರಣಾಗಿಹೆ
ಶರಣ ಗಣಕ್ಕೆ ಶರಣಾಗಿಹೆ
ಗಣಪದವಿಯನ್ನು ನಾ ಹೊಂದಿಹೆ. – ಮಾತಾಜಿ

೪. ಪ್ರಾರ್ಥನೆಯ ಉದ್ದೇಶ (ಸಂಕಲ್ಪ ಗೀತ)
ಬಸವ ಗುರುವಿನ ತತ್ವ ಲೋಕದಿ ಹಬ್ಬಲಿ
ಮನುಜ ಕಲ್ಪಿತ ಜಾತಿ ಹೊರೆ ತೊಲಗಿ ಹೋಗಲಿ
ವಿಶ್ವ ಮಾನವ ಪ್ರೀತಿ ಹೊನಲಾಗಿ ಹರಿಯಲಿ
ಸೃಷ್ಟಿಕರ್ತನ ಕರುಣೆ ಎಮ್ಮ ಕಾಪಾಡಲಿ
ಎಮ್ಮ ಕಾಪಾಡಲಿ.

೫. ಓಂ ಚೈತನ್ಯಂ ಶಾಶ್ವತಂ-ಆದಮೇಲೆ
ಜಯ ಬಸವರಾಜ ಭಕ್ತಜನ ಸುರಭೂಜ
ಜಯತು ಮಹಕಾರಣಿಕ ಪರಶಿವನ ನಿಜ ತೇಜ
ಜಯತು ಕರುಣಾಸಿಂಧು ಭಜಕ ಜನ ಬಂಧು
ಜಯ ಇಷ್ಟದಾಯಕ ರಕ್ಷಿಸು ಶ್ರೀ ಗುರುಬಸವ
ರಕ್ಷಿಸು ಶ್ರೀ ಗುರು ಬಸವ.

ಅಡವೆಪ್ಪ ಚಂದ್ರೆ ಆಗ್ರಹ

ವೀರಶೈವ ಮಹಾಸಭೆ ಅಧ್ಯಕ್ಷ ಸ್ಥಾನಕ್ಕೆ ಡಾ॥ ಶರಣಬಸಪ್ಪ ಅಪ್ಪ ರಾಜಿನಾಮೆ ನೀಡಲಿ

ಉತ್ತರ ಕರ್ನಾಟಕ, ೫ನೇ ಏಪ್ರೀಲ್-೧೯೯೪, ಪುಟ ೩

ಬೀದರ, ಏ, ೪–ಕಲಬುರ್ಗಿಯ ಶ್ರೀ ಶರಣ ಬಸವೇಶ್ವರ ಸಂಸ್ಥಾನದ ಪೀಠಾಧಿಪತಿ ಯೆಂದು ಹೇಳಿಕೊಂಡು ಜನ ಸಾಮಾನ್ಯರ ಶೋಷಣೆ ಮಾಡುತ್ತ ಸಮಾಜಕ್ಕೆ ಒಂದು ಕಳಂಕವಾಗಿರುವ ಡಾ॥ ಶರಣಬಸಪ್ಪ ಅಪ್ಪ ಅವರು ಆ ಸ್ಥಾನದಲ್ಲಿರಲು ಅರ್ಹರಲ್ಲ. ಆ ಯೋಗ್ಯತೆಯೇ ಅವರಲಿಲ್ಲ ಎಂದು ಜಹಿರಾಬಾದ್ ವೀರಶೈವ ಸಮಾಜದ ಮುಖಂಡರಾದ ಅಡವೆಪ್ಪ ಚಂದ್ರ ಆಪಾದಿಸಿದರು.

ಅವರು ನಿನ್ನೆ ದಿ. ೩ ರಂದು ನಗರದಲ್ಲಿ ನಡೆದ ರಾಷ್ಟ್ರೀಯ ಬಸವ ದಳಗಳ ಸಮಾವೇಶ ಸಮಾರಂಭದಲ್ಲಿ ಮಾತನಾಡುತ್ತ ಶರಣ ಬಸಪ್ಪ ಅಪ್ಪ ಅವರು ಈ ಲಿಂಗಾಯತ ಸಮಾಜಕ್ಕೆ ಒಂದು ದೊಡ್ಡ ಕಳಂಕ ಮತ್ತು ಚಾರಿತ್ರ್ಯ ಹೀನ ವ್ಯಕ್ತಿ. ಇಂಥ ಒಬ್ಬ ವ್ಯಕ್ತಿಗೆ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷ ಸ್ಥಾನದಲ್ಲಿ ಕೂರುವ ನೈತಿಕ ಹಕ್ಕಿಲ್ಲ. ಕೂಡಲೇ ಅವರು ಮಹಾಸಭೆಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು ಎಂದು ಚಂದ್ರೆಯವರು ಆಗ್ರಹ ಪಡಿಸಿದರು.

ಶರಣಬಸಪ್ಪ ಅಪ್ಪ ಅವರು ಪೀಠದ ಅಧ್ಯಕ್ಷರಾಗಿರುವುದರಿಂದ ಇಡಿ ಶರಣ ಬಸವೇಶ್ವರ ಸಂಸ್ಥಾನವೇ ಅಪವಿತ್ರಗೊಂಡಿದೆ. ಇವರು ದಿನಾಲು ೫೦ ಬಾಲಕಿಯರಿಗೆ ಲಗ್ನವಾದರೂ ತಾವು ಆಕ್ಷೇಪ ಮಾಡುವುದಿಲ್ಲ. ಅವರು ಮೊದಲು ವೀರಶೈವ ಮಹಾ ಸಭೆಯ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯಬೇಕೆಂದು ಚಂದ್ರೆಯವರು ಒತ್ತಾಯಿಸಿದರು.

ಬಸವ ಧರ್ಮವನ್ನು ಹಾಸಿ ಹೊದ್ದುಕೊಂಡು ನಿಂತಿರುವ **ಪೂಜ್ಯ ಶ್ರೀಲಿಂಗಾನಂದ ಮಹಾಸ್ವಾಮಿಗಳು** ಹಾಗೂ **ಪೂಜ್ಯ ಮಾತೆ ಮಹಾದೇವಿ** ಯವರನ್ನು ಕುರಿತು ಏನಾದರೂ ಅಪಪ್ರಚಾರದ ಸೊಲ್ಲೆತ್ತಿದರೆ ತಾವು ಸಹಿಸುವುದಿಲ್ಲ ಎಂಬ ಎಚ್ಚರಿಕೆ ನೀಡಿದರು.

ಸಂಪಾದಕರ ಸಮುಕ್ಷಮುಕ್ಕೆ

ಉತ್ತರ ಕರ್ನಾಟಕ ದಿನ ಪತ್ರಿಕೆ, ಬೀದರ.

ಮಾನ್ಯರೇ,

ದಿ, 5-4-1994 ರ ಸಂಚಿಕೆ ಉತ್ತರ ಕರ್ನಾಟಕದಲ್ಲಿ ಶರಣ. ಅಡವೆಪ್ಪ ಚಂದ್ರೆ ಅವರ ಭಾಷಣದ ಸಾರ ಪ್ರಕಟವಾಗಿದೆ. ಶರಣ. ಅಡವೆಪ್ಪ ಚಂದ್ರೆಯವರು ಹಿರಿಯರು, ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸೇವಾ ದುರಂಧರರು, ಬಸವ ತತ್ತ್ವ ನಿಷ್ಠರು, ಉತ್ತಮ ಸಂಘಟಕರು. ಆಂಧ್ರ ಪ್ರದೇಶದ ಗಡಿನಾಡಾದ ಜಹಿರಾಬಾದ ನಿವಾಸಿಗಳಾಗಿ ಬಸವ ತತ್ತ್ವವು ಜೀವಂತವಾಗಿರಲು ಬಹಳ ಶ್ರಮಿಸುತ್ತಿರುವ ಸಾತ್ವಿಕ, ನಿಷ್ಠುರವಾದಿ ಶರಣರು ಎಂಬ ಬಗ್ಗೆ ನಮಗೆಲ್ಲ ತುಂಬ ಅಭಿಮಾನವಿದೆ.

ಆದರೆ ಶ್ರೀಯುತರು ದಿ. 3-4-1994 ರಂದು ಶರಣ. ಬಸವಕುಮಾರ್ ಪಾಟೀಲರ ವಿವಾಹ ನಿಮಿತ್ತ ನಡೆದ ರಾಷ್ಟ್ರೀಯ ಬಸವ ದಳಗಳ ಸಮಾವೇಶದಲ್ಲಿ ಮಾತನಾಡುತ್ತ ಶ್ರೀ ಶರಣ ಬಸಪ್ಪ ಅಪ್ಪಾ ಅವರನ್ನು ಟೀಕಿಸಿದ್ದು ನಮಗೆ ಮುಜುಗರವನ್ನುಂಟು ಮಾಡಿತು. ಏಕೆಂದರೆ ವೇದಿಕೆ ಮತ್ತು ಸಮಯ-ಸನ್ನಿವೇಶಗಳಿಗೆ ಆ ಟೀಕೆ ಪ್ರಸ್ತುತವಾಗಿರಲಿಲ್ಲ. ಅಖಿಲ ಭಾರತ ವೀರಶೈವ ಮಹಾಸಭೆ ತತ್ತ್ವ ನಿಷ್ಠ ಸಂಸ್ಥೆಯಾಗದೆ, ಯಾವುದೇ ಖಚಿತ ಸಿದ್ಧಾಂತ-ಗುರಿ-ಗಮ್ಯ ಇಲ್ಲದೆ ಹೊರಟಿರುವುದರಿಂದ ಅದರ ಬಗ್ಗೆ ನಮಗಾಗಲೀ-ಬಸವ ಭಕ್ತರಿಗಾಗಲೀ ಯಾವ ಆಸಕ್ತಿಯೂ ಉಳಿದಿಲ್ಲ. ಹೀಗಿರುವಾಗ ರಾಷ್ಟ್ರೀಯ ಬಸವ ದಳದ ವೇದಿಕೆಯ ಮೇಲೆ ಅ. ಭಾ. ವೀ. ಮಹಾಸಭೆ ಅಧ್ಯಕ್ಷರನ್ನು ಟೀಕಿಸಿದ್ದು ನಮಗೆ ಮುಜುಗರವನ್ನುಂಟು ಮಾಡಿತು. ನಮಗೆ ಹಿಂದಿಯೂ ಅಷ್ಟಾಗಿ ಬರದ್ದರಿಂದ ಶರಣ. ಅಡಿವೆಪ್ಪ ಅವರ ಭಾಷಣದ ವಿವರ ತಿಳಿಯಲಿಲ್ಲ.

ಶ್ರೀ ಶರಣಬಸಪ್ಪ ಅಪ್ಪಾ ಅವರನ್ನು ಟೀಕಿಸಿದ್ದರ ಜೊತೆಗೆ ನಮ್ಮನ್ನು ಹೊಗಳಿದ್ದೂ ಇನ್ನೂ ಹೆಚ್ಚಿನ ಮುಜುಗರವನ್ನು ಉಂಟು ಮಾಡಿತು. ಶ್ರೀ ಶರಣ ಬಸಪ್ಪ ಅಪ್ಪ ಅವರನ್ನು ಕುರಿತು ಶರಣ. ಅಡಿವೆಪ್ಪ ಅವರು ಮಾತನಾಡಿದುದರ ಹಿನ್ನೆಲೆಯಲ್ಲಿ ವೈಯಕ್ತಿಕ ಕಾರಣ ಏನಿದೆಯೋ ನಮಗಂತೂ ಅರ್ಥವಾಗಲಿಲ್ಲ. ನಮ್ಮನ್ನು ಆದೇ ಸನ್ನಿವೇಶದಲ್ಲಿ ಶ್ಲಾಘಿಸದೇ ಇದ್ದರೂ ನಮಗೆ ಸಮಾಧಾನವಿರುತ್ತಿತ್ತು. ಆದ್ದರಿಂದ ಈ ವಿಷಯದಲ್ಲಿ ಸ್ಪಷ್ಟೀಕರಣ ನೀಡಬಯಸುತ್ತೇನೆ. ಶರಣ ಅಡಿವೆಪ್ಪನವರ ವಿಚಾರ, ಶ್ರೀ ಶರಣ ಬಸಪ್ಪ ಅಪ್ಪಾ ಅವರು ಅ. ಭಾ. ವೀ. ಮಹಾಸಭೆಯ ಅಧ್ಯಕ್ಷತೆಯಿಂದ ಕೆಳಗಿಳಿಯಬೇಕೆಂಬುದು, ಹೇಳುಗರ ವೈಯಕ್ತಿಕ ಅಭಿಪ್ರಾಯವೇ ವಿನಾ ರಾಷ್ಟ್ರೀಯ ಬಸವ ದಳದ ಸಾಮೂಹಿಕ ನಿರ್ಧಾರವಲ್ಲ. ಏಕೆಂದರೆ ಯಾವುದನ್ನೇ ಸಾಮೂಹಿಕವಾಗಿ ಪ್ರಕಟಿಸುವ ಮೊದಲು ರಾಷ್ಟ್ರೀಯ ಬಸವ ದಳದ ಕಾರ್ಯಕಾರಿ ಸಮಿತಿಯವರು ವ್ಯಾಪಕ ಚಿಂತನೆ ಮಾಡುವ ಶಿಸ್ತಿನ ಪರಿಪಾಠವಿದೆ. ಅಂಥ ಯಾವ ಚರ್ಚೆ ನಡೆದಿಲ್ಲ ಎಂಬುದನ್ನು ಸ್ಪಷ್ಟಪಡಿಸಬಯಸುತ್ತೇನೆ.

ದಿ॥ 8-4-94

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ರಾಷ್ಟ್ರೀಯ ಬಸವ ದಳ, ಕೇಂದ್ರ ಸಮಿತಿ

ಸಂಪಾದಕರ ಸಮುಕ್ಷಮುಕ್ಕೆ

ಬಸವ ಕಿರಣ, ಶಿವಮೊಗ್ಗ.

ಮಾನ್ಯರೇ,

ಕೂಡಲ ಸಂಗಮ ಅಭಿವೃದ್ಧಿಗಾಗಿ ಪ್ರಾಧಿಕಾರ ಒಂದನ್ನು ರಚಿಸುವ ಬಗ್ಗೆ ಸರ್ಕಾರದ ಪರವಾಗಿ ಅನೇಕ ಮಂತ್ರಿಗಳು ಹೇಳಿಕೆ ಕೊಟ್ಟು, ಅನೇಕ ಬಸವ ತತ್ತ್ವಾಭಿಮಾನಿಗಳು ಹಗಲು ಕನಸು ಕಾಣುವಂತೆ ಮಾಡಿದ್ದಾರಷ್ಟೆ. ನೀವೂ ಈ ಬಗ್ಗೆ ಪ್ರಭಾವಿತರಾಗಿ ಹಾಗೆ ರಚಿಸಲಿರುವ ಕೂಡಲ ಸಂಗಮ ಅಭಿವೃದ್ಧಿ ನಿಗಮ ಮಂಡಳಿಯಲ್ಲಿ ನಮ್ಮನ್ನೂ ಸಲಹೆಗಾರರನ್ನಾಗಿ, ಸಕ್ರಿಯ ಸದಸ್ಯರನ್ನಾಗಿ ತೆಗೆದುಕೊಳ್ಳಲು ಸೂಚಿಸಿ, ಈ ಬಗ್ಗೆ ಮುಖ್ಯಮಂತ್ರಿ ಮುಂತಾದವರಿಗೆ ಪತ್ರ ಬರೆಯಲು ಜನರಿಗೆ ಕರೆ ನೀಡಿದ್ದೀರಿ, ಅನೇಕ ಜನರು ಪತ್ರ ಬರೆದು ಅದರ ಪ್ರತಿ ನಮಗೂ ಕಳಿಸುತ್ತಿದ್ದಾರೆ. ಇದು ನಮಗೆ ಬಹಳ ಮುಜುಗರ ಉಂಟು ಮಾಡಿದೆ. ಏಕೆಂದರೆ ಬಸವ ಕಿರಣದ ಓದುಗರು, ರಾಷ್ಟ್ರೀಯ ಬಸವ ದಳಗಳವರು ನಮ್ಮ ಅಭಿಮಾನಿಗಳೇ ಆಗಿರುತ್ತಾರೆ. ನಿಮ್ಮ ಪ್ರಕಟಣೆ ಓದಿ, ಪತ್ರ ಬರೆದಾಗ ನಾವಾಗಿಯೇ ಅತ್ತುಕರೆದು ಸ್ಥಾನವನ್ನು ಬಯಸಿದಂತೆ ಆಗದೆ ? ನಮಗೆ ಇಂಥ ಚಟ ಮೊದಲಿನಿಂದಲೂ ಇಲ್ಲ.

ಎರಡನೆಯದಾಗಿ ಸರ್ಕಾರಗಳು ಬರೀ ಆಶ್ವಾಸನೆಯ ಮಳೆಕರೆದು ಯಾವ ಕೆಲಸಗಳನ್ನೂ ಮಾಡುವುದಿಲ್ಲವಾದ್ದರಿಂದ ಅಂಥ ಸಮಿತಿಯಲ್ಲಿ ಸೇರಿದರೂ ಏನೂ ಪ್ರಯೋಜನವಾಗದೆ ಹೆಸರು ಕೆಡಿಸಿಕೊಳ್ಳುವ ಸಾಧ್ಯತೆ ಇರುತ್ತದೆ,

ಮೂರನೆಯದಾಗಿ ಸರ್ಕಾರಿ ಹಿಡಿತದಿಂದ ಹೊರಗಿರುವ ಒಬ್ಬ ವ್ಯಕ್ತಿ ಒಳ್ಳೆಯ ಕೆಲಸಗಳನ್ನೂ, ಜನಾಂದೋಲನವನ್ನು ಎಷ್ಟು. ಮುಕ್ತಮನಸ್ಸಿನಿಂದ ಮಾಡಬಹುದು. ಅದನ್ನು ಸಮಿತಿಯ ಒಳಗಿದ್ದರೆ ಮಾಡಲು ಆಗುವುದಿಲ್ಲ. ಸಲಹೆ ಸೂಚನೆಗಳನ್ನು ಸಮಿತಿಯ ಹೊರಗಿದ್ದೂ ಕೊಡಬಹುದಾಗಿರುತ್ತದೆ.

ಆದ್ದರಿಂದ ಬಸವ ತತ್ತ್ವಾಭಿಮಾನಿಗಳು ಕೇವಲ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಅದನ್ನು ಕೈಬಿಡಬೇಕೆಂದು ಸಂಬಂಧಪಟ್ಟವರಿಗೆ ಬರೆಯಬೇಕೇ ವಿನಾ, ಕೂಡಲಸಂಗಮ ಅಭಿವೃದ್ಧಿ ನಿಗಮದಲ್ಲಿ ನಮ್ಮನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಅಲ್ಲ. ಇದನ್ನು ಪಾಲಿಸುವಿರಾಗಿ ನಂಬಿದ್ದೇನೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ.

ಹೈದರಾಬಾದ್ ನಗರದ ನಿಜಾಮುದ್ದೀನ್ ಕಾಲೇಜ್ ಮೈದಾನದಲ್ಲಿ ಮೇ 21 ಮತ್ತು 22 ರಂದು ನಡೆಯಲಿರುವ ಅಖಿಲ ಭಾರತ ಬಸವ ಧರ್ಮ ದ್ವಿತೀಯ ಸಮ್ಮೇಳನದಲ್ಲಿ

ಭಾಗವಹಿಸಲು ಕರೆ

ಶರಣ ಬಂಧುಗಳೇ,

ವಿಶ್ವಗುರು ಬಸವಣ್ಣನವರು 12 ನೆಯ ಶತಮಾನದಲ್ಲಿ ಆಗಿಹೋದ ಕ್ರಾಂತಿ ಪುರುಷರು, ಶ್ರೇಷ್ಠ ಸಮಾಜ ಸುಧಾರಕರು, ಸಮತಾವಾದಿಗಳು, ರಾಜಕಾರಣ ಮುತ್ಸದ್ದಿಗಳು, ಜಾತಿ ವರ್ಣ ವರ್ಗರಹಿತ, ಧರ್ಮ ಸಹಿತವಾದ ಕಲ್ಯಾಣ ರಾಜ್ಯವನ್ನು ಕಟ್ಟಿ ತೋರಿಸಿದ ಚಿಂತನ ಶೀಲರು. ಪರಮಾತ್ಮನ ದಿವ್ಯಕೃಪೆಯನ್ನು ಹೊತ್ತು ಮರ್ತ್ಯಲೋಕಕ್ಕೆ ಬಂದು ವಿಶ್ವಾತ್ಮನ ಕುರುಹಾಗಿ ಇಷ್ಟಲಿಂಗವನ್ನು ಸಾಕಾರಗೊಳಿಸಿ ಕೊಟ್ಟು ಸಮತಾವಾದವನ್ನು ನೆಲೆಗೊಳಿಸಿದರು. ಗಣ ಲಾಂಛನವನ್ನಾಗಿ ಇಷ್ಟಲಿಂಗವನ್ನು ಕೊಟ್ಟು ಪ್ರತಿಯೊಬ್ಬರ ಅಂಗದ ಮೇಲೂ ಧರಿಸಿಕೊಳ್ಳುವ ಸದವಕಾಶ ನೀಡಿ ಉದಾತ್ತವಾದ ಶರಣ ಸಮಾಜವನ್ನು ಕಟ್ಟಿದರು. ಹೀಗೆ ಇಷ್ಟಲಿಂಗವೇ ಪ್ರಮುಖವಾದ ಲಾಂಛನವಾಗಿರುವ ಲಿಂಗಾಯತ (ಲಿಂಗವಂತ) ಸಮಾಜದ ಅಸ್ತಿತ್ವಕ್ಕೆ ಕಾರಣೀಭೂತರಾದರು. ಇಂತಹ ಲಿಂಗವಂತ ಲಿಂಗಾಯತ (ವೀರಶೈವ) ಧರ್ಮಾನುಯಾಯಿಗಳು ಕರ್ನಾಟಕದಲ್ಲಿ ಬಹುಸಂಖ್ಯಾತರಾಗಿ ನೆರೆಯ ಆಂಧ್ರ, ಮಹಾರಾಷ್ಟ್ರ, ತಮಿಳುನಾಡು, ಕೇರಳ, ಮಧ್ಯಪ್ರದೇಶ ಮುಂತಾದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ನೆಲೆಸಿದ್ದಾರೆ.

ಬಸವ ತತ್ತ್ವಾನುಯಾಯಿ ಲಿಂಗವಂತರನ್ನು ಸಂಘಟಿಸಲು, ಸಂಸ್ಕಾರ ನೀಡಲು, ಮೂಲ ಸಾಂಸ್ಕೃತಿಕ ಪ್ರಭಾವಕ್ಕೆ ಒಳಪಡಿಸಲೆಂದು ಬಸವ ಧರ್ಮ ಸಮ್ಮೇಳನಗಳನ್ನು ಕರ್ನಾಟಕದ ಹೊರಗೆ ಹಮ್ಮಿಕೊಳ್ಳಲಾಗುತ್ತಿದೆಯಷ್ಟೆ. 1993 ನೆಯ ಶರಣ ಮೇಳದಲ್ಲಿ ಇಂಥ ಸಮ್ಮೇಳನ ನಡೆಸುವ ನಿರ್ಧಾರ ಕೈಗೊಂಡಾಗ ಬಸವ ಧರ್ಮ ಪ್ರಥಮ ಸಮ್ಮೇಳನ ನಡೆಸಲು ತಮಿಳು ನಾಡಿನ ನೀಲಗಿರಿ ಜಿಲ್ಲೆಯ ಸಕಲಟ್ಟಿ ರಾಷ್ಟ್ರೀಯ ಬಸವ ದಳದವರು ಮುಂದಾದರು ; ನೀಲಗಿರಿ ಜಿಲ್ಲೆಯ ಕಾಟೇರಿಯಲ್ಲಿ 1993 ರ ಮೇ 8–9 ರಂದು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದರು.

ಎರಡನೆಯ ಸಮ್ಮೇಳನವನ್ನು ಆಂಧ್ರದ ರಾಜಧಾನಿ ಹೈದರಾಬಾದಿನಲ್ಲಿ 1994 ರ ಮೇ 21 ಮತ್ತು 22 ರಂದು ಅಲ್ಲಿಯ ವೀರಶೈವ–ಲಿಂಗಾಯತ ಸಂಘ ಸಂಸ್ಥೆಗಳ ಒಕ್ಕೂಟದವರು ಹಮ್ಮಿಕೊಂಡಿದ್ದಾರೆ. ಈ ಸಮ್ಮೇಳನವು ಯಶಸ್ವಿಯಾಗಬೇಕಾದರೆ ನಿಮ್ಮೆಲ್ಲರ ಸಹಾಯ–ಸಹಕಾರ–ಪರಿಶ್ರಮ ಅತ್ಯಗತ್ಯ.

ಕಾಗೆಯೊಂದಗುಳ ಕಂಡಡೆ ಕೂಗಿ ಕರೆಯಂದೆ
ತನ್ನ ಬಳಗವೆಲ್ಲವನು ?

ಕೋಳಿಯೊಂದು ಕುಟುಕ ಕಂಡಡೆ ಕೂಗಿ ಕರೆಯದೆ
ತನ್ನ ಕುಲವನೆಲ್ಲವನು ?
ಶಿವ ಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಗಳಿಗಿಂತ ಕರಕಷ್ಟ, ಕೂಡಲ ಸಂಗಮದೇವಾ,

ಎಂದು ಧರ್ಮಪಿತ ಬಸವಣ್ಣನವರು ಆದೇಶಿಸಿದಂತೆ ನಾವು ಭಕ್ತಿಪಕ್ಷವನ್ನು ಕಟ್ಟಿಕೊಂಡು ಬಾಳಬೇಕು. ಮಾನವ ಸಂಘಜೀವಿ, ಸಮಾಜ ಜೀವಿ. ಭಕ್ತಿಯನ್ನೇ ಸೂತ್ರವನ್ನಾಗಿ ಮಾಡಿಕೊಂಡು ಸಂಘವನ್ನು ಬೆಳೆಸಬೇಕು, ಧರ್ಮಪಿತರು ಹೀಗೆ ಆದೇಶಿಸಿದ್ದಾರೆ :

ಲಕ್ಷಗಾವುದ ದಾರಿಯ ಹೋಗಿ
ಭಕ್ತನು ಭಕ್ತನ ಕಾಂಬುದು ಸದಾಚಾರ,
ಅಲ್ಲಿ ಕೂಡಿ ದಾಸೋಹವ ಮಾಡಿದಡೆ
ಕೂಡಿಕೊಂಬನು ನಮ್ಮ ಕೂಡಲ ಸಂಗಮದೇವನು. – ಬ. ಷ. ವ. 246

ಮಾನಸಿಕವಾಗಿ, ಹಾರ್ದಿಕವಾಗಿ, ಧಾರ್ಮಿಕ–ಸಾಂಸ್ಕೃತಿಕವಾಗಿ ನಾವು ಹತ್ತಿರವಾಗಬೇಕಾದರೆ ಲಕ್ಷಗಾವುದ ದೂರವಿರಲಿ ಹೋಗಿ ಭಕ್ತರನ್ನು ಕಾಣಬೇಕು. ಅವರೊಡನೆ ಕೂಡಿ (ಒಡೆಯರಂತೆ, ಅತಿಥಿಗಳಂತೆ, ಜಂಬದಿಂದ ಬಿಗುಮಾನದಿಂದ ವರ್ತಿಸದೆ) ದಾಸೋಹವನ್ನು ಮಾಡಬೇಕಂತೆ. ಧರ್ಮಪಿತರ ಈ ಆದೇಶವನ್ನು ಪಾಲಿಸಲು ನಮಗೀಗ ಸುಸಂಧಿ ಒದಗಿದೆ.

ಹೈದರಾಬಾದ ನಗರ ಪ್ರೇಕ್ಷಣೀಯ ಸ್ಥಳ. ಅಲ್ಲಿರುವ ಸಾಲಾರ್‌ಜಂಗ್ ಮ್ಯೂಸಿಯಮ್, ಜೂ, ನಿಜಾಮ್ ಸಾಗರ ಇತ್ಯಾದಿ ಜಗತ್‌ಪ್ರಸಿದ್ಧವಿವೆ. ಸಮ್ಮೇಳನಗಳನ್ನು ಹೊರರಾಜ್ಯಗಳಲ್ಲಿ ನಡೆಸುವುದರಿಂದ ಇಂಥ ಸ್ಥಳಗಳನ್ನೂ ನೋಡಲು ಅವಕಾಶ ಪ್ರಾಪ್ತಿಯಾಗುತ್ತದೆ. ಆದ್ದರಿಂದ ತಾವು ಸ್ವತಃ ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು ಮತ್ತು ಹೆಚ್ಚಿನ ಜನರನ್ನು ಕರೆತರಲು ವ್ಯವಸ್ಥೆ ಮಾಡಬೇಕು. ಬರಬೇಕೆಂಬ ಆಪೇಕ್ಷೆ ಬಹಳ ಜನರಿಗಿದ್ದರೂ ಸಂಘಟಿಸಿ ಕರೆದುಕೊಂಡು ಹೋಗದಿದ್ದರೆ ಬರಲು ಸಾಧ್ಯವಾಗದು. ಸ್ಥಳೀಯ ಪತ್ರಿಕೆ, ಕರಪತ್ರಗಳ ಮೂಲಕ ಪ್ರಚಾರ ಮಾಡಿ ಹೆಚ್ಚಿನ ಜನರನ್ನು ಕರೆತರುವ ಪ್ರಯತ್ನಮಾಡಿರಿ. ಸಮ್ಮೇಳನ ಸಮಿತಿಯವರು ಊಟ–ವಸತಿಗಳ ವ್ಯವಸ್ಥೆ ಮಾಡಲಿರುವರು ಮತ್ತು ಹೈದ್ರಾಬಾದಿನಂತಹ ನಗರದಲ್ಲಿ ಉತ್ತಮ ಲಾಡ್ಜಿಂಗ್ ಸೌಲಭ್ಯವಿರುವುದರಿಂದ ಸ್ವಂತ ವಸತಿ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದು.

ಬೆಂಗಳೂರಿನ ಬಸವ ಮಂಟಪದಲ್ಲಿ ಸಮ್ಮೇಳನದ ಕಾರ್ಯಾಲಯದ ಶಾಖೆಯನ್ನು ತೆರೆಯಲಾಗಿದೆ, ಸಮೀಪವಿದ್ದವರು ಬಂದು ವಿವರಗಳನ್ನು ಪಡೆಯಬಹುದು ಮತ್ತು ಪ್ರತಿನಿಧಿ ಶುಲ್ಕ–ದೇಣಿಗೆಗಳನ್ನೂ ನೀಡಬಹುದು. ರಾಷ್ಟ್ರೀಯ ಬಸವ ದಳಗಳವರು ಮತ್ತು ಆಸಕ್ತ ಶರಣರು ರಸೀತಿ ಪುಸ್ತಕ–ಕರಪತ್ರಗಳನ್ನು ಬೆಂಗಳೂರು ಮತ್ತು ಕೂಡಲ ಸಂಗಮದಿಂದ ಪಡೆದುಕೊಂಡು ಪ್ರತಿನಿಧಿ ಶುಲ್ಕ ಮತ್ತು

ದೇಣಿಗೆ ಸಂಗ್ರಹಿಸಿಕೊಡಬೇಕು. ಬೆಂಗಳೂರು ರಾಷ್ಟ್ರೀಯ ಬಸವ ದಳದವರು ಬಸ್ಸಿನ ವ್ಯವಸ್ಥೆ ಮಾಡಿ, ಜನರನ್ನು ಕರೆದೊಯ್ದು ತಂದುಬಿಡುವರು. 1994 ರಂದು 20ನೇ ತಾರೀಖು ಬೆಳಿಗ್ಗೆ ಬಸವ ಮಂಟಪದಿಂದ ಬಸ್ಸು ಹೊರಡುವುದು. ಆಸಕ್ತರು ಬೇಗ ಬೇಗನೆ ಹೆಸರುಗಳನ್ನು ಕೊಟ್ಟರೆ ಒಂದಕ್ಕಿಂತ ಹೆಚ್ಚು ಬಸ್ಸು ಹೊರಡಿಸಲು ಅನುಕೂಲ ವಾಗುವುದು.

ವಿಶೇಷ ಸೂಚನೆ

ನಿಮ್ಮ ಬಂಧು-ಮಿತ್ರರು ಆಂಧ್ರದ ಬೇರೆ ಬೇರೆ ಭಾಗಗಳಲ್ಲಿದ್ದರೆ ಅವರುಗಳ ವಿಳಾಸವನ್ನು ಕಾರ್ಯಾಲಯಕ್ಕೆ ಕಳಿಸಿರಿ. ನೀವಾದರೂ ಅವರಿಗೆ ಪತ್ರ ಬರೆದು ಪಾಲ್ಗೊಳ್ಳಲು ತಿಳಿಸಿರಿ. ಇಂಥ ಸುಸಂಧಿ ಮತ್ತೆ ಮತ್ತೆ ಸಿಗದು. ಪ್ರಚಾರದ ಕರಪತ್ರಗಳನ್ನು ತೆಲುಗು, ಹಿಂದಿ, ಕನ್ನಡ-ಮೂರೂ ಭಾಷೆಗಳಲ್ಲಿ ಸಿದ್ಧಪಡಿಸಲಾಗಿದೆ. ನಿಮಗೆ ಬೇಕಾದಷ್ಟು ತರಿಸಿಕೊಂಡು ನೀವೇ ವಿತರಿಸಿರಿ. ನಿಮ್ಮ ಬಂಧು-ಮಿತ್ರರ ವಿಳಾಸ ಕೊಟ್ಟು, ದೇಣಿಗೆ-ಪ್ರತಿನಿಧಿ ಶುಲ್ಕ ಸಂಗ್ರಹಕ್ಕೆ ರಸೀತಿ ಪುಸ್ತಕ ಕಳಿಸಲು ಕಾರ್ಯಾಲಯಕ್ಕೆ ತಿಳಿಸಿರಿ. ಬಸವ ಭಕ್ತರೆಲ್ಲ ಒಂದೇ ಬಳ್ಳಿಯ ವಿವಿಧ ಹೂವು-ಗಳೆಂಬಂತೆ ನಡೆದು ಸಮ್ಮೇಳನವನ್ನು ಯಶಸ್ವಿಗೊಳಿಸುವಿರಾಗಿ ನಂಬುವೆವು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ.

ಬೆಂಗಳೂರು ಕಾರ್ಯಾಲಯದ ವಿಳಾಸ : ದೂರವಾಣಿ : 3325335
ಸೋದರಿ ನೀಲಾಂಬಿಕೆ, ಕಾರ್ಯದರ್ಶಿ, ಅಖಿಲ ಭಾರತ ಬಸವ ಧರ್ಮ ದ್ವಿತೀಯ ಸಮ್ಮೇಳನ ಸಮಿತಿ, ಬಸವ ಮಂಟಪ, 2035, ಎರಡನೆಯ ಬ್ಲಾಕ್, 20 ನೆಯ ಮೇಯಿನ್, ರಾಜಾಜಿನಗರ, ಬೆಂಗಳೂರು-560010.

ಲಿಂಗಾಯತ—ಲಿಂಗವಂತ ವ್ಯತ್ಯಾಸ
ವೀರಶೈವರಿಗೆ ಆಗುವ ಅನ್ಯಾಯ ಅಪಾರ

ಲೇಖಕರು : **ಶ್ರೀ ಎಂ. ಎಂ. ಹೂಲಿ**
ನ್ಯಾಯವಾದಿ, ಹುಬ್ಬಳ್ಳಿ

ಈ ರಾಜ್ಯ ವೀರಶೈವರಿಗೆ ಆಗುವ ಅನ್ಯಾಯ ಕುರಿತು ರಾಜಕೀಯ ಮುಖಂಡರು. ಮಠಾಧಿಪತಿಗಳು ಅನೇಕ ಬಾರಿ ತಮ್ಮ ಹೇಳಿಕೆಗಳನ್ನು ಕೊಡುತ್ತಾ ಇರುವರು. ಕರ್ನಾಟಕದಲ್ಲಿ ವೀರಶೈವ ಜನಸಂಖ್ಯೆ ಅಧಿಕವಾಗಿದ್ದರೂ ಅವರ ಮೇಲೆ ಆಗುತ್ತಿರುವ ಅನ್ಯಾಯ ನೋಡಿ, ಕೇಳಿ, ಸುಮ್ಮನೆ ಸಹಿಸಿಕೊಂಡು ಹೋಗುವದು ಅನಿವಾರ್ಯ ವಾಗಿದೆ. ಮಠಾಧೀಶರು ಹಾಗೂ ರಾಜಕೀಯ ವ್ಯಕ್ತಿಗಳು ಈ ಬಗ್ಗೆ ತಮ್ಮ ಲಕ್ಷ್ಯ ಕೊಡದೇ ಹೋದರೆ ಕರ್ನಾಟಕದಲ್ಲಿ ವೀರಶೈವರಿಗೆ ಆಗುವ ಹಾನಿ ಇನ್ನು ಹೆಚ್ಚುಗೊಳ್ಳುವದರಲ್ಲಿ ಸಂದೇಹವೇನೂ ಇಲ್ಲ.

ಸಾಮಾನ್ಯವಾಗಿ ಶಾಲೆಯ ಸರ್ಟಿಫಿಕೇಟುಗಳಲ್ಲಿ ವೀರಶೈವ; ಲಿಂಗಾಯತ; ಲಿಂಗವಂತ ಅಂತಾ ವೀರಶೈವ ಧರ್ಮದವರು ಬರೆಯಿಸಿರುತ್ತಾರೆ. ಆದರೆ ಲಿಂಗವಂತ ಅಂತಾ ಬರೆದ ಸರ್ಟಿಫಿಕೇಟನ್ನು ರಾಜ್ಯ ಸರಕಾರವು ಮಾನ್ಯ ಮಾಡಿರುವದಿಲ್ಲ. ಸರಕಾರದ ನೀತಿ ಪ್ರಕಾರ "ಲಿಂಗಾಯತ" ಹಾಗೂ "ಲಿಂಗವಂತ" ಬೇರೆ ಬೇರೆ. ವೀರಶೈವರಿಗೆ ಈ ಬಗ್ಗೆ ಅನ್ಯಾಯವಾಗುತ್ತಿರುವ ಬಗ್ಗೆ ತೀವ್ರ ಪ್ರತಿಕ್ರಿಯೆ ಅವಶ್ಯ. ಆದರೆ ಈ ಬಗ್ಗೆ ಮುಖಂಡರಿಗೆ ಸರಿಯಾದ ಜ್ಞಾನ ಇಲ್ಲವೆಂಬ ಭಾವನೆ ಬರತೊಡಗಿದೆ.

ಅಖಿಲ ಭಾರತ ವೀರಶೈವ ಮಹಾ ಸಭೆಯವರು ಹಾಗೂ ವೀರಶೈವ ಅಭಿಮಾನಿಗಳು, ಈ ಬಗ್ಗೆ ತಮ್ಮ ಲಕ್ಷ್ಯಹರಿಸಿ ಅನ್ಯಾಯವಾಗದಂತೆ ಇನ್ನಾದರೂ ನೋಡಿ-ಕೊಳ್ಳುವದು ಅವಶ್ಯವೆಂದು ಭಾವಿಸುತ್ತೇನೆ; ಹಾಗೂ ರಾಜ್ಯದ ತುಂಬೆಲ್ಲ ಈ ಬಗ್ಗೆ ಪ್ರತಿಕ್ರಿಯೆ ಹಾಗೂ ಚರ್ಚೆ ಉಂಟಾಗಲಿ ಎಂದೇ ಈ ಲೇಖನ.

ಕರ್ನಾಟಕ ಲೋಕ ಸೇವಾ ಆಯೋಗದವರು ಇತ್ತೀಚೆಗೆ ಹೆಡ್‌ಮಾಸ್ತರರ ಜಾಬ್‌ಗೆ ಅರ್ಜಿ ಕರೆದಿದ್ದರು. ಆ ಕಾಲಕ್ಕೆ ಅನೇಕ ವೀರಶೈವ ಅಭ್ಯರ್ಥಿಗಳು ಆ ಜಾಬ್‌ಗೆ ಸೂಕ್ತ ವ್ಯಕ್ತಿಗಳಾಗಿದ್ದರು. ಸಂದರ್ಶನವು ಜರುಗಿತು. ಆದರೆ ಅವರು ತಮ್ಮ ಅರ್ಜಿ-ಯಲ್ಲಿ "ಲಿಂಗವಂತ" ಎಂದು ನಮೂದಿಸಿದ್ದರಿಂದ ಅವರ ಅರ್ಜಿಯನ್ನು ಮಾನ್ಯ ಮಾಡಲಿಲ್ಲ. ಸರಕಾರವು "ವೀರಶೈವ-ಲಿಂಗಾಯತ" ಎಂಬುದನ್ನು "ಡಿ" ಗ್ರೂಪಿಗೆ ಸೇರಿದವರೆಂದು ಆಜ್ಞೆ ಜಾರಿಗೊಳಿಸಿದರೂ, ಅಭ್ಯರ್ಥಿಗಳನ್ನು "ಡಿ" ಗ್ರೂಪಿನ ಅಭ್ಯರ್ಥಿಗಳೆಂದು ಲೋಕ ಸೇವಾ ಆಯೋಗ ಪರಿಗಣಿಸಲಿಲ್ಲ. ನ್ಯಾಯವಾಗಿ ಸಿಗ-ಬೇಕಾಗಿದ್ದರಿಂದ ಸ್ಥಾನವು ಸಿಗದಂತಾಯಿತು. ಅಭ್ಯರ್ಥಿಗಳು ಈ ಬಗ್ಗೆ (ಘೋಷಣಾ ಪತ್ರ 'ಅಫಿಡೆವಿಟ') ಧೃಡೀಕರಣ ಪತ್ರ ಹಾಜರು ಮಾಡಿದಾಗ್ಯೂ ಲೋಕ ಸೇವಾ ಆಯೋಗ ಅವುಗಳನ್ನು ತಿರಸ್ಕರಿಸಿತು.

ಕರ್ನಾಟಕ ಲೋಕ ಸೇವಾ ಆಯೋಗದ ಈ ಆಜ್ಞೆಯ ವಿರುದ್ಧ ಮೇಲ್ಮನವಿಯನ್ನು ಕರ್ನಾಟಕ ಆಡ್ಮಿನಿಸ್ಟ್ರೇಟಿವ್, ಟ್ರಿಬುನಲ್ ಬೆಂಗಳೂರು ಇವರಿಗೆ ಸಲ್ಲಿಸಲಾ-ಯಿತು. ಟ್ರಿಬುನಲ್ ಸಹಾ "ಲಿಂಗಾಯತ" ಹಾಗೂ ಲಿಂಗವಂತ" ಬೇರೆ ಬೇರೆ ಎಂದು ನಿರ್ಣಯಿಸಿ ಅರ್ಜಿದಾರರ ಮೇಲ್ಮನವಿ ಕಿತ್ತು ಹಾಕಿದೆ. (ಅರ್ಜಿ ನಂ. 2787 ; 93) ಇನ್ನು ಉಳಿದ ಮಾರ್ಗವೆಂದರೆ ಅರ್ಜಿದಾರರು ಸುಪ್ರೀಮಕೋರ್ಟಿನ ಮೊರೆ ಹೋಗಬೇಕು ಅಥವಾ ರಾಜ್ಯ ಸರಕಾರದಿಂದ ಈ ಬಗ್ಗೆ ಸ್ಪಷ್ಟೀಕರಣ ಪಡೆಯಬೇಕು.

ಇಂಥ ಎಷ್ಟೋ ಪ್ರಕರಣಗಳಲ್ಲಿ ವೀರಶೈವರಿಗೆ ಅನ್ಯಾಯವಾಗಿದೆ. ಆಗುತ್ತಲಿದೆ. ನ್ಯಾಯವಾಗಿ ಸಿಗಬೇಕಾಗಿದ್ದ ಸರಕಾರದ ಸವಲತ್ತುಗಳಿಂದ ವೀರಶೈವರು ವಂಚಿತರಾಗಿದ್ದಾರೆ. ಈ ಬಗ್ಗೆ ಕೂಡಲೇ ಪ್ರತಿಭಟನೆ ರಾಜ್ಯದ ಎಲ್ಲ ಕಡೆಗಳಿಂದ ಬರಬೇಕು. ಆಗ ಮಾತ್ರ ಸರಕಾರ ಎಚ್ಚರಗೊಳ್ಳುವುದು.

ಜನಾಂಗ ದ್ವೇಷ-ಒಡೆದು ಆಳುವ ನೀತಿ ಹೊಂದಿರುವ ಸರ್ಕಾರಿ ಸಂಸ್ಥೆಗಳು

—ಮಾತಾಜಿ

ಬ್ರಿಟಿಷರು ಭಾರತವನ್ನು ಸುಲಭವಾಗಿ ಆಳುವ ಸಲುವಾಗಿ ಒಡೆದು ಆಳುವ ತಂತ್ರವನ್ನು ಅನುಸರಿಸಿದರು, ಆ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಕೆಲಸವನ್ನು ಈಗಿನ ಸರ್ಕಾರಗಳು ! ಮತ್ತು ಸರ್ಕಾರಿ ಸಂಸ್ಥೆಗಳು ಮಾಡುವಂತೆ ತೋರುತ್ತದೆ. ಇದಕ್ಕೆ ಶ್ರೀ ಎಂ. ಎಂ. ಹೂಲಿ ವಕೀಲರ ಪತ್ರವೇ ಸಾಕ್ಷಿ.

ಕರ್ನಾಟಕದಲ್ಲಿ ಬಹುಸಂಖ್ಯಾತರಾಗಿ, ಆ ರಾಜ್ಯಗಳಲ್ಲ ಸಾಕಷ್ಟು ಸಂಖ್ಯೆಯಲ್ಲಿ ದೂರದೂರದ ರಾಜ್ಯಗಳಲ್ಲಿ ಅಲ್ಪ ಸಂಖ್ಯಾತರಾಗಿಯೂ ಚದುರಿದಂತೆ ಇರುವ ಒಂದು ಸಮಾಜ–ಲಿಂಗವಂತ ಸಮಾಜ. ಇವರ ಧರ್ಮಸಾಹಿತ್ಯವಾದ ವಚನ ಸಾಹಿತ್ಯದಲ್ಲಿ ಲಿಂಗಾಯತ, ಲಿಂಗವಂತ ಎಂಬ ಪ್ರಯೋಗವಿದೆ. ಎರಡೂ ಒಂದೇ ಅರ್ಥ ಉಳ್ಳ ಪದಗಳು, ಕೇವಲ ಆಂತರಿಕ ವ್ಯತ್ಯಾಸವಿದ್ದರೂ ಅದು ಸೈದ್ಧಾಂತಿಕವಾದುದು ಸಾಮಾಜಿಕವಾದುದಲ್ಲ. ಉದಾಹರಣೆಗೆ, ಲಿಂಗವನ್ನು ಹೊಂದಿದವನು, ಧರಿಸಿದವನು ಲಿಂಗವಂತ ಎಂದಾದರೆ, ಇಷ್ಟಲಿಂಗವನ್ನು ದೀಕ್ಷೆಯ ಮೂಲಕ ಗುರುಕೃಪೆಯ ಮೂಲಕ ಹೊಂದಿ ಧರಿಸಿದವನು ಲಿಂಗಾಯತ ಎಂದರ್ಥ.

ಈ ಸಮಾಜದ ಸದಸ್ಯನಿಗೆ, ಈ ಧರ್ಮಾನುಯಾಯಿಗಳಿಗೆ ಅನ್ವಯಿಸುವ ಇನ್ನೊಂದು ಪದ ವೀರಶೈವ. ಇಂದು ಈ ಮೂರರಲ್ಲಿ ಯಾವುದನ್ನು ಬಳಸಿದರೂ ಅದು ಒಂದೇ ಅರ್ಥಕೊಡುವುದು. ಹೀಗೆ ರೂಢಿಯಲ್ಲಿ ಇರುವಾಗ 'ಲಿಂಗವಂತ' ಅಂತ ಬರೆದರೆ ಆ ಸರ್ಟಿಫಿಕೇಟನ್ನು ಕರ್ನಾಟಕದ ಲೋಕ ಸೇವಾ ಆಯೋಗ ಮಾನ್ಯ ಮಾಡುವುದಿಲ್ಲ ಎಂಬುದು ಎಷ್ಟು ಆಶ್ಚರ್ಯಕಾರಕ !

ಕರ್ನಾಟಕದ ಲೋಕ ಸೇವಾ ಆಯೋಗದವರು ಇತ್ತೀಚೆಗೆ ಹೆಡ್‌ಮಾಸ್ತರರ ಜಾಗಗಳಿಗೆ ಅರ್ಜಿ ಕರೆದಿದ್ದು, ಆಗ ಅರ್ಜಿದಾರರು ತಮ್ಮ ಅರ್ಜಿಗಳಲ್ಲಿ 'ಲಿಂಗವಂತ' ಎಂದು ನಮೂದಿಸಿದ್ದನ್ನು ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಸರ್ಕಾರವು ವೀರಶೈವ, ಲಿಂಗಾಯತರನ್ನು 'ಡಿ' ಗ್ರೂಪಿಗೆ ಸೇರಿದವರೆಂದು ಆಜ್ಞೆ ಜಾರಿಗೊಳಿಸಿದರೂ, ಲೋಕ ಸೇವಾ ಆಯೋಗ ಇದನ್ನು ಮಾನ್ಯಮಾಡಿಲ್ಲ ಎಂಬುದು ಆಶ್ಚರ್ಯ ಮತ್ತು ಖೇದಕರ ಸಂಗತಿ.

'ನೀವು ಯಾರ‍್ರೀ ?' ಅಂದ ತಕ್ಷಣ 'ಲಿಂಗವಂತರು' ಎಂದು ಅನಕ್ಷರಸ್ಥ ಹಳ್ಳಿ ಹೆಣ್ಣುಮಗಳೂ ಸಹ ಹೇಳುವಳು. ಅಂದಾಗ ಕರ್ನಾಟಕ ಲೋಕಸೇವಾ ಆಯೋಗವು ಎಷ್ಟು ಸೀಮಿತ ಲೋಕಜ್ಞಾನ ಉಳ್ಳದ್ದಾಗಿದೆ ಎನಿಸದೆ ಇರದು. ಈ ಬಗ್ಗೆ ಕರ್ನಾಟಕದ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್ ಬೆಂಗಳೂರು ಇವರಿಗೆ ಸಲ್ಲಿಸಲಾದ ಅರ್ಜಿ ಸಹ ಉಪಯೋಗವಾಗದೆ 'ಲಿಂಗಾಯತ' ಹಾಗೂ 'ಲಿಂಗವಂತ' ಬೇರೆ ಬೇರೆ ಎಂದು ಅದು ನಿರ್ಣಯಿಸಿರುವುದು ಇನ್ನೂ ಹಾಸ್ಯಾಸ್ಪದ. (ಅರ್ಜಿ ನಂ 2787:93). ಲಿಂಗಾಯತ, ಲಿಂಗವಂತ, ವೀರಶೈವ ಎಂದು ಹೇಳಿಕೊಳ್ಳುವ ಪ್ರತ್ಯೇಕ ಸಮಾಜಗಳಾಗಲೀ, ಜಾತಿ-ಗುಂಪುಗಳಾಗಲೀ ಇಲ್ಲ ಎಂದಾಗ ಲಿಂಗವಂತ–ಲಿಂಗಾಯತ ಬೇರೆ ಬೇರೆ ಎಂದು ಯಾವ ಬುದ್ಧಿವಂತರು ಕಂಡು ಹಿಡಿದರೊ ?

ಲೋಕ ಸೇವಾ ಆಯೋಗದ ಈ ಅಜ್ಞಾನ ಪೂರ್ಣ ತಿಳುವಳಿಕೆ ಮತ್ತು ನಡೆಯಿಂದ ಅರ್ಜಿಗಳಲ್ಲಿ ಲಿಂಗವಂತ ಎಂದು ಬರೆದ ಅನೇಕ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ. ಎಷ್ಟೊಂದು ಜನ ನ್ಯಾಯಾಧೀಶರು, ನ್ಯಾಯವಾದಿಗಳು, ಬುದ್ಧಿವಂತರು ಇದ್ದೂ ಸಹ ಈ ಬಗ್ಗೆ ನಿಷ್ಕ್ರಿಯರಾಗಿ ಕುಳಿತಿರುವುದನ್ನು ಕಂಡು ಆಶ್ಚರ್ಯ ಉಂಟಾಗುತ್ತದೆ. ಇಡೀ ಸಮಾಜದ ಆಗು ಹೋಗು ತನ್ನದೆಂದೇ ಭಾವಿಸಿ ಐದೋ ಹತ್ತೋ ವರ್ಷಕ್ಕೊಮ್ಮೆ ಸಿಂಹ ಗರ್ಜನೆ ಮಾಡಿ ಮಲಗುವ ಅಖಿಲ ಭಾರತ ವೀರಶೈವ ಮಹಾಸಭೆ ಮತ್ತು ಅದರ ಅಧ್ಯಕ್ಷರು ಇತ್ತ ಗಮನ ಹರಿಸಿ ಪರಿಹಾರ ಹುಡುಕುವುದು ಆದ್ಯ ಕರ್ತವ್ಯವಲ್ಲವೆ ?

★★

ಬಸವ ಧರ್ಮ ಪೀಠಕ್ಕೆ ದೇಣಿಗೆ ನೀಡಿದ ಸದ್ಭಕ್ತರು

(1993 ಸೆಪ್ಟಂಬರ್ ಸಂಚಿಕೆಯಿಂದ ಮುಂದುವರಿದುದು)

– ಕಟ್ಟಡ ನಿಧಿಗೆ –

ಸರ್ವಜ್ಞ ಶರಣಧಾಮದಲ್ಲಿ ಕೊಠಡಿ ಕಟ್ಟಲು

ಶರಣರುಗಳಾದ :

1	ಕರಿಬಸಪ್ಪ ಮಜ್ಜಗಿ, ರಾಣೇಬೆನ್ನೂರು	50,000–00
2	ಬಸವಣ್ಣೆಪ್ಪ ಮಲ್ಲಪ್ಪ ತೋಪಲಕಟ್ಟಿ, ಗಂಭ್ಯಾಪುರ	50,000–00
3	ನೀಲಮ್ಮ ಶಿವರಾಯಪ್ಪ ಶೀಲವಂತ, ಕಲಘಟಗಿ	50,000–00
4	ಗುಪ್ತ ದಾನಿ	50,000–00
5	ದಾನಪ್ಪ ಕೊಟ್ರುಬಸಪ್ಪ, ವೈಲಹಳ್ಳಿ	50,000–00
6	ಜಿ. ವಿ. ಪ್ರಸಾದರಾವ, ಜಾಲಿಹಾಳ	7001–00
7	ಶಿವಮೂರ್ತೆಪ್ಪ ಅಂದಾನಪ್ಪ ಪುಗಲಾಟದ, ಗದಗ	5001–00
8	ಗೂಳಪ್ಪ ಕರಿಬಸಪ್ಪ ಹೆರಕಲ್, ಗದಗ	5001–00
9	ಚಂದ್ರಶೇಖರಪ್ಪ ವಿ. ಬಡಿಗಣ್ಣನವರು, ಗದಗ	5001–00
10	ಗಂಗಾಧರಪ್ಪ ರಾಜಪ್ಪ ಬಾಳೀಕಾಯಿ	5001–00
11	ಶಂಕರಗೌಡ ಪಾಟೀಲ, ಬೆಳಗಾಂವ	5001–00
12	ಮಲ್ಲಪ್ಪ ಭೀಮಪ್ಪ ಗಡಗಲಿ, ಕೇಸ್ತಿ	5001–00
13	ಕೆ. ಎಂ. ಉಪ್ಪಿನ, ಬೆಳಗಾಂವ	5001–00
14	ಗುಪ್ತ ದಾನಿಗಳು, ಬೆಳಗಾಂವ	5001–00
15	ಪುಷ್ಪಾ ಲಿಂಗನಗೌಡ ಪಾಟೀಲ, ಬೆಳಗಾಂವ	5001–00
16	ಶ್ರೀಕಾಂತ ಶ್ರೀಶೈಲ ಸ್ವಾಮಿ, ನಿಪ್ಪಾಣಿ	5001–00
17	ಶಂಕರ ಬಸವಣ್ಣ ದೇವರಮನಿ, ಮುಸಲ್ಮಾರಿ	5001–00
18	ಶಶಿರೇಖಾ ರುದ್ರಪ್ಪ ಸಂಗಮ, ಬೆಳಗಾಂವ	5001–00
19	ಲೀಲಾವತಿ ಗುರುಪಾದಪ್ಪ ಗುಡೇದ, ಬೆಳಗಾಂವ	5001–00
20	ಡಾ॥ ಕಲ್ಲಗೌಡ ಬಾಳಗೌಡ ಪಾಟೀಲ,	5001–00
21	ಓರ್ವ ಶರಣೆ, ಮೈಸೂರು	2001–00
22	ಐ. ಆರ್. ಗೋರಬಾಳ, ಧಾರವಾಡ	2000–00
23	ಬೋಗಾ ನಂಜುಂಡಯ್ಯ, ಬೆಂಗಳೂರು	1000–00
24	ರೇವಮ್ಮ ಈಶ್ವರಪ್ಪ, "	1000–00
25	ರಮೇಶ ಪುಂಡಲೀಕಪ್ಪ ಮಡಿವಾಳರ, ಗದಗ	1000–00
26	ಡಾ॥ ಬಸವರಾಜ ರೂಡಗಿ, "	1000–00

27	ಈಶ್ವರಪ್ಪ [illegible] ಮುನವಳ್ಳಿ	ಗದಗ	1000–00
28	ಡಾ॥ ವಿ. ಎಸ್. ಹುಯಿಲಗೋಳ	"	1100–00
29	ಫಕೀರಪ್ಪ ಗಡ್ಡಿ	"	1100–00
30	ಡಾ॥ ಬಿ. ಎಂ. ಆಲೂರು	"	1100-00
31	ಭಾಗೀರಥಿ ಬಾಯಿ ಕದಮ್	"	1000-00
32	ಎ. ಎಸ್. ಪಾಟೀಲ	"	1000–00
33	ಶ್ರೀ ತೋಂಟದಾರ್ಯ ಮಠ	"	1000–00
34	ಚನ್ನಬಸಪ್ಪ ವೀರಬಸಪ್ಪಾ ಬಳ್ಳಾರಿ	"	1100-00
35	ಪ್ರೊ. ಜಿ. ಬಿ. ಹಳ್ಯಾಳ	"	1001-00
36	ಡಾ॥ ಗುರುಪಾದಪ್ಪ ರಾಹುತಪ್ಪ ತಮಗೊಂಡ, ಬೆಳಗಾಂವ		1001–00
37	ಎಸ್. ಬಿ. ಕಲ್ಯಾಣಶೆಟ್ಟರ, ಹುಬ್ಬಳ್ಳಿ		1001–00
38	ಎಸ್. ಎಂ. ಪಾಟೀಲ, ಬೆಳಗಾಂವ		1001-00
39	ವೀರಪ್ಪ ಸಿದ್ಧರಾಮಪ್ಪ ಕಂಬಾಳಿ, ಬೆಳಗಾಂವ		1001-00
40	ವಿರೂಪಾಕ್ಷಪ್ಪ ಕುಂದ್ರಾಳ, ಬೆಳಗಾಂವ		1001–00
41	ಡಿ. ಎಂ. ಸಾಬೋಜಿ, ಬೆಳಗಾಂವ		1001-00
42	ಬಾಳಗೌಡ ಗೌಡಪ್ಪ ಪಾಟೀಲ, ಬೆಳಗಾಂವ		1001–00
43	ಬಸವರಾಜ ಪರಪ್ಪ ನೇಮಗೌಡರ, ಬೆಳಗಾಂವ		1001–00
44	ಬಸವಣ್ಣೆಮ್ಮ ದುಂಡಪ್ಪ ಇಟಗಿ, ವಡಗಾಂವ		1001–00
45	ಕಲ್ಲಪ್ಪ ಶರಣಪ್ಪ ಮಂಟೂರು. ಬೆಳಗಾಂವ		1001–00
46	ಗಂಗವ್ವಾ ಬಸವಂತಪ್ಪ ಸಂದಣ್ಣವರ, ಬೆಳಗಾಂವ		1001-00
47	ಬಸಪ್ಪ ರಾಚಪ್ಪ ಜಿಗಜಿನ್ನಿ, ಬೆಳಗಾಂವ		1001-00
48	ಬಸವಣ್ಣೆಯ್ಯ ಮುದ್ದಯ್ಯ ಪುರಾಣಿಕಮಠ, ಬೆಳಗಾಂವ		1001–00
49	ಹೆಚ್. ಚಂದ್ರಶೇಖರ, ಬೆಂಗಳೂರು		1001–00
50	ನಾಗೇಂದ್ರಪ್ಪ, ಎಂಪಲ್ಲಿ, ಆಂಧ್ರ		1001–00
51	ಡಾ॥ ಶಿವಗೌಡ ಬಾಳಗೌಡ ಪಾಟೀಲ, ಸಂಕೇಶ್ವರ		1001–00

ಹೈದರಾಬಾದ್ ಸಮ್ಮೇಳನ-ಸ್ಥಳ ಬದಲಾವಣೆ

ಆಂಧ್ರ ಪ್ರದೇಶದ ರಾಜಧಾನಿ ಹೈದರಾಬಾದಿನಲ್ಲಿ ಅಖಿಲ ಭಾರತ ಬಸವ ಧರ್ಮ ದ್ವಿತೀಯ ಸಮ್ಮೇಳನವು 1994ರ ಮೇ–21–22 ರಂದು ನಡೆಯುತ್ತಿದೆಯಷ್ಟೆ. ಈ ಮೊದಲು ಬಸೀರಾ ಬಾಗ್‌ದಲ್ಲಿರುವ ನಿಜಾಮು ಕಾಲೇಜ್ ಮೈದಾನ ಎಂದು ತಿಳಿಸಲಾಗಿದ್ದಿತು. ಮತ್ತೊಂದು ಮೈದಾನಕ್ಕೆ ಪ್ರಯತ್ನ ಮಾಡುತ್ತಿದ್ದು ಈಗ ಅದು ಲಭ್ಯವಾಗಿದೆ. ಆದ್ದರಿಂದ ಸಮ್ಮೇಳನದ ಸ್ಥಳ ನ್ಯಾಮಪಲ್ಲಿ ಪ್ರದೇಶದಲ್ಲಿರುವ **ಅಖಿಲ ಭಾರತ ಔದ್ಯಮಿಕ ಪ್ರದರ್ಶನ ಮೈದಾನ** (All India Industrial Exhibition Ground, Nyampalli, Hyderabad) ಎಂದು ತಿಳಿಯಬೇಕು. ದಿನಾಂಕಗಳಲ್ಲಿ ಬದಲಾವಣೆ ಇಲ್ಲ.

ಬಸವ ಧರ್ಮ ಪೀಠದ ದಾಸೋಹ ನಿಧಿಗೆ 1111-00 ರೂ. ದಾಸೋಹಿಗಳು

(ಸೆಪ್ಟಂಬರ್ 1993 ರಿಂದ ಮುಂದುವರಿದುದು)

ಶರಣರುಗಳಾದ :

ಕ್ರ. ಸಂಖ್ಯೆ	ಹೆಸರು	ಊರು
1444	ಚಂಪಾಬಾಯಿ ಮಹಾದೇವ ಗಾಡವೆ	ಮೀರಜ್
1445	ಸುಶೀಲಾ ರಾಮಗೊಂಡ ಪಾಟೀಲ	"
1446	ಶ್ರೀ ಬಸವೇಶ್ವರ ಕನ್ನಡ ಮೈತ್ರಿ ಸಂಘ	ಕನಕಹಳ್ಳಿ
1447	ಜಿ. ಸಿ. ತಿಪ್ಪೇಸ್ವಾಮಿ	ಚಿತ್ರದುರ್ಗ
1448	ಶರಣೆ. ಶಾಂತಲಾ	ಜತ್
1449	ಮಹಾದೇವಿ ಬಾಳಾಸಾಹೇಬ ಮಲ್ಲಪ್ಪ ಕಟಾವೆ	ಜತ್
1450	ಸುಶೀಲಾ ಬಸಗೊಂಡ ಶಿವಪ್ಪ ಪಟ್ಟದ	"
1451	ಸಿದ್ಧಪ್ಪ ಗುರುಪಾದಪ್ಪ. ಬಿಜ್ಜರಗಿ	"
1452	ಗುರಪ್ಪ. ವಿರುಪಾಕ್ಷಪ್ಪ ಮೋದಿ.	"
1453	ಶಶಿಕಲಾ. ಸಂಭಾಶ್‌ಅಂಕಲಗಿ	"
1454	ಬಸಪ್ಪ ಮಲ್ಲಪ್ಪ ಮೊಗಲಿ	"
1455	ಮಹಾದೇವಪ್ಪ ಗಾಡವೆ.	ಮೀರಜ್
1456	ಅಣ್ಣಪ್ಪ. ಬಾಬೂರಾವ್. ಐನಾಪುರೆ	ಜತ್
1457	ಗಣೇಕಲ್. ಶರಣಪ್ಪ ಗೌಡ	ರಾಯಚೂರು
1458	ಡಿ. ಶಂಕರಗೌಡ	ಕುರಿಹಟ್ಟಿ
1459	ಸರೋಜಮ್ಮ. ವಿ. ರಟ್ಟಿಹಳ್ಳಿ	ಹುಬ್ಬಳ್ಳಿ
1460	ಮಹಾದೇವಿ. ಚದಶೇಖರ. ಜವಳಿ.	ಹುಬ್ಬಳ್ಳಿ
1461	ಶರಣ. ಎ. ಎಂ. ಗಂಜಾಳ್	ವಿಜಾಪುರ
1462	ಸೋಮಶೇಖರ. ನಿಂಬಣ್ಣ, ಕುಲಕರ್ಣಿ	ಗದಗ
1463	ಗುಪ್ತದಾನ	"
1464	ಎಂ. ಕೃಷ್ಣಪ್ಪನವರು	ಬೂದಿಗೆರೆ
1465	ಎಂ. ನಾರಾಯಣ ಸ್ವಾಮಿ	ಬೂದಿಗೆರೆ
1466	ಎ. ಶಿವಾನಂದ	ಬೆಂಗಳೂರು
1467	ಎಸ್. ಮಾಳಿಗೆಪ್ಪ	ವಿಜಯಪುರ
1468	ಲೀಲಾವತಿ W/o ಕೆ. ಸತ್ಯನಾರಾಯಣ	ಶಿವಮೊಗ್ಗ
1469	ಯಲ್ಲಮ್ಮ. W/o ಲೇಟ್॥ ನಾಗರಾಜರಾವ್	ಶಿವಮೊಗ್ಗ

1470 ಶ್ರೀ. ಕೆ. ನಾಗೇಶ್ ರಾಯಕರ್ ಶಿವಮೊಗ್ಗ
1471 ಗಂಗಾಂಬಿಕೆ. W/o ಹೆಚ್. ಎಸ್. ಬಸವರಾಜು ಭದ್ರಾವತಿ
1472 ರತ್ನಮ್ಮ. W/o ಬಿ. ಸಿ. ಮಹಾಲಿಂಗಪ್ಪ ಭದ್ರಾವತಿ
1473 ಜಿ. ಸಿ. ಮಂಜುನಾಥ ಪ್ರಸಾದ್ ತಿಪಟೂರು
1474 ಶರಣ. ಲಿಂಗೇಗೌಡ ಅಂತರಗಂಗೆ
1475 ಶಕುಂತಲಾ. W/o ಚಂದ್ರಶೇಖರಯ್ಯ ಐಮಂಗಲ
1476 ಶ್ರೀಮತಿ ಗೌರಮ್ಮ W/o ಶಂಕ್ರಯ್ಯ ಗಣಾಚಾರಿ ಹಳ್ಳಿಖೇಡ
1477 ಸುಭಾಷ್ ರಾಚಪ್ಪ ಅವ್ವಕ್ಕನವರ ಶೇಗುಣಸಿ
1478 ಶಿವಪುತ್ರಪ್ಪ ದುಂಡಪ್ಪ ಕೋಟೆ ಇಚಲಕರಂಜಿ
1479 M/s ಬಸವೇಶ್ವರ ಫೈನಾನ್ಸ್ ಕಣಗಾವ್
1480 ಶ್ರೀ ಮಹಾಲಕ್ಷ್ಮೀ ಫೈನಾನ್ಸ್ ಕಣಗಾವ್
1481 ಶ್ರೀ ಬಸವೇಶ್ವರ ಆಯಿಲ್ ಮಿಲ್ ಬೈಲಹೊಂಗಲ
1482 ಕೃಷಿ ಇಲಾಖೆ (ಭೂಸಾರ ಸಂರಕ್ಷಣ) ಬೈಲಹೊಂಗಲ
1483 ಶ್ರೀಮತಿ ಜಯಮ್ಮ ಗುರುಸಿದ್ಧಯ್ಯ ಬೆಂಗಳೂರು
1484 ಎ. ತಿಮ್ಮೇಗೌಡ ಗದಗ
1485 ಡಿ. ಸಿ. ಗುಡಗೀನ್ ಬೆಟಗೇರಿ
1486 ಪಕೀರಪ್ಪ ಬಸಪ್ಪ ಕುರ್ತಕೋಟಿ ಕುರ್ತಕೋಟಿ
1487 ಶ್ರೀಮತಿ ದೊಡ್ಡಮ್ಮ ತಿಪ್ಪಣ್ಣ ಅಣ್ಣಿಗೇರಿ ಬೆಟಗೇರಿ
1488 ಎಸ್. ಎಂ. ಬೆಂಗಳೂರು ಅಂಡ್ ಸನ್ಸ್ ಗದಗ
1489 ಶ್ರೀ ರಾಮಣ್ಣಾ ದ್ಯಾಮಪ್ಪಾ ಕಪಲಿ ಗದಗ
1490 ಪ್ರೊ. ಎಸ್. ಎ. ಸಂಕನೂರ ಗದಗ
1491 ಅಂದಾನಪ್ಪ ಶಾಂತಪ್ಪ ಚವಡಿ. ಗದಗ
1492 ಶರಣ. ಬಸಪ್ಪ ಶಿವಬಸಪ್ಪ ಬೆಲ್ಲದ. ಗದಗ
1493 ಶ್ರೀ ನಾಗಪ್ಪ ವೀರಪ್ಪ ಲಕ್ಕುಂಡಿ. ಬೆಟಗೇರಿ
1494 ಶ್ರೀಮತಿ ಸಾವಿತ್ರಮ್ಮ ಕೂಡಲಸಂಗಮ
1495 ಡಾ॥ ಅಡಿವೆಪ್ಪ ಚನ್ನಬಸಪ್ಪ ಹೂಲಿ. ರೋಣ
1496 ಶ್ರೀ ಮಲ್ಲಪ್ಪಾ ಭೀಮಪ್ಪ ಅರಹುಣಸಿ. ಹುನಗುಂದ
1497 ಶ್ರೀ ರಮೇಶ ಬಾಣದ ಮೇದೂರು
1498 ಗೌರಮ್ಮಾ. ಕೋಂ. ಗುರುಸಿದ್ಧಪ್ಪ ಲಕ್ಷ್ಮೇಶ್ವರ ರೋಣ
1499 ಕುಮಾರ ಶಂಕರಪ್ಪ ತೇಲಿ ರೋಣ
1500 ಅಮರೇಶ ಗುಂಡಪ್ಪ ಬೂದಿಹಾಳ ರೋಣ
1501 ಬಸವರಾಜ ಅಡಿವೆಪ್ಪ ಜಿಡ್ಡಿಬಾಗಿಲು ರೋಣ
1502 ಯಲ್ಲಪ್ಪಗೌಡ ಶಿವಬಸವನಗೌಡ ಕುರುಬನಾಳ, "

1503 ಬಸಮ್ಮನವರು. ಕೋಂ. ಸಂಗನಗೌಡ ಪಾಟೀಲ ರೋಣ
1504 ಸದಾಶಿವ ವೀರಭದ್ರಯ್ಯ ಹಿರೇಮಠ "
1505 ಶ್ರೀ ತಿಪ್ಪಣ್ಣಾ ಮೈಲಾರಪ್ಪ ಹವಳಪ್ಪನವರ "
1506 ಶ್ರೀ ಬಸವರಾಜ ಹೊನ್ನಪ್ಪ ಮಡಿವಾಳರ "
1507 ಕೊಟ್ರಪ್ಪ ಬಸಪ್ಪ ಸಜ್ಜನರ "
1508 ಗುರುಪಾದಪ್ಪ ವೀರಪ್ಪ ಮುಧೋಳ "
1509 ಇಂದಿರಾದೇವಿ ಡಿ. ವೀರಣ್ಣ C/o ಡಿ. ವೀರಣ್ಣ ಚಳ್ಳಕೆರೆ
1510 ಶ್ರೀಮತಿ ಪ್ರಮೀಳಾ ಕೆ. ಮಹಾಭದ್ರಪ್ಪ ಬೆಂಗಳೂರು
1511 ಶ್ರೀ ಟಿ. ಎಂ. ಶಂಭು ಮಿರಜ್
1512 ಎಮ್. ಆಯ್. ಮುನವಳ್ಳಿ ಹಟ್ಟಿ
1513 ಮಲ್ಲರೆಡ್ಡಿ ಮಹಾದೇವಪ್ಪ ಪಾಟೀಲ ಜಮಖಂಡಿ
1514 ಎಂ. ಸಿ. ಹಿರೇಮಠ ರಾಯಬಾಗ
1515 ನಿಂಗಪ್ಪ ಜಕ್ಕಪ್ಪ ನಾಯಕ ಬೀದರ
1516 ವೀರಭದ್ರಪ್ಪ ಸ್ವಾಮಿ ಅವರಾದಶಿರ್ಶ ಗಡಹಿಂಗ್ಲಾಜ್
1517 ಕೆಂಪಣ್ಣ ಸಿದ್ಧಪ್ಪ ಅಮ್ಮಣಗಿ ತಡಕೋಡ
1518 ಯಲ್ಲಣಗೌಡ ಗೌಡಪ್ಪ ಪಾಟೀಲ ಹಟ್ಟಿ
1519 ಮಲ್ಲರೆಡ್ಡೆಪ್ಪಾ ಮಹಾದೇವಪ್ಪ ಪಾಟೀಲ ಶಿವಮೊಗ್ಗ
1520 ಶ್ರೀಮತಿ ಶಿವಗಂಗಮ್ಮ W/o. ಲಿಂ॥ಟಿ.ಆರ್. ಬಸವರಾಜಪ್ಪ ಚಿತ್ರದುರ್ಗ
1521 ಎಂ. ಪುಟ್ಟರುದ್ರಪ್ಪ ಕೆ.ಎಸ್.ಆರ್.ಟಿ.ಸಿ ಹೆಬಸೂರ
1522 ವಿಮಲಾ. ಎಂ. ಪಾಟೀಲ ನದಿ ಇಂಗಳಗಾಂವ
1523 ಸದಾಶಿವ. ಬಸಪ್ಪ ಠಕ್ಕಣ್ಣವರ ಹೊಕ್ರಾಣಿ
1524 ನಾಗಶೆಟ್ಟಿ. S/o ಕಾಮಶೆಟ್ಟಿ ಹೊಕ್ರಾಣಿ ನಿಪ್ಪಾಣಿ
1525 ಶ್ರೀಮತಿ. ಕೆಂಪವ್ವ ಶಿವಬಾಳ ದುಮಾಲೆ ಬಳ್ಳಾರಿ
1526 ಬಿ. ಕೆ. ಮಂಜುನಾಥ ಗುಲಬರ್ಗಾ
1527 ಶ್ರೀಮತಿ ಜಗದೇವಿ ಲಿಂಗರಾಜ ವಿಜಾಪುರ
1528 ಬಿ.ಆರ್. ಹನುಮಂತಮ್ಮ ಬೆಳಗಾವಿ
1529 ಶ್ರೀ ಶೈಲಪ್ಪ ಗಟ್ಟಗೆಪ್ಪ ಜವಳಿ ಹುಬ್ಬಳ್ಳಿ
1530 ಲಿಂಗರಾಜ ಶಿವಪ್ಪ ಇಂಗಳಹಳ್ಳಿ ಶಿರಚಂದ
1531 ಮಲ್ಲೇಶಪ್ಪ ಗುಂಡಪ್ಪ ಕಲಶೆಟ್ಟಿ ತಾವರಕೇರೆ
1532 ಟಿ. ಡಿ. ಚನ್ನಬಸಪ್ಪ ಚೆನ್ನೂರು
1533 ವಿಶ್ವಗುರು ಬಸವಣ್ಣ ಮೂರ್ತಿ ಪ್ರತಿಷ್ಠಾಪನಾ ಸಮಿತಿ ಬೀದರ
1534 ಚಂದ್ರಕಾಂತ ಮಿರ್ಚಿ

1535	ಸುರೇಶ ಜ್ಯೋತಿಬಾ ರೊಳೆಕೆರ	ಕಲಘಟಗಿ
1536	ಎಸ್. ಕೆ. ಕೆಂಡದಮಠ	"
1537	ಚಂದ್ರಶೇಖರ ನೀಲಪ್ಪ ಗೌಡಣ್ಣವರ	"
1538	ಬಸವಣ್ಣಯ್ಯಾ ಬೂದಯ್ಯಾ ಹೆಬ್ಬಳ್ಳಿಮಠ	"
1539	ಪ್ರಭಪ್ಪ ಭರಮಪ್ಪ ಹೊರ್ತಿಕೋಟೆ	ಮಂಕನಕೊಪ್ಪ
1540	ಇಂದುಮತಿ ಮಹಾದೇವಪ್ಪ ಮಣ್ಣೂರ	ಕಲಘಟಗಿ
1541	ಶಿವಪುತ್ರಪ್ಪ ಮಲ್ಲೇಶಪ್ಪ ಹುಲ್ಮನಿ	ಜಿನ್ನೂರು
1542	ಶ್ರೀ ಗುರು ಟ್ರೇಡಿಂಗ್ ಕಂಪನಿ	ಕಲಘಟಗಿ
1543	ಗೌರಮ್ಮ ಶಾಂತರಾಜ ಕಡ್ಲಿ	"
1544	ಸಂಗವ್ವಾ ನಿಂಗಪ್ಪ ಕೊಟಗುಣಸಿ	ನರವಿಗಟ್ಟಿ
1545	ಚನ್ನಪ್ಪ ಈರಪ್ಪ ಬಾಬಜಿ	ಕಲಘಟಗಿ
1546	ಶಿವಲಿಂಗಪ್ಪ ಫಕೀರಪ್ಪ ಅಂಗಡಿ	ದುಮ್ಮವಾಡ
1547	ರೇವಣಸಿದ್ದಪ್ಪ ಕಲ್ಲಪ್ಪ ಪೀರಣ್ಣವರ	ಕಲಘಟಗಿ
1548	ಶಾಂತಮ್ಮ ಕೊಂ ನಾಗಪ್ಪ ದುಮ್ಮನವರ	ಗಂಭ್ಯಾಪೂರ
1549	ಸಂಗಪ್ಪ ಬಸವಣ್ಣೆಪ್ಪ ರೊಟ್ಟಿ	"
1550	ಮಹಾದೇವಪ್ಪ ಸಿದ್ಧಪ್ಪ ಹದ್ದಣ್ಣವರ	
1551	ಗೌಡಪ್ಪ ಬಸಪ್ಪ ದನಿಗೊಂಡ	ಕಲಘಟಗಿ
1552	ಗೌರಮ್ಮಾ ಬಾಬುರಾವ್ ಸಂಗೊಳ್ಳಿ	ಬೆಳಗಾವಿ
1553	ವೀರೇಂದ್ರ ಎಸ್. ಪಾಟೀಲ	"
1554	ಶಾರದಾ ಬಸವಣ್ಣಯ್ಯಾ ಪುರಾಣಿಕಮಠ	ಬೈಲಹೊಂಗಲ
1555	ಎಮ್. ಎಮ್. ಶಿರೂರ	ಬೆಳಗಾವಿ
1556	ಮಲ್ಲಪ್ಪಾ ಚೆನ್ನಬಸಪ್ಪಾ ವಿರೂಪಾಕ್ಷಿ	"
1557	ಕಮಲಕ್ಕ ಬಿ. ಶಂಕಾನಂದ	"
1558	ಬಾಳಗೌಡಾ ಬೈರಗೌಡಾ ಪಾಟೀಲ	ಕಣಬಾಗಿ
1559	ಮಲ್ಲಿಕಾರ್ಜುನಪ್ಪ ಬಸವಲಿಂಗಪ್ಪ. ಬಾಬಾನಗರ	ಬೆಳಗಾವಿ
1560	ಭೀಮಪ್ಪ ಮಹಾದೇವ ಖಾಡಿ	ಬೆಳಗಾವಿ
1561	ಗಂಗಪ್ಪಾ. ಗುರುಸಿದ್ಧಪ್ಪಾ ತಮ್ಮರಗುದ್ದ	"
1562	ನಿರಂಜನಗೌಡ ಬಸವನಗೌಡ ಪಾಟೀಲ	"
1563	ಅಶೋಕ ಪಡೆಪ್ಪ ಮರಕಟ್ಟಿ	"
1564	ಚಂದ್ರಯ್ಯಾ ದುಂಡಯ್ಯಾ ಹಿರೇಮಠ	"
1565	ಸದಾನಂದ ವಿರುಪಾಕ್ಷಿ ಕಿತ್ತೂರು	"
1566	ಶೋಭಾವತಿ ವಿರೂಪಾಕ್ಷಪ್ಪ ಝೋಂಡ	"
1567	ಎಸ್. ಪಿ. ಪಾಟೀಲ.	"
1568	ಬಸವರಾಜ ಫರಪ್ಪ ನೇಮಗೌಡ್ರ.	"

1569	ಗಿರಿಮಲ್ಲಪ್ಪಾ ನಾಗಪ್ಪ ಇಂಡಿ	ಬೆಳಗಾವಿ
1570	ಕಲ್ಲಗೌಡ ರಾಮಗೌಡಾ ಪಾಟೀಲ	"
1571	ಮಲ್ಲಿಕಾರ್ಜುನ ಸಿ. ಕರಿಂಡಿ	ಧಾರವಾಡ
1572	ಅಶೋಕ ಗಿರಿಯಪ್ಪ ಕೋಹಳ್ಳಿ	ಅಲಗೂರ
1573	ವಿರುಪಾಕ್ಷಪ್ಪ ಯಂಡ್ರಾಮಿ	ಬೆಳಗಾವಿ
1574	ಅಣ್ಣಾಸಾಹೇಬ ವೀರಗೌಡ ಪಾಟೀಲ	"
1575	ಗುರುನಾಥ ಬಸವಂತರಾವ ಕುಲಕರ್ಣಿ	ಹೆಗಡಿಹಾಳ
1576	ನಿಂಗಪ್ಪ ಗಂಗಪ್ಪ ಕರೆಣ್ಣನವರ	ಬೆಳಗಾವಿ
1577	ಐ. ವಿ. ಜತ್ತಿ	"
1578	ಶಕುಂತಲಾ ಗಣಪತಿ ನರಸಣ್ಣವರ	"
1579	ನಾಗಪ್ಪ ಬಸಪ ಎಮ್ಮಿ	"
1580	ಮಲ್ಲಿಕಾರ್ಜುನ ಬಾಬುರಾವ್ ಹಿಡದುಗ್ಗಿ	"
1581	ಎಸ್. ಎಸ್. ಬಾಗಿ	"
1582	ಬಿ. ವಿ. ಕಟ್ಟಿ.	"
1583	ಪ್ರಭಾಕರ. ಬಿ. ಕೋರೆ	ಬೆಳಗಾವಿ
1584	ಪ್ರಭಯ್ಯಾ ದುಂಡಯ್ಯಾ ಜಡೇಮಠ	ಕುಂದರಗಿ
1585	ಡಾ॥ ಕಲ್ಲಗೌಡ ಬಾಳಗೌಡ ಪಾಟೀಲ	ಕಣಬಾರಿ
1586	ಮಲ್ಲಿಕಾರ್ಜುನ ಮಲ್ಲಪ್ಪ ಸತ್ತಿಗೇರಿ	ಗೋಕಾಕ
1587	ವಿಜಯಾ ಮಾಬರೂಕರ.	ಮನಗೂಳಿ
1588	ಭೋಗಾ ನಂಜುಂಡಯ್ಯಾ,	ಬೆಂಗಳೂರು
1589	ಶಾರಾದಾದೇವಿ ಶಿವನಾಗಪ್ಪ ಪಡಶೆಟ್ಟಿ	ಗುಲಬರ್ಗಾ
1590	ಸಿದ್ಧರಾಮಪ್ಪ ಚಿಲಗುಂದಿ	ಗುಲಬರ್ಗಾ
1591	ಗುಪ್ತದಾನಿ,	ಮೈಸೂರು
1592	ಉಮಾ ಚಂದ್ರಪ್ಪ C/o ಸರೋಜಮ್ಮ ರಾಮಸಿಂಗಪ್ಪ	ಮೈಸೂರು
1593	ಬಿ. ಲಿಂಗಾರೆಡ್ಡಿ ಮೈಲನಹಳ್ಳಿ	ಚಳ್ಳಕೆರೆ

(ಮುಂದುವರಿಯುವುದು)

ಇನ್ನಿತರ ದೇಣಿಗೆ

೧. ಶರಣೆ. ಶಿವಗಂಗಮ್ಮನವರು ತಮ್ಮ ಲಿಂಗೈಕ್ಯ ಪತಿ ಶರಣ. ಟಿ. ಆರ್. ಬಸವ ರಾಜು, ಶಿವಮೊಗ್ಗ ಇವರ ಹೆಸರಿನಲ್ಲಿ ಜೇಷ್ಠ ಹುಣ್ಣಿಮೆ ದಾಸೋಹಕ್ಕೆ 5000 ರೂಗಳ ದೇಣಿಗೆ ಪುದುವಟ್ಟು ಇಡಲು ಕೊಟ್ಟಿದ್ದಾರೆ.

೨. ಡಾ॥ ನಿತಿನ ಚಂದ್ರ ಹತ್ತೀಕಾಳ, ಧಾರವಾಡ ಇವರು **ಪೂಜ್ಯ ಮಾತಾಜಿ** ಯವರ ಹುಟ್ಟುಹಬ್ಬದ ಕಾಣಿಕೆ ಎಂದು 1313 ರೂ. ಕೊಟ್ಟಿದಾರೆ. 13 ಅವರ ದೃಷ್ಟಿಯಲ್ಲಿ ಅದೃಷ್ಟ ಸಂಖ್ಯೆ, ಅದಕ್ಕೇ ಈ ರೀತಿ ಜೋಡಣೆ,

ಬಸವ ಧರ್ಮ ಪೀಠ ಆಜೀವ ಸದಸ್ಯತ್ವ

ಕೆಲವರು ಶರಣ ಬಂಧುಗಳು ಸಂಸ್ಥೆಗೆ ಆಜೀವ ಸದಸ್ಯತ್ವ ಎಂದು ಸ್ವೀಕರಿಸಿ, ಆಗಾಗ ನಡೆಯುವ ವಿಶೇಷ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆ ಕಳಿಸಬೇಕೆಂದು ಕೋರಿ, ಸಲಹೆ ನೀಡಿರುವರು. ಈ ಸಲಹೆಯನ್ನು ಜಾರಿಗೆ ತರಲಾಗುತ್ತಿದೆ. ಬಸವ ಧರ್ಮ ಪೀಠ, ಕೂಡಲ ಸಂಗಮ ಮತ್ತು ವಿಶ್ವಕಲ್ಯಾಣ ಮಿಷನ್ ಬೆಂಗಳೂರು–ಈ ಎರಡೂ ಸಂಸ್ಥೆಗಳ ಪರವಾಗಿ ಆಜೀವ ಸದಸ್ಯತ್ವ ಶುಲ್ಕ 1000 ಸ್ವೀಕರಿಸಿ, ಈ ಸಂಸ್ಥೆಗಳಿಂದ ಏರ್ಪಾಡಾಗುವ ವಿಶೇಷ ಕಾರ್ಯಕ್ರಮಗಳ ವಿವರ, ಆಹ್ವಾನ ಪತ್ರ ಕಳಿಸಲಾಗುವುದು.

1. ಶರಣ. ಗಣೇಕಲ್ ಶರಣಪ್ಪಗೌಡ, ರಾಯಚೂರು 1000–00
2. ಶರಣ. ಲಿಂಗನಗೌಡರ. ಬ. ಬಿರಾದಾರ, ಜಮಖಂಡಿ 1000–00
3. ಶರಣೆ. ಭಾರತಿ ಕುಮಾರ್, ರಾಣೇಬೆನ್ನೂರು 1000–00
4. ಶರಣೆ. ಪ್ರಮೀಳಾ ನಂಜುಂಡಪ್ಪ, ಮೈಸೂರು. 1000–00
5. ಸಿ. ಎಸ್. ಸಿಕ್ಕೇದೇಸಾಯಿ, ಅಣ್ಣಿಗೇರಿ 1001–00

ಅಕ್ಷಯ ನಿಧಿ

ಬಸವ ಧರ್ಮ ಪೀಠ ಮತ್ತು ವಿಶ್ವಕಲ್ಯಾಣ ಮಿಷನ್‌ದ ಅನೇಕ ಅಭಿಮಾನಿಗಳು ನಿರಂತರವಾಗಿ ದೇಣಿಗೆ ಕೊಡುತ್ತಿರುತ್ತಾರೆ. ಚಾಲನೆಯಲ್ಲಿರುವ ಎಲ್ಲ ಯೋಜನೆಗಳಿಗೆ ಧನ ಸಹಾಯ ಮಾಡಿಯೂ ಸಹ ಪ್ರತಿವರ್ಷವೂ ಆಗಾಗ ಅಥವಾ ವರ್ಷಕ್ಕೊಮ್ಮೆ ಧನ ದಾಸೋಹ ಮಾಡುತ್ತಾರೆ. ಅದಕ್ಕಾಗಿ ಅಕ್ಷಯ ನಿಧಿ ಎಂಬ ವಿಭಾಗ ತೆರೆಯಲಾಗಿದ್ದು ಅದರಲ್ಲಿ ಅವರ ಹೆಸರನ್ನು ಬರೆದು, ಹಣ ಕೊಟ್ಟಾಗಲೆಲ್ಲ ಅದರಲ್ಲಿ ಸೇರಿಸಿ ಈ ದೇಣಿಗೆಯನ್ನು ಕಟ್ಟಡ ನಿಧಿಯನ್ನಾಗಿ ಬಳಸಿಕೊಳ್ಳಲಾಗುವುದು. ಆದ್ದರಿಂದ ಹಾಗೆ ದೇಣಿಗೆ ಕೊಡುವಾಗ ಅಕ್ಷಯ ನಿಧಿ ಖಾತೆ ಎಂದು ಕಾರ್ಯಕರ್ತರಿಗೆ ಸೂಚಿಸಬೇಕು. ಇದು ಕಟ್ಟಡ ನಿಧಿಗೆ ವಿನಿಯೋಗವಾಗುತ್ತದೆ.

1. ಬಿ. ಎಸ್. ರುದ್ರಪ್ಪ, ಬಿದರೆ 1001–00
2. ಶಂಕರಪ್ಪ ಪಾಟೀಲ, ಕುಸನೂರು 1001–00

ದಾಸೋಹಿಗಳಾದ ಎಲ್ಲ ಶರಣ ಬಂಧುಗಳಿಗೆ ವಿಶ್ವಗುರು ಬಸವಣ್ಣನವರು ಮತ್ತು ಸೃಷ್ಟಿಕರ್ತನು ಆಯುರಾರೋಗ್ಯ ಭಾಗ್ಯ ಸಕಲ ಸಂಪದ ನೀಡಲೆಂದು ಹಾರೈಸುತ್ತೇವೆ.

ವಿಶೇಷ ಸೂಚನೆ :

1. ಧರ್ಮಗ್ರಂಥ ನಿಧಿಗೆ 1001–00ರೂ ಕೊಟ್ಟವರ ಯಾದಿ ದೊಡ್ಡದಿದೆ, ಸ್ಥಳಾಭಾವದಿಂದ ಈಗ ಪ್ರಕಟಿಸುತ್ತಲಿಲ್ಲ. ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.
2. 501–00 ರೂ. ಪೂಜಾನಿಧಿ, ಕಟ್ಟಡ ನಿಧಿಗೆ ಕೊಟ್ಟವರ ಸಂಖ್ಯೆಯೂ ಬಹಳ ಇದೆ. ಸ್ಥಳಾಭಾವದಿಂದ ಪ್ರಕಟಿಸಲು ಸಾಧ್ಯವಾಗುವುದಿಲ್ಲ.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ದೈವೀ ಅನುಗ್ರಹಕ್ಕೆ ಸಾಕ್ಷಿ ಹೇಗೆ?

—ಮಾತಾಜಿ.

ದೇವರು, ದೇವನ ಪ್ರತಿನಿಧಿಯಾದ ಬಸವಣ್ಣನವರು ಈಗ ನಿರಾಕಾರ ಸ್ವರೂಪರು. ಅವರ ಕೃಪೆ ಹೇಗೆ ಹೇಗೆ ಹರಿದು ಬರಬಲ್ಲುದು ? ದೈವೀ ಕೃಪೆ (Divine grace) ಹರಿದು ಬರುವುದೆಂಬುದಕ್ಕೆ ಸಾಕ್ಷಿ ಏನು ?

ಪ್ರಯಾಣ ಮಾಡುತ್ತ ದಿ. 2–4–1994 ರಂದು ಸಂಜೆ ಬೀದರ ತಲ್ಪಿದೆ. ಹಿಂದಿನ ದಿನ ಒಂದು ಬಗೆಯ ಆಂತರಿಕ ಪ್ರೇರಣೆಯಾಯಿತು. ಬಸವ ಧ್ವಜಾರೋಹಣವನ್ನು ವಧುವರರ ಕೈಯಿಂದ ಮಾಡಿಸಿ, ನಂತರ ವಿವಾಹ ಮಂಟಪಕ್ಕೆ ಕರೆದೊಯ್ಯುವ ಪರಿಪಾಠ ಏಕೆ ಹಾಕಬಾರದು ? ಸಂಕಲ್ಪ ಪೂರ್ವಕವಾಗಿ ವಧುವರರು ಧ್ವಜಾರೋಹಣ ಮಾಡಿ, ವಿವಾಹದಲ್ಲಿ ಪಾಲುಗಾರರಾಗುವುದು ಚಂದವಲ್ಲವೆ ?

ಈ ವಿಚಾರವನ್ನು ಬಸವಕುಮಾರಗೆ ಹೇಳಿದೆ. ಅವರು ಅಂದರು, "ಇಲ್ಲ, ಧ್ವಜಾರೋಹಣ ಭಾಲ್ಕಿಯ ಹಿರಿಯ ಶ್ರೀಗಳಿಂದ ಎಂದು ಅಚ್ಚಾಗಿದೆ."

"ಇರಲಿ, ಮಧ್ಯಾಹ್ನ ಸಮ್ಮೇಳನಕ್ಕೆ ಮೊದಲು ಪೂಜ್ಯರಿಂದ ಮಾಡಿಸೋಣ. ಬೆಳಿಗ್ಗೆ ವಿವಾಹ–ದೀಕ್ಷೆ ಹೊಂದುತ್ತಿರುವ ನೀವು ಮಾಡಿರಿ. ಇದೊಂದು ಹೊಸ ಮತ್ತು ಅರ್ಥಗರ್ಭಿತ ಕ್ರಮ ಹಾಕಿಕೊಟ್ಟಂತೆ ಆಗುವುದು" ಎಂದು. ಮರುದಿನ ಬೆಳಿಗ್ಗೆ ಧ್ವಜಾರೋಹಣಕ್ಕೆ ಸಿದ್ಧತೆ ಮಾಡಲು ಹೇಳಿದೆ.

ಬೆಳಿಗ್ಗೆ ಧ್ವಜಾರೋಹಣ ಮಾಡಲು ಬಸವ ಕುಮಾರ್–ಬಸವ ಶ್ರೀ ಅವರನ್ನು ಕರೆದೆವು. ಸಂಕಲ್ಪ ಗೀತೆ ಹಾಡಿ, ಧ್ವಜಾರೋಹಣ ಮಾಡಿ ನಿಂತರು. ಒಂದು ಅವಿಸ್ಮರಣೀಯ ಘಟನೆ ಜರುಗಿತು. ಧ್ವಜವು ಬಿಚ್ಚಿಕೊಳ್ಳುತ್ತಿದ್ದಂತೆಯೇ ಅದರೊಳಗೆ ಕಟ್ಟಲ್ಪಟ್ಟ ಹೂವುಗಳು ಎರಡು ಗುಂಪಾಗಿ ಒಂದು ಗುಂಪು ಬಸವ ಶ್ರೀ ನೆತ್ತಿಯ ಮೇಲೆ ಇನ್ನೊಂದು ಗುಂಪು ಬಸವಕುಮಾರರ ನೆತ್ತಿಯ ಮೇಲೆ ಬಿದ್ದಾಗ ಎಲ್ಲರಿಗೂ ರೋಮಾಂಚನ. ಯಾರಾದರೂ ಮೇಲೆ ನಿಂತು ಉದ್ದೇಶಪೂರ್ವಕವಾಗಿ ಎರಚಿದರೋ ಎಂಬಂತೆ ತಲೆಯ ಮೇಲೆ ಬಿದ್ದು ಮೈಮೇಲೆ ಬಿದ್ದಾಗ ಅನೇಕರ ಬಾಯಲ್ಲಿ ಬಸವಾ', 'ಹಾಯ್' ಎಂಬ ಉದ್ಗಾರ, ಕೆಲವರ ಕಣ್ಣಲ್ಲಿ ಆನಂದ ಭಾಷ್ಪ.

ಎಂಥ ಅದೃಷ್ಟ ಶಾಲಿಗಳು !

ಬಸವಣ್ಣನ ಕೃಪೆ ಎಷ್ಟು ಚಂದ ಹರಿಯಿತು !

ಎಂದು ಒಬ್ಬರಿಗೊಬ್ಬರು ಮಾತನಾಡಿಕೊಂಡರು.

ದೈವೀ ಶಕ್ತಿ ಈ ರೀತಿ ಸಾಕ್ಷ್ಯ ನುಡಿಯುತ್ತದೆ ಎನ್ನಿಸದೆ ?

ಮಾತೃದರ್ಶನ

ನಿನ್ನ ಪೀಳಿಗೆಯು ಕಂಡು ಬೆರಗಾದೆನವ್ವಾ.
ನಿನ್ನ ಬೆಳಗು ಕಂಡು ಮಾರುಹೋದೆನವ್ವಾ.
ನಿನ್ನ ಕಳೆಯು ಕಂಡು ಕರಗಿಹೋದೆನವ್ವಾ
ನಿನ್ನ ದಳವ* ಕಂಡು ಪರವಶಳಾದೆನವ್ವಾ
ನಿನ್ನ ಧವಳ ಕೀರ್ತಿಯು ಕಂಡು ಕೊಂಡಾಡಲರಿಯದೆ ಹೋದೆನವ್ವಾ,
ಮಾತೆ ಮಾತಾಜಿ ಜಗದ್ಗುರು ಜಗನ್ಮಾತೆ !

★ ★ ★

ಹುಟ್ಟು ಜಂಗಮದ ಭ್ರಾಂತಿ ಬಿಡಿಸಿದೆ
ಲಿಂಗತತ್ತ್ವದ ಗುಟ್ಟ ಅರುಹಿದೆ
ಬಸವ ತತ್ತ್ವದ ಸತ್ಯ ತೋರಿದೆ.
ವಚನ ಸಾಹಿತ್ಯದ ಸಿಹಿಯು ಸುರಿಸಿದೆ
ನಾರಿಯ ಬಂಧನವ ಹರಿಸಿದೆ
ಸ್ವರ್ಗಕ್ಕೆ ದಾರಿಯು ತೋರಿಸಿದೆ
ಮಾತೆ ಮಾತಾಜಿ ಜಗದ್ಗುರು ಮಾತೆ ಮಹಾದೇವಿ

★ ★ ★

ಸಂಸಾರಿಯಾಗ ಬೇಕೆಂದೊಡೆ
ಮಾತಾಜಿಯುವರ ಕೈಯಲ್ಲಿ ಮದುವೆಯಾಗುವುದು
ಸನ್ಯಾಸಿಯಾಗ ಬೇಕೆಂದೊಡೆ
ಮಾತಾಜಿಯುವರ ಕೈಯಲ್ಲಿ ಜಂಗಮ ದೀಕ್ಷೆ
ಪಡೆದು ಲಿಂಗಯ್ಯನೊಡಗೂಡುವುದು

ರಚನೆ–**ಶ್ರೀಮತಿ ಗಂಗಮ್ಮ ಹೊಸಮನಿ**
ಎಂ. ಎ. ಬಿಎಡ್. ಎಲ್. ಎಲ್. ಬಿ
ಶಿಕ್ಷಕಿ, ಇಲಕಲ್

[ಶರಣೆ ಗಂಗಮ್ಮನವರು ಮೊಟ್ಟ ಮೊದಲ ಬಾರಿಗೆ ರಾಷ್ಟ್ರೀಯ ಬಸವ ದಳದ* ಸಮಾವೇಶ ಮತ್ತು ಶರಣ. ಬಸವಕುಮಾರ್ ಪಾಟೀಲರ ವಿವಾಹದಲ್ಲಿ ಭಾಗಿಗಳಾಗಿ ಆನಂದ ತುಂದಿಲರಾಗಿ ಈ ನುಡಿಗಳನ್ನು ಹೆಣೆದಿದ್ದಾರೆ.]

ಸಂಗ್ರಹ–**ಶರಣೆ. ಉಮಾದೇವಿ**

ಬಸವ ಜಯಂತಿಯ ಶುಭಾಶಯುಗಳು

ವಿಶ್ವಗುರು ಬಸವಣ್ಣನವರ 889ನೆಯ ಜಯಂತಿಯು ದಿನಾಂಕ 12-5-1994 ರಂದು ಒದಗಿ ಬಂದಿದ್ದು, ಎಲ್ಲರಿಗೂ ಬಸವ ಜಯಂತಿ ಶುಭಾಶಯ ಕೋರುತ್ತೇವೆ. ಬಸವ ಶಕೆ 889 ತಮ್ಮೆಲ್ಲರಿಗೂ ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತನ್ನು ನೀಡಲೆಂದು ಹಾರೈಸುತ್ತೇವೆ. ಎಲ್ಲರೂ ಅತ್ಯಂತ ಭಕ್ತಿಪೂರ್ವಕವಾಗಿ ಬಸವ ಜಯಂತಿಯನ್ನು ಆಚರಿಸುವಿರಾಗಿ ನಿರೀಕ್ಷಿಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 [ವಿಧಿ 8]

1. ಪ್ರಕಟಣೆಯ ಸ್ಥಳ	– ಬೆಂಗಳೂರು.
2. ಪ್ರಕಟಣೆಯ ನಿಯತಕಾಲಿಕತೆ	– ಮಾಸಿಕ.
3. ಮುದ್ರಕರ ಹೆಸರು	– ಸೋದರಿ ಕಸ್ತೂರಿ.
ಭಾರತದ ಪ್ರಜೆಯೆ ?	– ಹೌದು.
ವಿಳಾಸ	– ಪ್ರಭುದೇವ ಮುದ್ರಣಾಲಯ ಬಸವ ಗಂಗೋತ್ರಿ, ಕುಂಬಳಗೋಡು
4. ಪ್ರಕಾಶಕರ ಹೆಸರು.	– ಬಿ. ಶಂಭುಲಿಂಗಯ್ಯ
ಭಾರತದ ಪ್ರಜೆಯೇ	– ಹೌದು
ವಿಳಾಸ	– ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ, ರಾಜಾಜಿನಗರ, ಬೆಂಗಳೂರು-560010
5. ಸಂಪಾದಕರ ಹೆಸರು	– ಬಿ. ಶಂಭುಲಿಂಗಯ್ಯ,
ಭಾರತದ ಪ್ರಜೆಯೇ ?	– ಹೌದು
ವಿಳಾಸ	– ಬಸವ ಮಂಟಪ, ರಾಜಾಜಿನಗರ ಬೆಂಗಳೂರು–560010
6. ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಭಂಡವಾಳ ಶೇ 1 ಕ್ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	– ವಿಶ್ವಕಲ್ಯಾಣ ಮಿಷನ್ [ರಿಜಿಸ್ಟರ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್] ಬಸವ ಮಂಟಪ, ರಾಜಾಜಿನಗರ ಬೆಂಗಳೂರು–560010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು, ನಾನು ಬಿ. ಶಂಭುಲಿಂಗಯ್ಯ ಘೋಷಿಸುತ್ತೇನೆ.

ಪ್ರಕಾಶಕ
ಬಿ. ಶಂಭುಲಿಂಗಯ್ಯ
ಕಲ್ಯಾಣ ಕಿರಣ, ಬೆಂಗಳೂರು–10

ದಿನಾಂಕ 1–3–1994

ಸರಳತೆಯ ಸಾಕಾರ

ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿ

ಬೆಳಗಾಂವ ನಗರದಲ್ಲಿ ನಡೆದ ವಿಶ್ವಧರ್ಮ ಪ್ರವಚನ ಕಾರ್ಯಕ್ರಮ ಅದ್ಭುತವಾಗಿ ಯಶಸ್ವಿಯಾಯಿತು. ವಿದ್ಯಾವಂತರು–ಬುದ್ಧಿ ಜೀವಿಗಳು ಹೆಚ್ಚಾಗಿ ಬರುತ್ತಿದ್ದ ಕಾರ್ಯಕ್ರಮ ಅಪಾರ ಜನ ಮೆಚ್ಚುಗೆ ಗಳಿಸಿತು.

ಪ್ರವಚನವು ಮುಗಿಯುವ ಹಂತದಲ್ಲಿತ್ತು. ರಾಷ್ಟ್ರೀಯ ಬಸವ ದಳದ ಮತ್ತು ಇನ್ನಿತರ ಕೆಲವು ಗಣ್ಯರು ಬಂದು ಪೂಜ್ಯ ಅಪ್ಪಾಜಿಯವರೊಡನೆ ಚರ್ಚಿಸುತ್ತಿದ್ದರು. ಮುಕ್ತಾಯ ಸಮಾರಂಭದಲ್ಲಿ ಸನ್ಮಾನ ಪತ್ರವನ್ನು ಸಮರ್ಪಿಸುವ ಬಯಕೆಯನ್ನು ಅವರು ಮುಂದಿಟ್ಟರು. ಪೂಜ್ಯ ಅಪ್ಪಾಜಿ ಹೇಳಿದರು, "ಅದೆಲ್ಲ ಏಕೆ ?"

"ನಮ್ಮ ಭಕ್ತಿ-ಅಭಿಮಾನ ವ್ಯಕ್ತಪಡಿಸಲು."

"ಪ್ರವಚನ ಕೇಳಿ, ಸಹಾಯ ಸಲ್ಲಿಸಿ, ಸೇವೆಮಾಡಿ ವ್ಯಕ್ತಪಡಿಸಿದ್ದೀರಲ್ಲ ಸಾಕು.... ಸುಮ್ಮನೆ ಪ್ರಿಂಟಿಂಗ್, ಪೇಪರ್ ಮುಂತಾಗಿ ಏಕೆ ವೃಥಾ ಖರ್ಚು. ಮುದ್ರಣಗೊಂಡ ಪ್ರತಿಗಳನ್ನು ಓದಿ ಜನ ವ್ಯರ್ಥ ಮಾಡುತ್ತಾರೆ."

"ಹಾಗಾದರೆ ನಮ್ಮ ಧನ್ಯವಾದ ವ್ಯಕ್ತಪಡಿಸುವುದೆಂತು.?"

"ಹಾಗೋ? ಹಾಗಾದರೆ ನೀವು ನಿಮ್ಮ ಭಾವನೆಗಳನ್ನು ಕ್ರೋಡೀಕರಿಸಿ ಬರೆದು, ಒಳ್ಳೆಯ ಹಸ್ತಬರಹ ಇರುವವರ ಕೈಲಿ ಅಂದವಾಗಿ ಬರೆಸಿ, ಅರ್ಪಿಸಿ ಬಿಡಿರಿ. ನಂತರ ಕಲ್ಯಾಣ ಕಿರಣದಲ್ಲಿ ಮುದ್ರಿಸಿದಾಗ ಎಲ್ಲರಿಗೂ ಮುಟ್ಟುವುದು."

ಬಂದವರಿಗೂ ಒಪ್ಪಿಗೆಯಾಯಿತು. ಅದೇ ರೀತಿ ಬೆಳಗಾಂ ಶರಣರು ಸಾರ್ವ–ಜನಿಕರ ಪರವಾಗಿ ಒಂದು, ರಾಷ್ಟ್ರೀಯ ಬಸವ ದಳದ ಪರವಾಗಿ ಒಂದು ಬಿನ್ನವತ್ತಳೆಯನ್ನು ಸಿದ್ಧಪಡಿಸಿ ಸಮರ್ಪಿಸಿದರು. ಅತ್ತೂ ಕರೆದು, ಹಣ ಕೊಟ್ಟು ಪದವಿ, ಗೌರವ ಪಡೆಯುವ, ಸನ್ಮಾನ ಮಾಡಿಸಿಕೊಳ್ಳುವ ಸ್ವಾಮಿಗಳು ಮಠಾಧೀಶರು ಪೂಜ್ಯ ಅಪ್ಪಾಜಿಯವರ ಸರಳತೆ–ನಿಸ್ವಾರ್ಥಗಳ ಮುಂದೆ ತುಂಬಾ ಸಣ್ಣವರಾಗಿ ನನಗೆ ಕಂಡರು.

ಮುದ್ರಿಸುವ ಪೇಪರ್ ಸಹ ವ್ಯರ್ಥವಾಗಬಾರದೆಂಬ ದೂರಾಲೋಚನೆ ಪೂಜ್ಯರದು.

—ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ

KALYANA KIRANA - monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560 074.
Phone : 8437234

ಮುಂಬಯಿ ನಗ… …ರ್ಯಕ್ರಮ

ಮಹಾರಾಷ್ಟ್ರದ ರಾಜಧಾನಿ ಮುಂಬೈ ನಗರದಲ್ಲಿ "ಬಸವ ಜಯಂತಿ" ನಿಮಿತ್ತ ವಿಶೇಷ ಕಾರ್ಯಕ್ರಮಗಳಿದ್ದು, **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**ಯವರು ದಿ. 15–5–1994 ರಂದು ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಿದ್ದಾರೆ. ಆದ್ದರಿಂದ ಮುಂಬೈ ನಗರದಲ್ಲಿ ವಾಸವಾಗಿದ್ದು ಆಸಕ್ತರಾದ ಶರಣ ಬಂಧುಗಳು ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ.

ಕಾರ್ಯಕ್ರಮದ ಸ್ಥಳ, ಸಮಯ ಮುಂತಾದ ವಿವರಗಳಿಗೆ ಕೆಳಕಂಡ ವಿಳಾಸ ಮತ್ತು ದೂರವಾಣಿ ಮೂಲಕ ಸಂಪರ್ಕಿಸಬಹುದು.

ಶರಣ. ಎಂ. ಎಂ. ಕೋರಿ, ಅಧ್ಯಕ್ಷರು, ದೂ. 6145261, 6147527.	**ದುಂಡೇಶ ಗಲಗಲಿ,** ಕಾರ್ಯದರ್ಶಿ ದೂ. 4091223, 2236475

– ಕಾರ್ಯಕ್ರಮ ಏರ್ಪಡಿಸಿರುವ ಸಂಸ್ಥೆ –

Basaveswara Philosophical and Cultural Society
Basava Mantapa, Yasho Niwas, I Floor
Station Avenue Road, Chembur.
BOMBAY–400071

ಬೆಂಗಳೂರಿನ ನಗರ್ತ ಪೇಟೆಯಲ್ಲಿರುವ ಶ್ರೀ ನಗರೇಶ್ವರ ದೇವಾಲಯದಲ್ಲಿ "ಬಸವ ಜಯಂತಿ" ಕಾರ್ಯಕ್ರಮ

ಕರ್ನಾಟಕದ ರಾಜಧಾನಿ ಬೆಂಗಳೂರು ನಗರದ ನಗರ್ತ ಪೇಟೆಯಲ್ಲಿರುವ ಶ್ರೀ
ನಗರೇಶ್ವರ ದೇವಾಲಯದಲ್ಲಿ **"ಬಸವ ಜಯಂತಿ"** ಕಾರ್ಯಕ್ರಮ ಏರ್ಪಡಿಸಲಾಗಿದೆ.
ಬಸವ ಜಯಂತಿಯ ದಿ. 12–5–1994 ರಂದು ವಿಶೇಷ ಪೂಜೆ, ತೊಟ್ಟಿಲು ಕಾರ್ಯ
ಕ್ರಮ ಇರುವುದು. ಸಾರ್ವಜನಿಕ ಸಮಾರಂಭ ಮತ್ತು ಮೆರವಣಿಗೆ–ಪಥ ಸಂಚಲನ
ವನ್ನು ಭಾನುವಾರ ದಿ. 15–5–1994 ರಂದು ಏರ್ಪಡಿಸಲಾಗಿದೆ, ಬೆಳಿಗ್ಗೆ 7–30
ಕ್ಕೆ ಬಸವೇಶ್ವರ ಪೂಜಾವ್ರತವಿದೆ. 9 ಗಂಟೆಗೆ ಉತ್ಸವವು ಶ್ರೀ ನಗರೇಶ್ವರ ದೇವಾ
ಲಯದಿಂದ ಹೊರಟು ಮುಖ್ಯ ರಸ್ತೆಗಳಲ್ಲಿ ಸಂಚರಿಸಿ ಬರುವುದು. ಉತ್ಸವದೊಡನೆ
ಶರಣ ಬಂಧುಗಳು ಸ್ಕಾರ್ಫ್ ಧರಿಸಿ, ಧ್ವಜ ಹಿಡಿದು ಪಥ ಸಂಚಲನ ಮಾಡಬೇಕಾಗಿದೆ.
ಪಥ ಸಂಚಲನ ಹೊರಡುವ ಮೊದಲು ಅಲ್ಪ ಪ್ರಸಾದ (ಉಪಾಹಾರ)ದ ವ್ಯವಸ್ಥೆ,
ನಂತರ ಮಹಾಪ್ರಸಾದ (ಊಟ)ದ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಪಥ ಸಂಚ
ಲನದ ಮಾರ್ಗ ಮಧ್ಯದಲ್ಲಿ ಅಲ್ಲಲ್ಲಿ ತಣ್ಣೀರು, ಮಜ್ಜಿಗೆ–ಪಾನಕಗಳ ವಿತರಣಾ ವ್ಯವಸ್ಥೆ
ಇದೆ. ಮಧ್ಯಾಹ್ನದ ನಂತರದ ಕಾರ್ಯಕ್ರಮದಲ್ಲಿ ಅನೇಕ ಪೂಜ್ಯರು, ಸಾಹಿತಿಗಳು
ಭಾಗವಹಿಸಿ **"ಬಸವ ಸಂದೇಶ"** ಕುರಿತು ಹೇಳಲಿದ್ದಾರೆ.

ಆದ್ದರಿಂದ ಅತ್ಯಧಿಕ ಸಂಖ್ಯೆಯಲ್ಲಿ ಬಸವ ತತ್ತ್ವಾನುಯಾಯಿಗಳು ಪಥ ಸಂಚಲನದಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.

ರಾಷ್ಟ್ರೀಯ ಬಸವ ದಳ, ಬೆಂಗಳೂರು … ಭಕ್ತವೃಂದ, ನಗರ್ತಪೇಟೆ

